ಬೆಲೆ: ಎರಡು ಆಣೆ

ಕರ್ಮವೀರ

ಸಂಪಾದಕರು.
ದೇ. ರಾ. ಪುರೋಹಿತ, [illegible]

ಅಖಿಲ ಕರ್ನಾಟಕದಲ್ಲಿ ಅತ್ಯಂತ ಜನಪ್ರಿಯ ವಾರಪತ್ರಿಕೆ

Editor
H. R. Purohit, [illegible]

ಸಂಪುಟ ೧೯] ಹುಬ್ಬಳ್ಳಿ ಸೋಮವಾರ ತಾರೀಖು ೫—೫—೧೯೪೭ [ಸಂಚಿಕೆ [illegible]

ಏಶ್ಯನ್ ಜನಾಂಗಗಳ ಸಮ್ಮೇಳನದ ಅರ್ಥ

ಲೀಗ್ ಮತ್ತು ಪಾಶ್ಚಾತ್ಯ ಜನಾಂಗಗಳ ಭೀತಿಯ ಮೂಲ—ಭಾವೀ ಜಗತ್ತಿನಲ್ಲಿ ಏಶಿಯಾದ ಸ್ಥಾನ

ಪಂಡಿತ ಮುಳಿಯ ತಿಮ್ಮಪ್ಪಯ್ಯನವರಿಂದ

೧

ಪಂಡಿತ ಜವಾಹರಲಾಲರು ನಮ್ಮ 'ಇಂಟರಿಮ್' ಸರಕಾರದ ಪ್ರಧಾನರಾದೊಡನೆ ಅವರ ತೈಲ ಬುದ್ಧಿ ಸುತ್ತುಮುತ್ತಲೂ ಗುರಿಗೊಂಡು ಪಸರಿಸಲಾರಂಭಿಸಿತು. ಅವರ ನಾನಾ ಮುಖವಾದ ಗುರಿಗಳನ್ನು, ಗುರಿಗಳಿಗನುವಾದ ಪೂರ್ವಸಿದ್ಧತೆಗಳನ್ನು, ಸಿದ್ಧತೆಗಳಂತೆ ದೇಶಕಾಲಗಳನ್ನೊಂದಿ ರೂಪಿಸುವ ಕಾರ್ಯಕಲಾಪಗಳನ್ನು, ಪ್ರಪಂಚವೀಗ ಕ್ರಮವಾಗಿ ಪರಾಂಬರಿಸುತ್ತಿದೆ. ಅಂಥ ಕಾರ್ಯಕಲಾಪಗಳೊಳಗೆ, ಈಗ ಕೊನೆಗಂಡಿರುವ ಏಶ್ಯನ್ ಜನಾಂಗಗಳ ಸಮ್ಮೇಳನವೆಂಬುದೂ ಒಂದು. ಜವಾಹರಲಾಲರೆಂದರೆ "ಕರ್ಮಣ್ಯೇವಾಧಿಕಾರಸ್ತೇ" ಎಂಬ ಗೀತೋಕ್ತಿಯನ್ನು ಲೋಕಕ್ಕೆ ಹಾಡಿ ಬೋಧಿಸುವ ಮಹಾತ್ಮಾ ಗಾಂಧಿಯವರ ಪಟ್ಟಶಿಷ್ಯರಷ್ಟೆ. ಆದರೆ, "ಮಾ ಫಲೇಷು ಕದಾಚನ" ಎಂಬ ಮುಂದಿನ ಭಾಗವನ್ನು ಒಂದಿಷ್ಟು ಟಿಪ್ಪಣಿಯೂ ಇಲ್ಲದೆ ಅವರು ಅಂಗೀಕರಿಸಲಾರರು. ಮಾಡಿದ ಕರ್ಮ ಫಲವು ತನಗೊದಗಬೇಕೆಂಬ ಸ್ವಾರ್ಥಾಭಿಲಾಷೆ ಅವರಿಗಿಲ್ಲ; ಆದರೆ ಅದು ತಮ್ಮ ಹುಟ್ಟೂರಿಗೆ ಅಥವಾ ಪ್ರಪಂಚಕ್ಕೆ ಒದಗಲೇ ಬೇಕು. ತಾವು ಪ್ರಪಂಚದ ಒಂದಂಗವಾಗಿರುವುದೇ ಇದಕ್ಕೆ ಕಾರಣ. ಈ ರೀತಿಯ ವ್ಯಾಖ್ಯಾನದೊಡನೆ ಸ್ವಾರ್ಥಾಭಿಲಾಷೆಯನ್ನುಳಿದ 'ನೂತನ ಕರ್ಮಯೋಗಿ' ಎಂದು ಪಂಡಿತ ಜವಾಹರಲಾಲರನ್ನು ಕರೆಯಬೇಕು. ಅವರು ಜ್ಞಾನ ವಿಜ್ಞಾನಗಳಲ್ಲೆರಡಲ್ಲೂ ನಿಷ್ಣಾತರಾಗಿರುವುದೇ ಅದಕ್ಕೆ ಕಾರಣ. ಅವರ ಅಧಿಕಾರಾರೋಹಣವಾದೊಡನೆ ಈ ಸಮ್ಮೇಳನದ ಸನ್ನಾಹಗಳೂ ಸಾಗುತ್ತಲೇ ಇದ್ದುವು. ಉದ್ದೇಶದಂತೆ ಸಮ್ಮೇಳನವದು ಕಳೆದ ತಾ. ೨೩—೩—೧೯೪೭ರಂದು ಪ್ರಾರಂಭವಾಗಿ ತಾ. ೨-೪-೧೯೪೭ ರಂದು ಕೊನೆಗಂಡಿತು.

ನಮ್ಮ ಏಶ್ಯ ಖಂಡದೊಳಗಿನ ಹೊರಗಿನಿಂದ ಜಪಾನೊಂದನ್ನು, ಒಳಗಿನಿಂದ ಮುಸ್ಲಿಮ್ ಲೀಗೊಂದನ್ನುಳಿದು ಬೇರೆ ಬೇರೆ ಜನಾಂಗಗಳ ಪ್ರತಿನಿಧಿಗಳೆಲ್ಲರೂ ಬಂದಿದ್ದರು. ಏಶ್ಯ ಖಂಡದೊಳಗಿನ ೨೩ ದೇಶಗಳಿಂದ ೨೫೦ ಪ್ರತಿನಿಧಿಗಳು ಆಗಮಿಸಿದ್ದರಂತೆ. ಕಡೆಗೆ ಮಹಾತ್ಮಾ ಗಾಂಧಿಯವರು ಬರುವಲ್ಲಿ ಸಭೆಗೆ ಸಭೆಯೇ ಎದ್ದು ನಿಂತು ಅವರನ್ನು ಬಹುಮಾನಿಸಿತು. ಜಪಾನು ಇನ್ನೂ ಒಂದು ಬಗೆಯಲ್ಲಿ ಬದ್ಧವಾಗಿರುವುದರಿಂದ ಅಲ್ಲಿಯ ಪ್ರತಿನಿಧಿಗಳಿಗೆ ಬರಲಾಗಲಿಲ್ಲ. ಅದು ಪ್ರತಿನಿಧಿಗಳೊಳಗೆ ಕೆಲವರಿಗೆ ಸಮ್ಮತವಾದರೂ ಹಲವರಿಗೆ ಬೇಸರಿಕೆಯನ್ನುಂಟು ಮಾಡಿದಂತೆ ತಿಳಿದುಬರುತ್ತಿದೆ. ಜವಾಹರಲಾಲರು ಆ ವಿಷಯದಲ್ಲಿ ಹೆಚ್ಚಾಗಿ ಏನನ್ನೂ ಆಡಲಿಲ್ಲ.

೨.

ಈ ಸಂದರ್ಭದಲ್ಲಿ 'ಮುದ್ದಣ'ನ ರಾಮಾಶ್ವಮೇಧದ ಆದಿ ಭಾಗದಲ್ಲಿರುವ "ಉಳಿಗ (ಶಕುನದ ಹಕ್ಕಿ) ನೊಂದು ಸಗುಣನುಡಿಗುಂ" ಎಂದು ವರ್ಣಿಸಿದ ಮಾತು ನೆನಪಾಗುತ್ತಿದೆ. "ಈ ಪ್ರಯತ್ನವೆಲ್ಲ ಹಿಂದೂ ಕಾಂಗ್ರೆಸ್ಸಿನ ಮೇಲ್ಮೆಯನ್ನು ಪ್ರಚುರಗೊಳಿಸಲಿಕ್ಕಾಗಿ; ಅವರ ರಾಜಕೀಯ ಶಕ್ತಿಯುಕ್ತಿಗಳನ್ನು ನೆಲೆಗೊಳಿಸಲಿಕ್ಕಾಗಿ; ಏಶ್ಯ ಖಂಡದೊಳಗಿನ ಜನಾಂಗಗಳ ಒಲವನ್ನೆಲ್ಲ ತನ್ನ ಕಡೆಗೇ ಸೆಳೆಯಲಿಕ್ಕಾಗಿ" ಎಂಬುದೇ ಆ ಶಕುನದ ಮಾತು ಆ ಹಕ್ಕಿ, ಈಗ ಕೆಲಕಾಲದಿಂದ ಈ ಮಾತನ್ನು ಆಡುತ್ತಿದ್ದುದು ಮಾತ್ರವೇ ಅಲ್ಲ; ತನ್ನಿಂದಾಗುವ ಪ್ರಯತ್ನವನ್ನೆಲ್ಲ ಒಳಗೊಳಗಿನಿಂದಲೇ ಮಾಡುತ್ತಿದ್ದುದೂ ಗೊತ್ತಾಗಿದೆ. ಆದರೇನು? ಪಂಡಿತರ ಕೈವಾಡವನ್ನು, "ಮನಸ್ಯೇಕಂ ವಚಸ್ಯೇಕಂ ಕರ್ಮಣ್ಯೇಕಂ" ಎಂಬ ಸತ್ಯದ ಹುರುಪನ್ನದಕ್ಕೆ ತಡೆಯಲಾಗಲಿಲ್ಲ. ಪ್ರಥಮ ಸಮ್ಮೇಳನವದು ನಿರಾಬಾಧವಾಗಿ ನೆರೆಯಿತು; ಸಾಂಗವಾಗಿ ನೆರವೇರಿತು. ಅಷ್ಟೇ ಅಲ್ಲ; ಏಶ್ಯ ಜನಾಂಗ ಸಂಘವದು ಶಾಶ್ವತವಾಗಿ ನೆಲೆಗೊಳ್ಳಬೇಕು; ಅದರ ದ್ವಿತೀಯ ಸಮ್ಮೇಳನವು ಬರುವ ೧೯೪೯ನೇ ಇಸವಿಯಲ್ಲಿ ಚೀನದೊಳಗೆ ನಡೆಯಬೇಕು, ಎಂಬುದೂ ಮಾನ್ಯವಾಯಿತು. ಈ ಶಕುನದ ಹಕ್ಕಿ ಎಂದರೆ ಏನೆಂಬುದು ವಾಚಕರಿಗೆ ಗೊತ್ತಾಗಿದೆ ಎನ್ನುವ.

ನಮ್ಮ ರಾಷ್ಟ್ರೀಯ ಸಭೆಯ ಆದಿನಿಂದಿಂದಿನವರೆಗಿನ ಸ್ವರೂಪವು ಪ್ರಪಂಚದ ಸಮ್ಮುಖದಲ್ಲಿದೆ. ಅದನ್ನು ಹಿಂದೂ ಕಾಂಗ್ರೆಸ್ಸ ಎಂದು ಎಡೆಬಿಡದೆ ಆಡುತ್ತಾ ಇರುವುದೇಕೆ? ಪ್ರಪಂಚಕ್ಕೆ ಅದು ಪರಿಚಯವಾಗಿಲ್ಲವೆ? ಮತಭೇದವಿಲ್ಲದೆ ಹಿಂದುಸ್ಥಾನದ ಪ್ರಮುಖ ವ್ಯಕ್ತಿಗಳೊಳಗೆ ಹಲವರು— ಯಾಕೆ?— ಆದಿಯಲ್ಲಿ ಪಾಶ್ಚಾತ್ಯ ಮಹನೀಯರು ಅದಕ್ಕೆ ಅಧ್ಯಕ್ಷರಾಗಿದ್ದರು. ಅದರ ಸದಸ್ಯರಾಗಿರುವುದಕ್ಕೂ ಮತದ ಕೋಲು ಬೇಲಿಗಳಿಲ್ಲ. ಅದರಿಂದ, ಹಾಗೆ ಕೀಳುಗಳೆದು ಅಂಗೈ ತೋರಿಸಿ ಅವಲಕ್ಷಣ ಹೇಳಿಸಿಕೊಳ್ಳಲಾಗದೆಂದು ವಿನಯದಿಂದ ನಿವೇದಿಸುತ್ತೇನೆ. ಸಮ್ಮೇಳನಕ್ಕೆ, ಅರೇಬಿಯಾ ಈಜಿಪ್ತ ಅಫಗಾನಿಸ್ತಾನ ಮೊದಲಾದ ಮುಸ್ಲಿಮ್ ಜನಾಂಗಗಳ ಬೇರೆ ಬೇರೆ ಪ್ರತಿನಿಧಿಗಳೂ ಬಂದಿದ್ದಾರೆ. ಯಾರೂ ಆ ಹಕ್ಕಿಯ ಹಾಡಿಗೆ ಕಿವಿಗೊಡದುದರಿಂದ ಮೇಲಿನ ಗಾದೆಯನ್ನು ಕಾರ್ಯರೂಪದಲ್ಲಿ ಕಾಣಿಸಿದಂತೆಯೇ ಆಯಿತು.

ಬಹುಶಃ ಹಿಂದುಸ್ಥಾನದಿಂದ ಹೊರಗಿನ ಮುಸ್ಲಿಮ್ ಜನಾಂಗಗಳ ಪ್ರತಿನಿಧಿಗಳು ಹಲಮಂದಿ ಏಶ್ಯನ್-ಸಮ್ಮೇಳನಕ್ಕೆ ಬಂದುಬಿಟ್ಟುದನ್ನು ಭಾವಿಸಿ ಶ್ರೀ. ಜಿನ್ನಾ ಸಾಹೇಬರಿಗೆ ಒಂದಿಷ್ಟು ನಾಚಿಕೆಯಾದಂತೆ ಭಾಸವಾಗುತ್ತಿದೆ. ಹೊರಗಿನ ಮುಸ್ಲಿಮ್-ಪ್ರತಿನಿಧಿಗಳೊಡನೆ "ಈ ಏಶ್ಯನ್-ಜನಾಂಗಗಳ ಸಮ್ಮೇಳನವೆಂಬುದೇನೋ ಅವಶ್ಯಕವೇ. ಆದರೆ, ಈ ಹಿಂದುಸ್ಥಾನವೆಂಬ ಉಪಖಂಡವೀಗ ಅಸಹ್ಯ ವೇದನೆ-ವರ್ತನೆಗಳಿಂದಾಗಿ ಕಂಡ ಬಟ್ಟೆಯಲ್ಲಿ ಕಾಲಿಡುತ್ತಾ ಇದೆ. ಉತ್ತಮ ಸಮಯ ಒದಗಿದ ವೇಳೆ ಇದು ಜರುಗಬೇಕಾಗಿತ್ತು" ಎಂದು ತಮ್ಮ ಅರ್ಥ ಸಮ್ಮತಿಯ ದೋಷಜ್ಞತೆಯನ್ನು ಹೊರಗೆಡವಿದರಂತೆ. ಈ ಸಂದರ್ಭದಲ್ಲಿ ಮಹಾತ್ಮಾ ಗಾಂಧಿಯವರು ಸಮ್ಮೇಳನದ ಕಡೆಯಲ್ಲಿ ದರ್ಶನವಿತ್ತು ಪ್ರತಿನಿಧಿಗಳನ್ನು ಕುರಿತು, ಕೊಟ್ಟ ಸಂದೇಶ ಪಾಠವನ್ನು ಹೀರಬೇಕು:— "ಶ್ರೀ. ಜವಾಹರಲಾಲರ ವಿಶ್ವಪ್ರಯತ್ನದಿಂದ ತಲೆದೋರಿನ ಸಮ್ಮೇಳನವಿದು ನಿಯಮಬದ್ಧವಾಗಿ ಸಾಗುತ್ತಲೇ ಇರಬೇಕು— ನಮ್ಮ ಈ ಪೌರ್ವಾತ್ಯ ಜನಾಂಗಗಳ ಏಕಾಗ್ರವಾದ ಪ್ರಪಂಚಶಾಂತಿಕೋದ್ದೇಶವು ಪಾಶ್ಚಾತ್ಯ ಜನಾಂಗಗಳ ಎದೆಯಲ್ಲಿ ಅಚ್ಚೊತ್ತಬೇಕು. ನಾವು ಜ್ಞಾನವನ್ನು ಶಾಸ್ತ್ರದೃಷ್ಟಿಯಿಂದ ಕಂಡ ಕಾಣಿಸಿದ ಜನಾಂಗದ ಪೀಳಿಗೆಯವರಾದರೆ, ಅವರು ವಿಜ್ಞಾನ ಬಲ-ಫಲಗಳನ್ನು ಕಾರ್ಯಮೂಲಕವಾಗಿ ಅನುಭವಗೊಳಿಸುವವರ ಸಂತತಿಯವರು. ಜ್ಞಾನವೇ ಸತ್ಯ, ಸತ್ಯವೇ ಪರಮಾತ್ಮ ಎಂದು ಮನಗಂಡವರ ವಂಶೀಯರು ನಾವಾದರೆ, ಅವರು ಅದನ್ನು ಸಂದೇಹದೃಷ್ಟಿಯಿಂದ ನೋಡುವವರು. ಆ ಸಂದೇಹದಿಂದಾದರೂ ಅವರು ವಿಜ್ಞಾನ ಬಲದಿಂದ ಸತ್ಯವನ್ನೇ ಅರಸುತ್ತಾ ಬಂದು ಇತ್ತೀಚೆಗೆ ಅಣುಬಾಂಬನ್ನು ಕಂಡು ಹಿಡಿದಿದ್ದಾರೆ. ನಾವು ಅಣುವಾದ ಮನಸ್ಸನ್ನು ಶುದ್ಧೀಕರಿಸಿಕೊಂಡೇ ಸರ್ವಕಾರ್ಯಗಳನ್ನು ಜರುಗಿಸಬೇಕೆಂದು ಸಾರುವ ಜ್ಞಾನನೇತ್ರರ ಬಳಗದವರಾದರೆ ಅವರು ಕಂಡುಹಿಡಿದ ಅಣುಬಾಂಬನ್ನು ಹಾಗೇ ಪ್ರಪಂಚದ ಒಂದು ಭಾಗದಲ್ಲಿ ಕೆಡರಿ ಪರಿಣಾಮವನ್ನು ಪರಾಂಬರಿಸುತ್ತ ಈಗ ಕಂಗಾಲಾಗಿದ್ದಾರೆ. ಮನಸ್ಸೆಂದರೆ ಉದಾತ್ತ, ಜ್ಞಾನಶುದ್ಧವಾಗಿ ಧರ್ಮಪ್ರಪಂಚದಲ್ಲಿ ಪ್ರಯೋಗಿಸಬೇಕಾದ ಪರಮಾಣು. ಅಂಥ ಮನಃಪರಮಾಣುವಿನಿಂದ ಶುದ್ಧೀಕೃತವಾದರೆ ಮಾತ್ರವೇ ಈ ಪ್ರಕೃತಿಸಂಭೂತವಾದ ಅಣುಬಾಂಬು ಪರಿಶುದ್ಧವಾಗಿ ಅಮೃತರೂಪ ಚೈತನ್ಯದಾಯಕವಾಗುವುದು. ಅಲ್ಲವಾದರೆ ಅದು ವಿಷಕಲ್ಪವಾಗಿ ಪ್ರಳಯಕಾರಕವೆನ್ನಿಸುವುದು. ಈಗ ಅವರೊಡನೆ ಗಲಭೆಗೊಂಡ ಪೌರ್ವಾತ್ಯರಾದ ನಾವು ಮನಃಪರಮಾಣು ನೇತ್ರವನ್ನು ಪರಿಶುದ್ಧೀಕರಿಸಬೇಕು. ಅದರಿಂದಲೇ ಜ್ಞಾನ ಅಥವಾ ಸತ್ಯದ ನಾಮಾಂತರವಾದ ಪರಮಾತ್ಮತತ್ವವನ್ನು ಕಾಣುವಲ್ಲಿ ಸಂಶಯವಿಲ್ಲ. ಹಿಂದುಸ್ತಾನದ ಸಂದೇಶವು ಇದೇ ಎಂದು ನೀವು ನಿಮ್ಮ ನಾಡಿಗೈದಿ ಎತ್ತೆತ್ತಲೂ ಸಾರಬೇಕು," ಎಂಬ ತಾತ್ಪರ್ಯವನ್ನೇ ಘಂಟಾಘೋಷವಾಗಿ ಸಾರಿದ್ದಾರೆ. ಮೇಲೆ ತೋರುವ ಶ್ರೀ ಜಿನ್ನಾಸಾಹೇಬರ ಹೇಳಿಕೆಯನ್ನು ಈ ಸಂದೇಶದೊಡನೆ ಪರಾಂಬರಿಸಿರಿ. "ದ್ರಾಕ್ಷಿ ಹಣ್ಣಾಗುವಲ್ಲಿ ಬಾಯಿ ಹುಣ್ಣು" ಎನ್ನುವ ವ್ಯಕ್ತಿಯು ನೆನಪಾಗುವದಲ್ಲವೆ?

೩.

ಮಹಾತ್ಮರ ಸಂದೇಶದೊಳಗೆ ಇನ್ನೂ ಒಂದು ಅತ್ಯಾವಶ್ಯಕ ಸೂಚನೆ ಇದೆ. "ಹಿಂದುಸ್ತಾನವೆಂದರೆ, ಅವಸರದಲ್ಲಿ ಬಂದ ನೀವು ಮೇಲಿಂದ ಮೇಲೆ ಕಾಣುವ ನಗರಗಳ ನಾಡಿನಲ್ಲಿ ಹೊಳೆದು ತೋರುವುದಲ್ಲ. ಅನವಧಿಗಳಾದ ಹಳ್ಳಿಗಳ ಒಳಹೊಕ್ಕು ಸುಳಿದು ಇಲ್ಲಿಯ ಸಾರವನ್ನು ಹೀರಬೇಕು, ಅರಿಯಬೇಕು. ಹಿಂದುಸ್ತಾನವು, ಪ್ರಪಂಚಾಂಗವಾದುದರಿಂದ ಅದರಂತೆ ಇಂದು ಕ್ಷೋಭೆಗೊಂಡಿದೆ. ಅದರಿಂದ ಹಿಂದುಸ್ತಾನದ ನಾಗರಿಕರೆನ್ನಿಸಿ ನಮ್ಮನ್ನು ಇಂದು ಮಾನ್ಯರು ಎಂದು ಭಾವಿಸುವಂತಿಲ್ಲ; ಕಾಕಪೋಕರು ಎಂದು ಭಾವಿಸಬಹುದು. ಕಾಲಾನುಸಾರವೆನ್ನಿಸಿ ತಾತ್ಕಾಲಿಕವಾಗಿ ಹೀಗಿರುವುದನ್ನೇ ಭಾವಿಸಿ 'ಇದು ಹಿಂದುಸ್ತಾನ' ಎಂದು ಭ್ರಮಿಸಲಾಗದು." ಮುಂದುವರಿಸುತ್ತಾ ಮಹಾತ್ಮರು, ಮುಂದಿನ ಸಮ್ಮೇಳನವನ್ನು ಈ ಹಿಂದುಸ್ತಾನದಲ್ಲೇ ನೆರವೇರಿಸಬೇಕೆಂದು ಪ್ರಾರ್ಥಿಸಿದ್ದಾರೆ. ಎರಡು ವರ್ಷಗಳ ಮೇಲೆ ಇಲ್ಲಿ ಬಂದು ನೆರೆಯುವ ಪ್ರತಿನಿಧಿಗಳು, ಕೆಸರಳಿದು ತಿಳಿನೀರಿನಿಂದ ತುಂಬಿದ ಕೆರೆಯಂತಿರಬಹುದಾದ ಈ ಹಿಂದುಸ್ತಾನದ ಸ್ವರೂಪವನ್ನು ಮೇಲಿಂದ ಮೇಲೆ ನೋಡಿ ಆನಂದಿಸಬಹುದು. ಬೇಕಾದರೆ ಒಳಗಿಂದೊಳಗೆ ಹೊಕ್ಕು ಹರಿದಾಡಿ ಹುರುಪೇರಲೂಬಹುದು; ಎಂಬ ತಾತ್ಪರ್ಯವೇ ಮಹಾತ್ಮರ ಆ ಪ್ರಾರ್ಥನಾಸಾರವೆಂದು ಭಾವಿಸಬೇಕಾಗಿದೆ. ಬಲ್ಲವರಾದ ಪ್ರತಿನಿಧಿಗಳಿಗೆ ಹಿಂದುಸ್ತಾನದ ವಿಷಯದಲ್ಲಿ ಅಂಥ ಸಂದೇಹವೇ ಇರಲಿಲ್ಲ ಎಂದು ತೋರುತ್ತದೆ. ಅದರಿಂದಲೇ, ಬರುವ ಕ್ರಿ. ಶ. ೧೯೪೯ ನೇ ಇಸವಿಯ ಸಮ್ಮೇಳನವು ಚೀನ ದೇಶದಲ್ಲಿ ನೆರವೇರುವದಾಗಿ ನಿರ್ಧರಿಸಲ್ಪಟ್ಟಿತು.

ಮುಸ್ಲಿಮ್ ಲೀಗಿಗೆ ನಮ್ಮ ರಾಷ್ಟ್ರೀಯ ಸಭೆಯೊಡನೆ ರಾಜಕೀಯ ವಿಷಯದಲ್ಲಿ ಐಕಮತ್ಯವಿಲ್ಲ ಎನ್ನುವ. ಅದಕ್ಕಾಗಿ ಏಶ್ಯಾ ಖಂಡದವರೆಲ್ಲರಿಗೂ ಅತ್ಯಾವಶ್ಯಕವಾಗಿ ನಮ್ಮ ಸಾಮೂಹ್ಯ ಸಂಸ್ಕೃತಿ ಪೋಷಕವಾಗಿರುವ ಈ ಏಶ್ಯನ್ ಸಮ್ಮೇಳನದಲ್ಲಿಯೂ ಸಹಭಾಗಿಯಾಗದ ಮುಸ್ಲಿಮ್ ಲೀಗಿನ ರೀತಿಯನ್ನು ಪರಾಂಬರಿಸುವಲ್ಲಿ "ಅತಿಕ್ರೋಧಂ ಗೃಹಾರಂಭೇ ಅತಿಕ್ರೋಧಂ ಗೃಹಭಂಜನೇ" ಎಂಬ ಮಾತು ನೆನಪಾಗುತ್ತದೆ. "ಮನೆಗೆಟ್ಟಲಾರೆನು; ಕಟ್ಟಿದುದನ್ನು ಮುರಿಯಬಲ್ಲೆನು" ಎಂದೊಬ್ಬನು ಆಡಿದನಂತೆ. ಹಾಗೆ ಮುರಿಯಲಿಕ್ಕೂ ಸಾಧ್ಯವಾಗದ ಮೇಲೆ ಕಟ್ಟಿದ ಮಹೂರ್ತ ಚೆನ್ನಾಗಿಲ್ಲ; ಅದರಿಂದ ಅವಲಕ್ಷಣದ ಮನೆಯಲ್ಲಿ ಒಕ್ಕಲಾಗದಿರುವದೇ ಲೇಸು; ಎಂದನಂತೆ. ಇಂಥ ಶಕುನದ ಹಕ್ಕಿಗೆ ಏನೆನ್ನಬೇಕು?

"ಏಕೋಽಪಿ ದೋಷೋ ಗುಣಸನ್ನಿಪಾತೇ ನಿಮಜ್ಜತೀಂದೋಃ ಕಿರಣೇಷ್ವಿವಾಂಕಃ" ಎಂಬ ಕಾಳಿದಾಸೋಕ್ತಿಯನ್ನೇ ಭಾವಿಸಿಕೊಳ್ಳಬೇಕು.

ಚಂದ್ರನೆಂದರೆ ಅಪಾರವಾದ ಅಮೃತ ಕಿರಣಕ್ಕೆ ಆಶ್ರಯವಾದವನು. ಆದರೆ, ಅಂಥ ಚಂದ್ರನಲ್ಲೇ ಕಲಂಕರೂಪದ ದೋಷವೊಂದಿದೆ. ಸ್ವತೀಯವಾದರೂ ಅಲ್ಪ ದೋಷವದು ಅಪಾರ ಕಿರಣದೆಡೆಯಲ್ಲಿ ಮುಳುಗಿ ಹೋಗುತ್ತಿದೆ. ಏಶ್ಯನ್ ಸಮ್ಮೇಳನದಲ್ಲಿ ಸಹಭಾಗಿಯಾಗದ ಮುಸ್ಲಿಮ್ ಲೀಗಿನ 'ಅವಿನಯ'ವು ವ್ಯಕ್ತವಾಗಿ ನೋಡಿದರೆ ಅದರದೇ ಸರಿ. ಆದರೂ ಸಮಷ್ಟಿಯಾಗಿ ಪರಾಂಬರಿಸಿದಲ್ಲಿ ಅದು ಪೌರ್ವಾತ್ಯರಾದ ನಮಗೆಲ್ಲರಿಗೂ ಸಂಬಂಧಿಸಿದುದಲ್ಲವೆ? ಹೌದು. ಅದರಿಂದ ಪಕೆಯ ಹುಳುಕನ್ನು ಪಾಸಿಗೆಯಲ್ಲಿ ಮುಚ್ಚಿಕೊಳ್ಳಬೇಕಂತೆ.

೪.

ಲೀಗಿನ ಈ ವರ್ತನೆ, ಅವಿನಯ ಎನ್ನುವುದಕ್ಕಿಂತಲೂ, ಅವಿನಯಾಭ್ಯಾಸದಿಂದ ಬೆಳೆದು ಹೋದ ನ್ಯೂನತೆ ಎನ್ನುವುದೇ ವಾಸಿ ಎಂದು ತೋರುತ್ತಿದೆ. ಹಿಂದೆ ಸೂಚಿಸಿದ ಶ್ರೀ. ಜಿನ್ನಾ ಸಾಹೇಬರ ಹೇಳಿಕೆಯಿಂದ ಆ ಭಾವನೆ ಮತ್ತೂ ವ್ಯಕ್ತವಾಗುತ್ತಿದೆ. ಆದರೆ, ಪಾಶ್ಚಾತ್ಯ ಜನಾಂಗಗಳನ್ನು ವಿಶೇಷವಾಗಿ ಅಮೇರಿಕದವರನ್ನು ಈ ಏಶ್ಯನ್ ಜನಾಂಗ ಸಂಸ್ಥೆಯ ಗುರಿ ಏನೋ ಎಂಬ ಸಂಶಯ ಭ್ರಮೆಗಳು ಕಳವಳಗೊಳಿಸಿದುವಂತೆ. ಚಾಂಚಲ್ಯವದು ಸಾಹಜಿಕವೆಂದೇ ಹೇಳಬೇಕಾಗಿದೆ. ಪ್ರಕೃತ, ಅಣು-ಬಾಂಬು ಅವರ ಅಧಿಪತ್ಯಕ್ಕೊಳಗಾಗಿದೆ; ಅದರ ಬಲದಿಂದಲೆ, ಇತ್ತಣ ಪೌರ್ವಾತ್ಯ ಜನಾಂಗಗಳೊಳಗೊಂದಾದ ಜಪಾನನ್ನವರು ಅರೆದು ಹಿಟ್ಟಾಗಿ ಮಾಡಿದರು. ಮಾತ್ರವಲ್ಲ, ಈಗಲೂ ಅದರ ಸಂಕಲೆಗೊಳಗಾಗಿ ಜಪಾನು ಸಂಕಟಗೊಳ್ಳುತ್ತಿದೆ. ಅದರಿಂದಲೆ, ಪೌರ್ವಾತ್ಯ ಜನಾಂಗಗಳ ಒಕ್ಕಟ್ಟು ಎಂದ ಕೂಡಲೆ ಅವರ ಕಣ್ಣೆದುರಿನಲ್ಲಿ ಭೀತಿಕೋದಯವಾಗುವುದು. ಆದರೆ, ಗಾಂಧೀಜಿಯವರ ಸಂದೇಶವನ್ನಾಲಿಸಿದ ಮೇಲೆ ಆ ಭೀತಿಕಳವೀಗ ಮಾಯವಾಗಿರಬಹುದೆಂದು ನಂಬಬಹುದಾಗಿದೆ. ಯಾಕೆಂದರೆ, ವಿಜ್ಞಾನದ ವಿಕೃತ ಸಂಸ್ಕೃತಿಗೊಳಗಾಗಿದ್ದರೂ ಅಲ್ಲಿಯ ಹಲವರಿಗೆ ಮಹಾತ್ಮಾ ಗಾಂಧಿಯವರ ಮಾತಿನಲ್ಲಿ ವಿಶ್ವಾಸವಿದೆ. ಆದರೂ ಬಲವಿನಯದ ತಮ್ಮ ರಾಜಕೀಯ ಪದ್ಧತಿಗೆ ಕಟ್ಟುಬಿದ್ದವರಾದ ಕಾರಣ ಕೆಲವರು, ಬಂದಲ್ಲಿ ಹೋದಲ್ಲಿ ಸಂಶಯದಿಂದ ದಿಗಿಲಾಗುತ್ತಾರೆ. ಎಲ್ಲೆಲ್ಲಿಯೂ 'ಸಂಶಯಾತ್ಮ'ರಾಗಿಯೇ ಇರುವುದು, ವರ್ತಿಸುವುದು ಹಿತಕರವಲ್ಲ ಎಂಬುದನ್ನು ಅಂಥವರ [illegible] ಬಹುದೆ? ಯಾಕೆಂದರೆ, ಈ ಅಣುಗಳ ಬಾಂಬಿನ ಬಲದಿಂದ ಪೌರ್ವಾತ್ಯ ಜನಾಂಗದ ಹೃದಯವನ್ನು [illegible] ವಂತಿಲ್ಲ, ಕಂಗಾಲಾಗುವಂತಿಲ್ಲ; ಅದರ ಸಂಸ್ಕೃತಿಗೆ, ಹುಟ್ಟಿನಿಂದ [illegible] ಪ್ರಕೃತಿಯಾಗಿಯೇ ತೋರುತ್ತದೆ. ಇಂಥ ಕಳವಳ ಗಲಭೆಗಳೆಂಬುವು [illegible] ಅದಕ್ಕೆ ವಿಕೃತಿಯಾಗಿ ಭಾಸವಾಗುವುವು. ಈ ತತ್ವಸಾರವನ್ನೇ ಮಹಾತ್ಮರು ಸಾರಿ ಹೇಳಿದ್ದಾರೆ.

—ಮು. ತಿ. [illegible]

ಫಾಲ್ಗುಣ ಮಾಸದ ಕತೆಗಳು

(ಕಲಾಮಂಟಪ, ಬೆಳಗಾವಿ)

ಫಾಲ್ಗುಣ ಮಾಸದ ಕತೆಗಳಲ್ಲಿ—

ಒಟ್ಟು ೫೩ ಕತೆಗಳು

ಪ್ರೇಮಕಾಮದ ಕತೆಗಳಲ್ಲಿ ಸೌಧಭರ ಪ್ರಪಂಚ (ಅಂತರಂಗ) ಮತ್ತು ಶ್ರೀ ಸುತ್ತೂರರ ಗುಲಾಬಿ (ಉಷಾ) ಓದಲರ್ಹವಾದವುಗಳು. ಮೊದಲ ನೆಯ ಕತೆಯಲ್ಲಿ ತಂದೆಯ ವ್ಯಭಿಚಾರ ಪಾರಂ ಪರ್ಯದಿಂದ ಹೆಂಡತಿ ಮಕ್ಕಳು ಭಿಕ್ಷಾ ವೃತ್ತಿಗೆ ಇಳಿಯುವರು. ಎರಡನೆಯ ಕತೆಯಲ್ಲಿ ಮನುಷ್ಯ ಪಾಯಿಕ— ವೇಶ್ಯೆಯು ತನ್ನ ವೃತ್ತಿಯ ಪಾಪವು ಯಾವುದೇ? ಎಂದು ಸಮಾಜವನ್ನು ಪ್ರಶ್ನಿಸುವಳು. ಕತೆಗಳು ವೇಶ್ಯಾವೃತ್ತಿಯು ಇರಬೇಕೋ, ಇರಬಾರದೋ ಎಂಬುವನ್ನು ನಿರ್ಣಯಿಸದಿದ್ದರೂ ಒಂದು ಇದರ ಪರಿಣಾಮ ಹೀಗೆ, ಇನ್ನೊಂದು ಇದು ಅಸಹಾಯ ಸ್ತ್ರೀಯ ರ ಉಪಜೀವನ ಮಾರ್ಗವೆಂದು ಹೇಳುವವು. ವೇಶ್ಯಾವೃತ್ತಿ ಮತ್ತು ವೇಶ್ಯೆಯರು ನಮ್ಮ ಸಾಹಿತಿಗಳಿಗೆ ಒಂದು ಸುಲಭ ವಸ್ತು. ಆದರೆ ಅದನ್ನು ಒಂದು ನಿರ್ಣಯಾತ್ಮಕ ಮಾತಿನಿಂದ ಹೇಳುವದು ಕಠಿಣವೆಂದು ಅರಿಯಬೇಕು. ವೇಶ್ಯಾವೃತ್ತಿಯ ಬೇರುಗಳು ಸ್ವರ್ಗದಿಂದ ಭೂಮಿಯವರೆಗೆ ಇಳಿದು ಪಾತಾಳವನ್ನು ಸಹ ಸೇರಿವೆ. ಪುರಾತನ ಪುರಾಣ ಸಂಗತಿಯೆ ಅದಕ್ಕೆ ಆಧಾರವಾಗಿ ನಿಂತಿದೆ. ಅದು ಕೆಟ್ಟದೆಂದು ಹೇಳ ಲಿಕ್ಕೆ ನಾಪರಿತ ಒಂದೆರಡು ದುರಂತ ಚಿತ್ರಗಳೆ ಉದಾಹರಣೆ.

ಧ್ಯೇಯವಾದಿ ಕತೆಗಳಲ್ಲಿಯ ಸ್ವಾಗೀತ ಕಾನ ಭಾಗದ ಚಿಕ್ಕವರು—ದೊಡ್ಡವರು (ಕರ್ಮವೀರ) ಪಾಟೀಲ ಶಂಕರರ ದೇವರ ನ್ಯಾಯ ಮತ್ತು ಸೇವ ನಮಿರಾಜ ಮಲ್ಲರ ಬೆಂಕಿನಂದವಿಲ್ಲ (ವಾಹಿನಿ) ಕು. ನಾರಾಯಣ ಕುಲಕರ್ಣಿಯ ವರ ಮುರಿದ ನೌಕೆ (ಸಂಜಯ) ಎಚ್. ಕೇಶವ ಮೂರ್ತಿಯವರ ಅಮುತಿ (ಜಯಂತಿ) ಹೆಜ್ಜಾಜೆ ಪಿ. ಕೃಷ್ಣಮೂರ್ತಿಯವರ ಪ್ರತೀಕಾರ ಮತ್ತು ಯು. ಸು. ಕುಮಾರಸ್ವಾಮಿಯವರ ಕನ್ಯಾವೀಕ್ಷಣೆ (ಸುಬೋಧ) ಸಾಧಾರಣ ಕತೆ ಗಳು. ಇವುಗಳನ್ನು ಬಿಟ್ಟು ಉಳಿದ ಕತೆಗಳು ಫಾಲ್ಗುಣಮಾಸಕ್ಕೆ ಭರತಿ.

ಫಾಲ್ಗುಣ ಪಟ್ಟಿ

ಕೆ. ಶ್ರೀಕಂಠರ ವಾಪಸ್ (ಅಂತರಂಗ) ಮೂರಾನ ವಾಶಿಷ್ಕರ ಪಾನನ ಹೃದಯ, (ಕರ್ಮವೀರ), ನಾರಾಯಣ ಕುಲಕರ್ಣಿಯವರ ಅಜೀಜನ ಮೃತದೇಹ (ವಿಶ್ವಕರ್ನಾಟಕ) ಶ್ರೀನಿ ವಾಸರ ಗೌತಮಿ ಹೇಳಿದ ಕಥೆ (ಜೀವನ) ಕೆ. ಅಶ್ವತ್ಥನಾರಾಯಣರಾಯರ ಯೋಗಾಭ್ಯಾಸ (ಜಯಂತಿ) ಶ್ರೀಮತಿ ಜೆಚ್. ಎನ್. ಸರೋ ಜರ ಪಶ್ಚಾತ್ತಾಪ (ವಾಣಿ) ಮತ್ತು ಚದುರಂಗರ ಗುಲಾಬಿ (ಸ್ವತಂತ್ರ) ಉತ್ತಮವಾದ ಕತೆಗಳು.

ಕೆ. ಶ್ರೀಕಂಠರು ತಮ್ಮ ಕತೆಗೆ ವೇಶ್ಯಾ ಜೀವನ ವನ್ನು ವಸ್ತುವಾಗಿ ಆರಿಸಿಕೊಂಡಿರುವರು. ಚಿನ್ನಮ್ಮ ವೇಶ್ಯೆ. ರಾಜಾ ಮಗ. ತಾಯಿಯ ವ್ಯಭಿಚಾರಕ್ಕೆ ಹೇಸಿ ಓಡಿದನು. ಪಧಾರ್ಸೇರಿ ಶಿಕ್ಷಣಪಡೆದ. ವಿಶಾಲಹೃದಯಗೊಂಡ. ತಳಮಳಿ ಸುವ ತಾಯಿಯನ್ನು ನೆನೆದ. ತಾಯಿಯ ಅಪ ರಾಧವನ್ನು ಸಮಾಜದ ಮೇಲೆ ಆರೋಪಿಸಿ ವಾಪಸ ಬಂದ.

ವೇಶ್ಯೆಯರು ನಿಜವಾಗಿ ಸಮಾಜ ವೃಕ್ಷದ ಬದ ನಿಕೆಗಳು. ಅವರಿಗೆ ಸ್ವತಂತ್ರವಾದ ಸ್ಥಾನಮಾನ ಗಳು ಕಡಿಮೆ. ಅಥವಾ ಇಲ್ಲ. ಅವರ ಮಕ್ಕಳು ಸಾಮಾಜಿಕ ಧನವೇ ಸರಿ. ತಾಯಿಯ ಪುನರ್ವಸ ತಿ[?] ಮಕ್ಕಳ ಪ್ರಗತಿಗೆ ಸೂರೊಂದು ಬಗೆ ಯಿಂದ ಅಡ್ಡಿ. ಇಂಥಲ್ಲಿ ರಾಜಸಂತತರು ಓದಲೇ ಬೇಕು. ಅವರ ಬದುಗದೆ ಎಲ್ಲಿ? ಬೆನ್ನಿಗೆ ತಗಲಿದ ಎಂದು ತಿಳಿದುಕೊಂಡ ಕಲಂಕವು ಅವರನ್ನು ಎಂದೂ ಬಿಡದು. ವಿಶಾಲ ಹೃದಯವೇ ಬಂದಿಷ್ಟು ತಾಳ್ಮೆಯನ್ನು ತಂದೊಡ್ಡಬೇಕು. ಕತೆಯು ಹೀಗೆಯೆ ಮುಕ್ತಾಯಗೊಂಡಿದೆ. ವಧಾರ್ಯಾತ್ರೆ ಸಹಕಾರಿಯಾಗಿ ಸಹಜತೆಯನ್ನು ತಂದಿದೆ.

ಮೂರಾನ ವಾಶಿಷ್ಕರ ಕತೆಯಲ್ಲಿ ಒಂದು ಉನ್ನತ್ತ ಸೇಡು ರೂಪುಗೊಂಡು ಶಾಂತತೆಯಲ್ಲಿ ಕೊನೆಗೊಂಡಿದೆ.

ಕರಿ ಮುಖಾಸನು ಕೃಷ್ಣಭಟ್ಟರ ಸೇವಕ. ಭಟ್ಟ ರನ್ನು ಒಂದು ಪ್ರಬಲ ಬೇನೆಯಿಂದ ಡಾ. ರಘು ನಾಥರಾಯರು ಬದುಕಿಸಿದರು. ಇದರಿಂದ ಡಾ. ರ ಮೇಲೆ ಪಾಪನಪ್ರೇಮಕೆ. ಒಮ್ಮೆ ಪಾಪನ ಮಗಳು ಬೇನೆಬಿದ್ದಳು. ಡಾ. ರನ್ನು ಕರೆಯಹೋದ. ಅವರು ೨೦ ರೂ. ಫೀ ಬೇಡಿದರು ಬಡವ ಅಸ ಹಾಯನಾಗಿ ಮನೆಗೆ ಬಂದ. ಮಗು ಸತ್ತಿತು. ಡಾ. ರ ಬಗ್ಗೆ ಪಾಪನು ರೋಷಗೊಂಡ. ಇದು ಬಡವರು ಬಲ್ಲಿದರ ಮೇಲೆ ತಳೆವ ಸಹಜಧರ್ಮ. ಒಮ್ಮೆ ಡಾ. ರ ಮಗ ಸಾಯಕಲ್ಲ ಅಪಘಾತ ಪಕ್ಷಿ ಸಿಕ್ಕ. ಪಾಪನು ಅರಿಯ. ದವಾಖಾನೆಗೆ ಕರಹೋದ. ಕರುತ್ತಿದ್ದ. ದಾರಿಯಲ್ಲಿ ಡಾ. ರ ಮಗನೆಂದು ತಿಳಿಯಿತು. ಸುಪ್ತರೋಷ ಜ್ವಾಲೆ ಧಗಧಗಿಸಿ 'ಸಾಯಲಿ. ಸಾಯಲಿ' ಎಂದು ಬಿಡ ಬೇಕೆಂದ. ಆದರೆ ಮಾನವೀ ಹೃದಯದ ಕದ ತೆರೆ ಯಲು ಕಂಪಿಸಿ. ಡಾ. ರರು ಪಶ್ಚಾತ್ತಾಪ ಗೊಂಡರು. ಇದು ಪಾಪನ ಹೃದಯ ಪ್ರೀತಿ, ದ್ವೇಷಗಳು ಮಾನವನ ಹೃದಯದ ಮೂಲ ಪ್ರವೃತ್ತಿಗಳೆಂಬುದನ್ನು ಮಾರ್ಮಿಕವಾಗಿ ಚಿತ್ರಿಸಿ ರುವರು.

ನಾರಾಯಣ ಕುಲಕರ್ಣಿಯವರ ಕತೆಯಲ್ಲಿ ಅಜೀಜನು ಒಬ್ಬ ಪರದೇಶಿ. ಹೋಟೇಲದ ಮಾಲಕ ಅಜೀಜನಿಂದ ನೀರಿಲ ಹಣ್ಣುಗಳನ್ನು ತರಿಸಿ, ಮಾರಿ ಗಂಟುಮಾಡುತ್ತಿದ್ದ. ಅದರ ಪ್ರತಿ ಫಲ ಅಜೀಜನಿಗೆ ಒಂದರ್ಧ ಕಪ್ಪು ಚಾಹ. ಒಂದಿನ ಅಜೀಜನು ಗಿಡಹತ್ತಿ ಹರಿಯುವಮುಂದೆ ಅಧಿಕಾರಿ ಗದರಿಸಿದ. ಅವಸರದಿಂದ ಇಳಿಯುವ ಮುಂಚೆ ಬಿದ್ದು ಸತ್ತ. ಆದರೆ ಮಾಲಿಕನ ಕಣ್ಣಲ್ಲಿ ಎರಡು ಹನಿ ನೀರು ಕಂಡವು. ಆ ಕಣ್ಣೀರನ್ನು ವಿಭಜಿಸಿದರೆ— ದುಷ್ಟ ಪರದೇಶಿಯೇ ಇಷ್ಟು ಬೇಗ ಯಾಕೆ ಸಾಯಬೇಕಿತ್ತು! ಈ ನೀರಲ ಹಣ್ಣಿನ ಸುಗ್ಗಿ ಇರುವವರೆಗೆ ಬದುಕಿ ಮುಂದೆ ಸಾಯಬಾರದೆ! ನನಗೆ ಬರುವ ನೂರಾರು ರೂಪಾಯಿ ಹಾಳುಮಾಡಿದಿ— ಎಂಬ ಸ್ವಾರ್ಥ ಪೂರ್ಣ ಕ್ರಂದನದ ಉಪ್ಪು ನೀರೇ ಹೊರತು ದಯೆಯ ತೊಟ್ಟುಗಳಲ್ಲ. ನಿಂತವರು- ಅಯ್ಯೋ ಎಷ್ಟು ದಯೆಯುಳ್ಳವ- ಎಂದು ನುಡಿದರೆ ಕಪಟೀ ಜಗತ್ತಿನಲ್ಲಿ ಒಳ್ಳೆಯದೆಂಬುದಕ್ಕೆ ಪ್ರತ್ಯಕ್ಷ ಬೆಲೆ ಏನು? ಕತೆಯಲ್ಲಿ ಇಂಥದೆಂದು ಸುಪ್ತ- ಗುಪ್ತ ಮರ್ಮಾಂತಿಕ ವಿಷಯವನ್ನು ಹೆಣೆದಿರು ವರು.

ಕೆ. ಅಶ್ವತ್ಥನಾರಾಯಣ ರಾಯರ—ನೋತಾ ಭಾಯಿ ವಿಠಮಕ್ಕಳ ತಂದೆ. ಒಮ್ಮೆ ನಾಶಿಕಕ್ಕೆ ಹೋಗಿ ಶ್ರೀ ಶ್ರೀ ಶ್ರೀ ಸ್ವಾಮಿಗಳಿಂದ ಯೋಗಾ ಭ್ಯಾಸದ ದೀಕ್ಷೆಯನ್ನು ಹೊಂದಿ ಊರಿಗೆ ಬಂದ. ಗೆಳೆಯ— ರಾಯರ ಮುಂದೆ ತನ್ನ ಸ್ವಾಮಿಗಳ ಮತ್ತು ಯೋಗಾಭ್ಯಾಸದ ಬುರುಡೆಯ ಬಡಾ ಯಿಯನ್ನು ಕೊಚ್ಚಿದನು. ಆ ಸಮಯದಲ್ಲಿ ಮನೆಯಲ್ಲಿ ಮಕ್ಕಳ ಗದ್ದಲ ಸಹಿಸದೆ ಬಡಿಯು ವನು. ಕೆಲ ದಿನ ಮೌನ. ಮುಂದೆ ಮನೆಯಲ್ಲಿ ಗಡಿಬಿಡಿ. ಹೆರಿಯಲಿಕ್ಕೆ ಹೆಂಡತಿಯನ್ನು ದವಾ ಖಾನೆಗೆ ಸಾಗಿಸುವ. ಆಗ ಗೆಳೆಯನ ಸಹಾಯ ಬಯಸುವ ಬ್ರಹ್ಮಚರ್ಯ ವ್ರತದ ಫಲವು ಸಿಕ್ಕರೂ ಮತ್ತೂ ಯೋಗಾಭ್ಯಾಸ, ಬ್ರಹ್ಮ ಚರ್ಯವ್ರತದ ಅಖಂಡ ಸಾಗಿದೆ.

ಬಾಯಿಂದ ಧರ್ಮ, ಕೈಯಿಂದ ಕರ್ಮ ಎಂದು ತಿಳಿದು ನಡೆವ ದಾಂಭಿಕರು ನಮ್ಮಲ್ಲಿ ವಿಪುಲ. ಅವರ ಮಾತು ನಂಬಿ ನಮ್ಮ ಮನಸು ಪಾರಗೊಟ್ಟರೆ ಎಲ್ಲ ನಷ್ಟ. ನೋತಾಭಾಯಿ ತನ್ನ ಸ್ವಾಮಿಗಳನ್ನು ವರ್ಣಿಸುವಲ್ಲಿ, ಯೋಗಾಭ್ಯಾಸ ಮತ್ತು ಬ್ರಹ್ಮಚರ್ಯವ್ರತದ ಮಾಹಾತ್ಮ್ಯನಿವೇ ದಿಸುವಲ್ಲಿ ತನ್ನ ಮಕ್ಕಳ ಗದ್ದಲಕ್ಕೆ ಸಿಟ್ಟಾಗಿ, ವಿವೇಕಶಕ್ತಿಯನ್ನು ಕಳೆದುಕೊಂಡು ದನಗ ಳಂತೆ ಬಡಿಯುವನು. ಅಲ್ಲದೆ ರಾಯರ ಮುಂದೂ ಸಮರ್ಥಿಸಿಕೊಳ್ಳುವನು. ಇಂಥವರ ಸ್ವಭಾವ ಹೀಗಿರುವದಿಲ್ಲ. ಅಲ್ಲದೆ ಭಾಯಿಯ ಪಾತ್ರನಿರ್ಣಯ ಹೆಂಡತಿಯು ಹೆರಿಗೆಗೆ ಹೋದ ಮೇಲೆ ತಿಳಿಯಬೇಕು. ಯೋಗಾಭ್ಯಾಸದ ಬಡಾ ಯಿಯ ಸಂಗಡ ಮಕ್ಕಳನ್ನು ಬಡಿವನೆನ್ನುವಲ್ಲಿ ಕತೆಯು ಅರ್ಧ ಮುಗಿದಂತೆ. ಕತೆಯಲ್ಲಿ ಪಾತ್ರ ಗಳಿಗಾಗಿ ಆರಿಸಿಕೊಂಡ ಮಾನಸಿಕ ಪೋಷಕ ದ್ರವ್ಯಗಳನ್ನು ಗಟ್ಟಿಮುಟ್ಟಾಗಿ ಕಾಯಿಸಿ ಕೊಂಡು ಹೋಗದೇಕು. ಇಲ್ಲಿ ಅದು ಕೈ ತಪ್ಪಿದೆ.

ಆದರೆ ಈ ಎಲ್ಲ ಕತೆಗಳಲ್ಲಿ ಶ್ರೀಮತಿ ಸರೋ ಜರ ಪಶ್ಚಾತ್ತಾಪ ಕತೆಯು ಹೆಚ್ಚು ಒಳ್ಳೆಯದು ಕತೆಯು—

ಕಂಚಿ, ತಿಮ್ಮಿ ಗಂಡಹೆಂಡರು. ಕಂಚ ನಿಗೆ ಪ್ರಾಪಂಚಿಕ ವ್ಯವಹಾರದಲ್ಲಿ ೧೦ ರೂ- ಸಾಲಬಾಗುವದು, ಬೆಟ್ಟಿನು. ಗಂಡನ ಸಾಧ್ಯಕಾರ ಅವನಿಗೆ ತಿಮ್ಮಿಯ ಎಮ್ಮೆಯ ಮೇಲೆ ಕಣ್ಣು. ಸಾಲದ ತವದಿಂದ ಕಂಚನಲ್ಲಿ ಎಮ್ಮೆಯನ್ನು ಬೇಡುವ. ಕೆಂಚನಿಗೆ ಇಷ್ಟೊಂದು ಸುಲಭ ಮಾರ್ಗ ದೆಣಿಸುವದು. ೫೦ ರೂ. ಗೆ ಅದನ್ನು ಮಾರಿದ. ಇಲ್ಲಿ ವ್ಯವಹಾರ ತಿಮ್ಮಿಯ ಅಪರೋಕ್ಷದಲ್ಲಿ ನಡೆಯುವದು: ಬೆಟ್ಟನು ಎಮ್ಮೆಯನ್ನು ಬಿಚ್ಚಿ ಬಂಬನು. ತಿಮ್ಮಿಗೆ ಆಶ್ಚರ್ಯ, ತಡೆಯುವಳು. ಅವಳನ್ನು ತಮ್ಮ ತವರು ಮನೆಯ ಧನವೆಂದು ಸಾಧಿಸುವಳು. ಬೆಟ್ಟನೂ ಕೆಂಚನೂ ಅವಮಾನ ಗೊಳ್ಳುವರು. ಈ ಆವೇಶದಲ್ಲಿ ಕೆಂಚನು ತಿಮ್ಮಿ ಯನ್ನು ಮನೆಯಿಂದ ಹೊರಗೆ ಹಾಕುವನು. ಗಂಡಹೆಂಡರು ಬಹುದಿನ ಅಗಲುವರು. ಕೆಂಚ ನಿಗೆ ತಿಮ್ಮಿ ಇಲ್ಲದ ಜೀವನ ಅಸಹ್ಯಕ್ಕಿಟ್ಟುಕೊ ಳ್ಳುವದು. ಕರೆಯನ್ನು ಹಾರುವ. ತಿಮ್ಮಿಯು ಕೆಂಚನ ಬದುಕಿಸಿಕೊಳ್ಳುವಳು. ಪಶ್ಚಾತಾಪ ಗೊಳ್ಳುವಳು.

ಕತೆಯು ಹಳ್ಳಿಯ ಮುಕ್ಕಳ ಒಂದು ವಾಸ್ತವ ಚಿತ್ರ. ಗಂಡನ ಮನೆಗೆ ಬರುವ ಮುಂದೆ ಎಮ್ಮೆ ಯನ್ನೋ, ಆಕಳನ್ನೋ, ದೀಪುವ ಕಲ್ಲನ್ನೋ ತರುವದು ನಮ್ಮ ಹಳ್ಳಿಯ ಹೆಣ್ಣುಮಕ್ಕಳ ಸಂಪ್ರದಾಯ. ಅದರಲ್ಲಿ ಪ್ರಪಂಚದ ಹತ್ತಾರು ಆಶೆಗಳ ತಲಕು—ಮಲಕು ಇರುವದು. ಎಮ್ಮೆ ಒಂದು ಸಂಗಾತಿ, ಗೆಳತಿ, ಪ್ರಪಂಚದ ಸಹಾಯ, ಗಂಡನ ಪ್ರೀತಿಯನ್ನು ಇನ್ನಷ್ಟು ಪಡೆದುಕೊಳ್ಳ ಲೆಂಬ ಈಪ್ಸಿತಾರ್ಥ, ಗಂಡನು ಸೌಖ್ಯವಾಗಿರ ಲೆಂಬೊಂದು ಬಯಕೆ, ಮುಂದಿನ ಮಕ್ಕಳಿಗೂ ಅನುಕೂಲವಾಗಲೆಂಬ ಭವಿಷ್ಯ. ಹೀಗೆಯೇ! ಅದು ಸ್ತ್ರೀಧನ. ಗಂಡನೂ ಮಕ್ಕಳೂ ಹಾಲು, ಹೈನ ಉಂಡು—ತಿಂದು ದಷ್ಟಪುಷ್ಟವಾಗಿ ಬೆಳೆ ಯಬೇಕು. ಆದರೆ ಪ್ರಪಂಚದ ಅಲ್ಪಸ್ವಲ್ಪ ತೊಂದರೆಗಳನ್ನು ಕ್ಷಣದಲ್ಲಿ ನಿವಾರಿಸಿಕೊಳ್ಳುವ ವಿನಿಮಯ ದ್ರವ್ಯವಲ್ಲ. ಅದಕ್ಕೆ ಅಧಿಕಾರಿ ಸ್ತ್ರೀ. ಒಂದು ವೇಳೆ ಹಾಗೆ ಮಾಡಬೇಕಾದರೆ ಹೆಂಡ ತಿಯ ಸಮ್ಮತಿ ಅವಶ್ಯ. ಇಲ್ಲಿ ಕೆಂಚನು ಆ ಮಾತನ್ನು ಅರಿಯ. ಅಧಿಕ ಪ್ರೀತಿಯಿಂದ ಸಂಸಾ ರವು ನೆಮ್ಮದಿ ಆಗಲೆಂದು ಹಾಗೆ ಮಾಡುವ. ಆದರೆ ತನ್ನದನ್ನು ಮಾರಿ ಮನೆ ನಡೆಸುವ ಗಂಡನ ಪೌರುಷಕ್ಕೆ ಕುತ್ತಿಗೆಯಿಳ್ಳುವಳು. ಈ ಭಾವನೆಯೇ ಆಕೆಯನ್ನು ಅಡ್ಡಿಯಾಗಿ ನಿಲ್ಲಿಸುವದು. ಆದರೆ ಇದರ ಕೊನೆ ಅಗಲಿಕೆ. ಇದು ಸ್ವಾಭಾವಿಕ. ಆದರೆ ಜೀವನಕ್ಕೆ ಬೇಸತ್ತು ಕೆಂಚನು ಕೆರೆ ಹಾರು ವನು. ಗಂಡನ ವಿರಹದಿಂದ ಬೆಂದು ಬೇಗುದಿ ಗೊಂಡ ತಿಮ್ಮಿಯನ್ನು ಆಕಸ್ಮಿಕ ವಿಧಿಯು ಕೆರೆಗೆ ಬರುವಂತೆ ಮಾಡುವದು. ಬದುಕಿಸುವದು. ಕೆಂಚನು ತನಗಾಗಿ ಸಾಯಹೊರಟಿರುವನೆಂದು ತಿಮ್ಮಿಗೆ ಯಾರೂ ಹೇಳಬೇಕಿಲ್ಲ. ಎಮ್ಮೆಯನ್ನು ಮಾರಿದುದು ತಪ್ಪೋ, ಒಪ್ಪೋ ಆಗ ನಿರ್ಣಯಿ ಸುವ ಅವಶ್ಯಕತೆ ಇಲ್ಲ. ಹೃದಯ ಹೃದಯವನ್ನು ತಿಳಿಯುವದು. ಪಶ್ಚಾತ್ತಾಪದಿಂದ ದಗ್ಧ ಗೊಂಡ ಹೃದಯಗಳ ಕೊನೆ ಹೀಗೆಯೇ! ಅದಕ್ಕೆ ಫಾಲ್ಗುಣ ಮಾಸದ ಕತೆಗಳಲ್ಲಿ ಇದಕ್ಕೇ ಪಟ್ಟ.

ಸೂಚನೆ— ಕೆಲವೊಂದು ಅಗಂತುಕ ಅಡಚ ಣಿಗಳ ಮೂಲಕ ಇನ್ನು ಮುಂದೆ ಮಾಸಿಕ ಕಥಾವ ಲೋಕನವನ್ನು ನಿಲ್ಲಿಸಲಾಗಿದೆ.

—ಕಲಾಮಂಟಪ.

ಜೀವನ ಮತ್ತು ವಿಜ್ಞಾನ

ಹಾಲಿನ ಮಹತ್ವ

[ವೆಂಕಟಾಚಾರ್ಯ ಉಪಾಧ್ಯಾಯ ಎಂ. ಎಸ್.]

ಹಾಲು ಒಂದು ಉತ್ತಮವಾದ ಆಹಾರ ವೆಂದು ಕರೆಯಲ್ಪಟ್ಟಿದೆ. ಏಕೆಂದರೆ, ಇದರಲ್ಲಿ ಮನುಷ್ಯನ ಶರೀರ ಪೋಷಣೆಗೆ ಬೇಕಾದ ಎಲ್ಲ ಆಹಾರಾಂಶಗಳು ಸರಿಯಾದ ಪ್ರಮಾಣದಲ್ಲಿ ಇರುತ್ತವೆ. ಎಂತಲೇ ಆಹಾರ ಶಾಸ್ತ್ರಜ್ಞರು ಹಾಲನ್ನು ಸಂಪೂರ್ಣ ಆಹಾರವೆಂದು ಕರೆದಿದ್ದಾರೆ.

ಹಾಲಿನಲ್ಲಿದ್ದ ಎಲ್ಲ ಧಾತುಗಳಲ್ಲಿ ಕ್ಯಾಲ್ಸಿಯಂ ಬಹಳೇ ಮಹತ್ವದ್ದಾಗಿದೆ. ಇದು ಹಲ್ಲು ಮತ್ತು ಎಲುವುಗಳ ಬೆಳವಣಿಗೆಗೆ ತುಂಬಾ ಅವಶ್ಯಕ. ಹಾಲಿನಲ್ಲಿದ್ದಷ್ಟು ಕ್ಯಾಲ್ಸಿಯಂ ಮತ್ತಾವ ಪದಾ ರ್ಥಗಳಲ್ಲಿಯೂ ಇಲ್ಲ. ಇದಲ್ಲದೆ ಇದು ಹಾಲನ್ನು ಕಾಯಿಸುವುದರಿಂದಾಗಲಿ, ಒಣಗಿಸುವುದರಿಂದಾ ಗಲಿ ಅಥವಾ ಮಜ್ಜಿಗೆಯಲ್ಲಿ ರೂಪಾಂತರಿಸುವು ದರಿಂದಾಗಲೀ ನಷ್ಟವಾಗುವದಿಲ್ಲ.

ಶರೀರದಲ್ಲಿ ಕ್ಯಾಲ್ಸಿಯಂ, ಶರೀರ ತೂಕದ ಸೇಕಡಾ ೨ ರಂತೆಯೂ, ಹಲ್ಲು ಮತ್ತು ಎಲುವು ಗಳಲ್ಲಿ ಸೇಕಡಾ ೯೬ ರಂತೆಯೂ ಇದ್ದು ದರಿಂದ ಇವುಗಳ ಬೆಳವಣಿಗೆಯಲ್ಲಿ ಇದರ ಮಹತ್ವ ಎಷ್ಟಿದೆ ಎಂಬುದನ್ನು ಪ್ರತಿಯೊಬ್ಬನೂ ತಿಳಿದುಕೊಳ್ಳ ಬಹುದಾಗಿದೆ. ಒಂದು ವೇಳೆ ಇದು ಶರೀರದಲ್ಲಿ ಕಡಿಮೆಯ ಪ್ರಮಾಣದಲ್ಲಿದ್ದರೆ 'ರಿಕೆಟ್ಸ್' ಎಂಬ ಎಲುಬಿನ ರೋಗ ಬರುತ್ತದೆ.

ರಕ್ತ ಹೆಪ್ಪುಗಟ್ಟುವದಕ್ಕೂ ಹಾಗೂ ಎಲುವು ಗಳ ಬೆಳವಣಿಗೆಗೂ ಕ್ಯಾಲ್ಸಿಯಂ ಮತ್ತು ರಂಜಕಗಳು ಬಹಳೇ ಅವಶ್ಯಕ. ದೈವಯೋಗದಿಂದ ಇವೆರಡೂ ಹಾಲಿನಲ್ಲಿ ಸಾಕಷ್ಟು ಪ್ರಮಾಣದಲ್ಲಿವೆ. ಇವಲ್ಲದೆ ಹಾಲಿನಲ್ಲಿ, ಕಬ್ಬಿಣ, ತಾಮ್ರ ಮತ್ತು ಮಂಗನೀಜ್ ಧಾತುಗಳು ಬಹಳ ಕಡಿಮೆಯ ಪ್ರಮಾಣದಲ್ಲಿದ್ದು, ಶರೀರ ಪೋಷಣೆಗೆ ಉಪ ಯುಕ್ತವುಳ್ಳದ್ದಾಗಿವೆ.

ಶರೀರ ಪೋಷಣೆಗೆ ಬೇಕಾದ ಇನ್ನೊಂದು ಮಹತ್ವದ ವಸ್ತುವೆಂದರೆ - 'ರಿಬೋಫ್ಲಾ ವಿನ್' (Riboflavin) ಇದೊಂದು 'ಬಿ' ಜೀವ ಸತ್ವವಿದ್ದು ಹಾಲಿನಲ್ಲಿ ಸಿಕ್ಕುತ್ತದೆ. ಶರೀರದಲ್ಲಿ ಇದು ಹೆಚ್ಚಿನ ಪ್ರಮಾಣದಲ್ಲಿದ್ದರೆ ಮನುಷ್ಯನು ಹೆಚ್ಚು ವರ್ಷ ಬಾಳುತ್ತಾನೆ. ಈ ಜೀವಸತ್ವ ಬಹಳೇ ಸೂಕ್ಷ್ಮವಿದ್ದ ಮೂಲಕ ಹಾಲನ್ನು ಹೆಚ್ಚು ವೇಳೆ ಬಿಸಿಲಿನಲ್ಲಿ ಇಡಕೂಡದು.

ಹಾಲಿನಲ್ಲಿ 'ಎ' ಜೀವಸತ್ವವು ಹೆಚ್ಚಿನ ಪ್ರಮಾ ಣದಲ್ಲಿ ಇರುತ್ತದೆ. ಇದೊಂದು ಮೇದೋದ್ರವ್ಯ (Fat soluble) ವಾಗಿರುವುದರಿಂದ ಹಾಲಿನ ಕೆನೆಯಲ್ಲಿ ಹೆಚ್ಚಾಗಿ ಸಿಕ್ಕುತ್ತದೆ. ಇದಲ್ಲದೆ ಹಾಲಿನಲ್ಲಿ, ಸಸಾರಜನಕಾಂಶ, ಪಿಷ್ಟ ಸಕ್ಕರೆ, 'ಸಿ' 'ಡಿ' ಮತ್ತು 'ಇ' ಜೀವಸತ್ವಗಳು ಕೂಡ ಉಂಟು. ಇದರಲ್ಲಿದ್ದ ಎಲ್ಲ ಆಹಾರಾಂಶಗಳು ಸುಲಭವಾಗಿ ಜೀರ್ಣವಾಗುವ ರೀತಿಯಲ್ಲಿವೆ. ಹಾಲನ್ನು ಕಾಯಿಸುವುದರಿಂದ ಅದರಲ್ಲಿದ್ದ ಜೀವ ಸತ್ವಗಳು ನಾಶವಾಗುವುದಿಲ್ಲ.

ಒಟ್ಟಿನ ಮೇಲೆ ಹೇಳಬೇಕಾದರೆ, ದಿನಾಲು ಒಂದು ಪಾವು ಹಾಲು ಸೇವಿಸಿದಲ್ಲಿ ಇದು ಶರೀರ ಪೋಷಣೆಗೆ ಬೇಕಾದ ಸಂಪೂರ್ಣ ಒಂದು ದಿನದ ಕ್ಯಾಲ್ಸಿಯಂ, ರಂಜಕ, ಸಸಾರಜನಕಾಂಶ ಮತ್ತು 'ಎ' ಜೀವಸತ್ವವನ್ನು ಪೂರೈಸುತ್ತದೆ.

ಸಂಪಾದಕೀಯ ಟೀಕಾಟಿಪ್ಪಣಿಗಳು

ಹರಪನಹಳ್ಳಿ ಸಮ್ಮೇಲನ

ಹರಪನಹಳ್ಳಿಯಲ್ಲಿ ಇದೇ ತಿಂಗಳು ೭-೮ ಮತ್ತು ೯ ನೆಯ ತಾರೀಖು ಕನ್ನಡ ಸಾಹಿತ್ಯ ಸಮ್ಮೇಲನದ ಮೂವತ್ತನೆಯ ಅಧಿವೇಶನ ಕರ್ನಾಟಕದ ಪ್ರಮುಖ ಸಾಹಿತಿಗಳಾದ ಶ್ರೀ ಸಿ. ಕೆ. ವೆಂಕಟರಾಮಯ್ಯನವರ ಅಧ್ಯಕ್ಷತೆಯಲ್ಲಿ ಸಾಂಗವಾಗಲಿದೆ. ಇದರ ಜತೆಯಲ್ಲಿ ಸಾಹಿತ್ಯ ಗೋಷ್ಠಿ, ಜನಪದ ಗೋಷ್ಠಿ, ಮಹಿಳಾಗೋಷ್ಠಿ ವಿಜ್ಞಾನ ಗೋಷ್ಠಿ ಮೊದಲಾದವುಗಳೂ ನಡೆವುವು. ಇವುಗಳ ಕಾರ್ಯಕ್ರಮಗಳ ವಿವರಗಳನ್ನು ಇದೇ ಸಂಚಿಕೆಯಲ್ಲಿ ಬೇರೆ ಕಡೆ ಪ್ರಸಿದ್ಧಿಸಿದ್ದೇವೆ. ಹರಪನಹಳ್ಳಿ ಚಿಕ್ಕ ನಗರವಾಗಿದ್ದರೂ ಶ್ರೀ ಇಜಾರಿ ವಸುಪಾಲಪ್ಪನವರಂಥ ಪ್ರಮುಖರ ನೇತೃತ್ವದಲ್ಲಿ ಸ್ಥಾಪಿತವಾದ ಸ್ವಾಗತಸಮಿತಿಯು ಅಧಿವೇಶನವನ್ನು ಯಶಸ್ವಿ ಮಾಡಲು ಸರ್ವ ರೀತಿಯಿಂದ ಪ್ರಯತ್ನಿಸುತ್ತಿರುವದು. ಆದರೆ ಅಧಿವೇಶನದ ಯಶಸ್ಸು ಪರಿಪೂರ್ಣವಾಗಬೇಕಾದರೆ ಬಹುಸಂಖ್ಯಾಕ ಕನ್ನಡಿಗರು ಹರಪನಹಳ್ಳಿಗೆ ಹೋಗಿ ಅಲ್ಲಿನ ಕಾರ್ಯಕಲಾಪಗಳಲ್ಲಿ ಭಾಗವಹಿಸುವದತ್ಯವಶ್ಯವಾಗಿದೆ. ಶ್ರೀ ವಸುಪಾಲಪ್ಪನವರು ರಾಜಕೀಯ ದುರಂಧರರು. ಇಂಥ ಹಲವಾರು ಸಮ್ಮೇಲನಗಳಲ್ಲಿ ಭಾಗವಹಿಸಿ ಯಶಸ್ವಿ ಮಾಡಿದವರು. ಇಂಥ ವೃದ್ಧಾಪ್ಯದಲ್ಲಿಯೂ ನವಯುವಕರಂತೆ ಸ್ವಾಗತಸಮಿತಿಯ ಅಧ್ಯಕ್ಷ ಸ್ಥಾನ ಸ್ವೀಕರಿಸಿ ಅದನ್ನು ಸಾಂಗಗೊಳಿಸುವಲ್ಲಿ ನಿರತರಾಗಿರುವದು ತುಂಬ ಅಭಿನಂದನೀಯ ಸಂಗತಿಯಾಗಿದೆ. ಸಮ್ಮೇಳನದ ಅಧ್ಯಕ್ಷರಾದ ಶ್ರೀ ಸಿ. ಕೆ. ವೆಂಕಟರಾಮಯ್ಯನವರಾದರೊ ಪ್ರಸಿದ್ಧ ಸಾಹಿತಿಗಳು ಲೇಖಕರು, ವಾಗ್ಮಿಗಳು. ಸಾಹಿತ್ಯ ಸಮ್ಮೇಳನದ ಅಧ್ಯಕ್ಷ ಸ್ಥಾನ ಈ ಮೊದಲು ಅವರಿಗೆ ಸಿಕ್ಕಬೇಕಿತ್ತು. ತಡವಾಗಿಯಾದರೂ ಚಿಂತೆಯಿಲ್ಲ ಕನ್ನಡಿಗರು ಅವರನ್ನು ಸಾಹಿತ್ಯದೇವಿಯ ಪೂಜೆಗೆ ಹಿರಿಯರನ್ನಾಗಿರಿಸಿಕೊಂಡಿದ್ದು ಭೂಷಣಪ್ರದವಾಗಿದೆ. ಇತರ ಗೋಷ್ಠಿಗಳಿಗೆ ಅಧ್ಯಕ್ಷರೆಂದು ನಿಯೋಜಿತರಾಗಿರುವವರೂ ತಮ್ಮ ತಮ್ಮ ಶಾಖೆಗಳಲ್ಲಿ ನುರಿತವರು; ಸೇವೆ ಸಲ್ಲಿಸಿದವರು. ಇವರೆಲ್ಲರ ಜ್ಞಾನ ಅನುಭವ ಕಾರ್ಯಕ್ಷಮತೆ ಮೊದಲಾದವುಗಳಿಂದ ಅಧಿವೇಶನ ಸಂಪೂರ್ಣ ಯಶಸ್ವಿಯಾಗಿ ಕರ್ನಾಟಕ ರಾಜಕೀಯ ಸ್ವಾತಂತ್ರ್ಯ ಪಡೆಯುತ್ತಿರುವ ಈ ಕಾಲದಲ್ಲಿ ಈ ಸಾಂಸ್ಕೃತಿಕ ಬಾಂಧವ್ಯ ಮತ್ತಷ್ಟು ದೃಢವಾಗಲೆಂದು ಹಾರಯಿಸುತ್ತೇವೆ.

ಕೇರಳೀಯರ ಆಕ್ರಮಕ ಧೋರಣ

ಕರ್ನಾಟಕ ಹಲವು ನಾಡುಗಳಲ್ಲಿ ಹರಿದು ಹಂಚಿ ಹೋದ್ದರಿಂದ ಎಲ್ಲರೂ ಅದರ ದುರ್ಲಾಭ ಪಡೆಯುತ್ತಿರುವದು ಸ್ವಾಭಾವಿಕ. ಬ್ರಿಟಿಶ್ ಹಿಂದುಸ್ತಾನದಲ್ಲಿ [illegible] ಅಲ್ಲ ಅನೇಕ ಸಂಸ್ಥಾನಗಳಲ್ಲಿಯೂ ಕನ್ನ[illegible] ಭಾಗ ಹೋಗಿದ್ದರಿಂದ ಸಮಸ್ಯೆ ಮತ್ತಷ್ಟು [illegible]ಟಿಲವಾಗಿದೆ. ಆದರೂ ತಮ್ಮ ಸತತ ಪರಿಶ್ರಮದಿಂದ ಧ್ಯೇಯ ಸಾಧನೆಯನ್ನು ಸಮೀಪಿಸಿರುವರೆಂದು ಹೇಳಬಹುದು. ಭಾಷಾನ್ವಯ ಪ್ರಾಂತ ರಚನೆಯ ಕನ್ನಡಿಗರ ಈ ಚಳವಳಿಯ ಪರಿಣಾಮವಾಗಿಯೆ ಇಂದು ಬೇರೆ ಬೇರೆ ಭಾಷೆಯವರೂ ಸ್ವತಂತ್ರ ಪ್ರಾಂತಗಳನ್ನು ಬೇಡುತ್ತಿರುವರು. ಈ ರೀತಿ ಭಾಷಾನ್ವಯ ಪ್ರಾಂತಗಳನ್ನು ವಿಭಾಗಿಸುವದು ಹಿತಕರವೇ ಆಗಿದೆ. ಆದರೆ ಹೀಗೆ ಪ್ರಾಂತಗಳನ್ನು ವಿಭಾಗಿಸುವಾಗ ಬಹುಸಂಖ್ಯಾಕರು ಯಾವ ಭಾಷೆಯನ್ನಾಡುವರೆಂಬುದನ್ನು ಕಂಡು ಹಿಡಿದು ಗಡಿಗಳನ್ನು ವಿಭಾಗಿಸಬೇಕಾಗುವದು. ಯಾರಿಗೂ ಯಾವದೇ ಬಗೆಯಿಂದ ಹಾನಿಯಾಗದಂತೆ ನೋಡಿಕೊಳ್ಳುವುದೂ ಕ್ರಮಪ್ರಾಪ್ತವಾಗಿದೆ. ಆದರೆ ತಮಿಳರು ತೆಲುಗರು ಮತ್ತು ಮರಾಠರು ಈ ಸಂಬಂಧದಲ್ಲಿ ಆಕ್ರಮಕ ಧೋರಣವನ್ನು ವಹಿಸುತ್ತ ಬಂದದ್ದು ಸರ್ವಶ್ರುತ. ಅವರೀ ಆಕ್ರಮಕ ಧೋರಣವನ್ನು ಈ ಮೊದಲು ನಾವು ಆಗಾಗ ನಿಷೇಧಿಸಿದ್ದುಂಟು. ಈಗ ಕೇರಳ ಪ್ರಾಂತದವರೂ ಆಕ್ರಮಕ ಧೋರಣವನ್ನು ವಹಿಸಿರುವರು. ತ್ರಿಚೂರಲ್ಲಿ ಕಳೆದವಾದ ಕೂಡಿದ ಕೇರಳ ಏಕೀಕರಣ ಪರಿಷತ್ತಿನ ಅಧ್ಯಕ್ಷಸ್ಥಾನದಿಂದ ಭಾಷಣಮಾಡುತ್ತ ಶ್ರೀ ಕೇಳಪ್ಪನವರು ಕನ್ನಡ ನಾಡಿನ ಕೊಡಗು ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳನ್ನು ಕೇರಳದಲ್ಲಿ ಸೇರಿಸಿಕೊಂಡಿರುವರು. ಹೀಗೆ ಮಾಡುವಾಗ ಅವರು ಕೇರಳದ ಹಿಂದಿನ ಪುರಾಣವನ್ನೆ ಬಿಚ್ಚಿರುವರು. ಗೋಕರ್ಣದಿಂದ ಕನ್ಯಾಕುಮಾರಿಯವರೆಗೆ ಕೊಂಕಣಪಟ್ಟಿಯೆಲ್ಲ ಪ್ರಾಚೀನ ಕಾಲದಿಂದ ಕೇರಳ ನಾಡಾಗಿತ್ತೆಂದು ಹೇಳಿದ್ದಾರೆ. ಇರಬಹುದು. ಆದರೆ ಈಗ ಹೊಸದಾಗಿ ಭಾಷಾನ್ವಯ ಪ್ರಾಂತರಚಿಸುವಾಗ ಸದ್ಯದ ಪರಿಸ್ಥಿತಿಯನ್ನು ಲಕ್ಷಿಸುವದು ಅವಶ್ಯವಲ್ಲವೆ? ಕರ್ನಾಟಕವೂ ಹಿಂದೆ ಗೋದಾವರಿಯವರೆಗೆ ಅಷ್ಟೇ ಏಕೆ ನರ್ಮದೆಯವರೆಗೂ ಹಬ್ಬಿತ್ತೆಂದು ಹೇಳಿ ಅದೆಲ್ಲವನ್ನು ಕನ್ನಡಿಗರು ಈಗ ಬೇಡುವದು ಎಷ್ಟು ಹಾಸ್ಯಾಸ್ಪದವೊ ಅಷ್ಟೇ ಕೇಳಪ್ಪನವರ ಬೇಡಿಕೆ ಅಸಮಂಜಸವಾಗಿದೆ. ಅವರೀ ಆಕ್ರಮಕ ಧೋರಣವನ್ನು ಕನ್ನಡಿಗರು ನಿಷೇಧಿಸದಿರರು. ಸ[illegible] ಕನ್ನಡನಾಡನ್ನು ಕೇರಳದಲ್ಲಿ ಸೇರಿಸಿಕೊಳ್ಳಲು ಹವಣಿಸುವದು ಅತ್ಯಂತ ಖಂಡನೀಯವಾಗಿದೆ ಕೊಂಕಣ ಪಟ್ಟಿಯಾದ ಉತ್ತರ ಕನ್ನಡ ಜಿಲ್ಲೆಯನ್ನು ಅವರು ಬೇಡದಿದ್ದುದು ಆಶ್ಚರ್ಯಕರ. ಹೀಗೆ ಆಕ್ರಮಕ ಧೋರಣ ವಹಿಸುವದು ಯಾವ ರೀತಿಯಿಂದಲೂ ನ್ಯಾಯ್ಯವಾಗಲಾರದು. ನೀಲಗಿರಿಯನ್ನೂ ಅವರು ಕೇರಳದಲ್ಲಿ ಸೇರಿಸಿಕೊಂಡದ್ದನ್ನು ಅಲ್ಲಿನ ಕಾರ್ಯಕರ್ತರಾದ ಶ್ರೀ ಕೆ. ಬಿ. ಗೌಡರ ಎಂ. ಎಲ್. ಎ. ಇವರು ಖಂಡಿಸಿದ್ದಾರೆ. ಕೇರಳೀಯರು ಇನ್ನುಮೇಲಾದರೂ ಈ ಬಗೆಯ ಆಕ್ರಮಕ ಧೋರಣವನ್ನು ಬಿಟ್ಟುಗೊಟ್ಟು ನ್ಯಾಯ್ಯವಾಗಿ ತಮಗೆ ಸಲ್ಲಬೇಕಾದ ಭಾಗಗಳನಷ್ಟೆ ತೆಗೆದುಕೊಂಡು ಸ್ವತಂತ್ರ ಪ್ರಾಂತ ನಿರ್ಮಿಸಿಕೊಳ್ಳಬೇಕೆಂದು ಸೂಚಿಸುತ್ತೇವೆ.

ನಿಯಂತ್ರಣಗಳ ಅವಶ್ಯಕತೆ ?

ನಡುಗಾಲ ಸರಕಾರದ ಪೂರಯಿಕೆ ಮತ್ತು ಔದ್ಯೋಗಿಕ ಮಂತ್ರಿಗಳಾದ ಶ್ರೀ ಸಿ. ರಾಜಗೋಪಾಲಾಚಾರ್ಯರು ಮುಂಬಯಿ ತಾತಾ ಸೋಶಲ್ ಸಾಯನ್ಸ ಸಂಸ್ಥೆಯ ಪದವೀಧರರನ್ನುದ್ದೇಶಿಸಿ ಭಾಷಣಮಾಡುತ್ತ ಜಗತ್ತಿನಲ್ಲಿ ನಿಯಂತ್ರಣಗಳು ಶಾಶ್ವತವಾಗಿ ಉಳಿಯುವುವೆಂದು ಹೇಳಿದರು. ರಾಜಾಜಿಯಂಥ ಹೊಣೆಗಾರ ಜನರೇ ಹೀಗೆ ಹೇಳುತ್ತಿರುವದರಿಂದ ನಿಯಂತ್ರಣಗಳು ಇನ್ನುಮುಂದೆಯೂ ಉಳಿಯುತ್ತವೆಂದು ಹೇಳಲು ಅಭ್ಯಂತರವಿಲ್ಲ. ಮಾನವನ ಜೀವನವು ಇಂದು ಚಿತ್ರವಿಚಿತ್ರವಾಗಿ ಬೆಳೆದಿರುವದರಿಂದ ನಿಯಂತ್ರಣಗಳು ಶಾಶ್ವತ ಉಳಿಯುವವೆಂದು ರಾಜಾಜಿಯವರು ಅಭಿಪ್ರಾಯಪಟ್ಟಿದ್ದಾರೆ. ನಿಯಂತ್ರಣಗಳು ಅತ್ಯವಶ್ಯವೆಂದೆನಿಸಿದರೂ ಆಯಾ ಸರಕುಗಳು ನಿಯಂತ್ರಿತ ಬೆಲೆಗೆ ಜನರಿಗೆ ಸಿಕ್ಕುವಂತೆ ನೋಡಿಕೊಳ್ಳುವದು ಸರಕಾರದ ಕರ್ತವ್ಯವಾಗಿದೆ. ಬರಿ ನಿಯಂತ್ರಣಗಳನ್ನಿಡುವದರಿಂದ ಉದ್ದೇಶವೆಂದಿಗೂ ಸಾಧ್ಯವಾಗದು. ಆಯಾ ಪದಾರ್ಥಗಳ ಹರಿದಾಟದಮೇಲೆಯೂ ಒಳ್ಳೆ ಗಮನವಿಟ್ಟು ಎಲ್ಲೆಡೆಗೂ ಸರಿಯಾದ ರೀತಿಯಲ್ಲಿ ಅವೆಲ್ಲ ಪೂರಯಿಸಲ್ಪಡುವಂತೆ ಮತ್ತು ಬಳಸುವವರಿಗೆಲ್ಲ ಭೇದಭಿನ್ನತೆಗಳಿಲ್ಲದೇ ಅವು ದೊರೆಯುವಂತೆ ಯೋಜಿಸಬೇಕು. ಅಂದರೇನೆ ನಿಯಂತ್ರಣಗಳ ಉದ್ದೇಶ ಸಫಲವಾಗುವದು. ಸರಕುಗಳನ್ನು ನಿಯಂತ್ರಿಸದಿದ್ದರೆ ಎಲ್ಲರಿಗೂ ಅವು ಸಿಕ್ಕದೆ ರೊಕ್ಕವಿದ್ದ ಕೆಲ ಜನರು ಅವನ್ನೆಲ್ಲ ಸಂಗ್ರಹಿಸಿಟ್ಟು ಹೆಚ್ಚು ಹಣವನ್ನು ತೆಗೆದುಕೊಂಡು ಅವನ್ನೆಲ್ಲ ಅವರು ಕಳ್ಳಪೇಟೆಯಲ್ಲಿ ಮಾರುವ ಸಂಭವವುಂಟು. ಇದರಿಂದ ಬಡವರಿಗೆ ಏನೂ ಸಿಕ್ಕದೆ ಹೋಗುವ ಸಂಭವವೂ ಉಂಟು. ಅಂತೆಯೆ ನಿಯಂತ್ರಣಬೇಕೆಂದು ರಾಜಾಜಿ ಪ್ರಭೃತಿಗಳು ಪ್ರತಿಪಾದಿಸುವದುಂಟು. ಆದ್ದರೆ ನಿಯಂತ್ರಣವಿದ್ದರೂ ಎಲ್ಲರಿಗೂ ನಿಯಂತ್ರಿತ ಧಾರಣೆಗೆ ಸರಕು ಸಿಕ್ಕದಿರುವದನ್ನು ಪ್ರತಿಯೊಬ್ಬರು ದಿನಾಲು ಅನುಭವಿಸುತ್ತಿದ್ದಾರೆ. ಸರಕಾರದವರು ಇತ್ತ ಗಮನಿಸುವದವಶ್ಯವಾಗಿದೆ ನಿಯಂತ್ರಣದ ಅವಶ್ಯಕತೆಯಿಲ್ಲೆಂದು ನಾವು ಪ್ರತಿಪಾದಿಸದೆ ಇದ್ದರೂ ನಿಯಂತ್ರಿತ ಬೆಲೆಗೆ ಅವಶ್ಯಕ ಪದಾರ್ಥಗಳೆಲ್ಲ ದೊರೆವಂತೆ ನೋಡಿಕೊಳ್ಳುವುದು ಸರಕಾರದ ಮುಖ್ಯ ಕರ್ತವ್ಯವಾಗಿದೆ. ವಿಶೇಷತಃ ಆಹಾರ, ಬಟ್ಟೆ ಒಕ್ಕಲತನಕ್ಕೆ ಬೇಕಾಗುವ ಸಾಮಾನ ಮುಂತಾದವುಗಳು ನಿಯಂತ್ರಿತ ಬೆಲೆ ಸಿಕ್ಕೇತೀರುವಂತೆ ಯೋಜಿಸಬೇಕು. ಈ ಬಗೆಯ ಹೊಣೆಯನ್ನು ಸರಕಾರ ಹೊತ್ತುಕೊಂಡದ್ದಾದರೆ ನಿಯಂತ್ರಣ ಬೇಡೆಂದು ಯಾರೂ ಅಭಿಪ್ರಾಯಪಡಲಾರರೆಂಬುದು ಸುಸ್ಪಷ್ಟವಿದೆ.

ಆಯ ಸಿ ಎಸ್ ನೋಕರರು

ಬ್ರಿಟಿಶ ಸರಕಾರದವರು ೧೯೪೮ ನೇ ಜೂನದಲ್ಲಿ ಅಧಿಕಾರವನ್ನು ಒಪ್ಪಿಸಿ ಕೊಡುವರಾದ್ದರಿಂದ ಆಯ. ಸಿ. ಎಸ್., ಆಯ. ಪಿ. ಎಸ್. ಮೊದಲಾದ ಭಾರತ ಮಂತ್ರಿಗಳ ನವಕರರ ಭವಿತವ್ಯದ ಬಗ್ಗೆ ಒಳ್ಳೆ ಚರ್ಚೆ ನಡೆದುದು ನಮ್ಮ ವಾಚಕರ ಸ್ಮರಣೆಯಲ್ಲಿರಲು ಸಾಕು. ಈಗ ಈ ಸಂಬಂಧದಲ್ಲಿ ವೈಸರಾಯ ಲಾರ್ಡ ಲುಯಿ ಮೌಂಟಬ್ಯಾಟನ್ನರು ಪ್ರಕಟನೆಯೊಂದನ್ನು ಹೊರಡಿಸಿ ಈ ಸಂಬಂಧದಲ್ಲಿ ಸರಕಾರದ ನಿರ್ಣಯವನ್ನು ಸಾರಿಬಿಟ್ಟಿರುವರು. ಈ ಸಂಬಂಧದಲ್ಲಿ ಹಿಂದುಸ್ತಾನ ಸರಕಾರದ ಗೂಡ ಚರ್ಚೆ ಮಾಡಲು ಹೆಂಡರಸನ್ ಸಾಹೇಬರು ಹಿಂದುಸ್ತಾನಕ್ಕೆ ಬಂದಿದ್ದರೆಂಬುದೂ ಗೊತ್ತಿದ್ದ ವಿಷಯ. ಗೃಹಮಂತ್ರಿಗಳಾದ ಸರದಾರ ವಲ್ಲಭಭಾಯರು ಆಗ ತಮ್ಮ ಅಭಿಪ್ರಾಯವನ್ನು ಸ್ಪಷ್ಟಪಡಿಸಿರುವರು. ಅಧಿಕಾರ ತ್ಯಾಗಕ್ಕಿಂತ ಮೊದಲು ನೋಕರಿ ಬಿಟ್ಟು ಹೋಗುವವರಿಗೆ ಯಾವದೇ ಬಗೆಯ ಪರಿಹಾರ ಸಿಕ್ಕುವುದಿಲ್ಲೆಂದು ಸಾರಲಾಗಿದೆ. ಅಧಿಕಾರ ತ್ಯಾಗದ ನಂತರ ಪುನಃ ನೋಕರಿಯಲ್ಲಿ ತೆಗೆದುಕೊಳ್ಳಲು ಹಿಂದುಸ್ತಾನ ಸರಕಾರ ಒಪ್ಪದಿದ್ದರೆ ಅಂಥ ಹಿಂದೀ ನವಕರರಿಗೆ ಮಾತ್ರ ಪರಿಹಾರ ಸಿಕ್ಕುವುದು. ಹಿಂದಿನ ಕೆಲಸದ ಮೂಲಕ ಮುಂದಿನ ಪ್ರಗತಿ ಕೆಡುತಿದೆ ಅಥವಾ ಹೊಸ ನವಕರಿ ಸಮಾಧಾನಕರವಿಲ್ಲ ಇಲ್ಲವೆ ಭವಿತವ್ಯದ ಬಗ್ಗೆ ವಿವಂಚನೆಯಾಗಿದೆಂದು ಮುಂತಾಗಿ ಗವರ್ನರ ಜನರಲ್‌ರಿಗೆ ಮನದಟ್ಟು ಮಾಡಿಕೊಟ್ಟವರಿಗೂ ಪರಿಹಾರ ದೊರೆಯುವದು. ನಿವೃತ್ತರಾಗುವವರ ಪೆನಶನ್ ಅಥವಾ ಪ್ರಮಾಣಬದ್ಧ ಪೆನಶನ್ನಿನ ಹೊಣೆಯನ್ನು ಸರಕಾರ ಹೊತ್ತುಕೊಳ್ಳುವದು. ಬ್ರಿಟಿಶ ನೋಕರರು ಬೇರೊಂದು ಸರಕಾರದಲ್ಲಿ ಪೆನಶನ್ ದೊರೆಯಬಲ್ಲ ನೋಕರಿ ಹಿಡಿದರೆ ಅವರಿಗೆ ಪರಿಹಾರದ ಬದಲು ೫೦೦ ಪೌಂಡುಗಳ ಪುನರ್ನಿವೇಶನದ ಭತ್ತೆ ದೊರೆಯುವದು. ಅಧಿಕಾರ ತ್ಯಾಗದ ನಂತರವೂ ಹಿಂದುಸ್ತಾನ ಸರಕಾರದ ನೋಕರಿ ಮಾಡಲು ಒಪ್ಪುವ ನೋಕರರಿಗೆ ಈಗಿನಂತೆ ಸಂಬಳ ರಜೆ ಪೆನಶನ್ ಹಕ್ಕು ಮುಂತಾದವುಗಳು ದೊರೆವುವು. ನೋಕರಿ ಬಿಟ್ಟು ಹೋಗುವವರಿಗೆ ಅವರವರ ಸರ್ವಿಸಿನ ಪ್ರಮಾಣದಂತೆ ಪರಿಹಾರವನ್ನು ಗೊತ್ತುಮಾಡಿದೆಂದು ಮುಂತಾಗಿ ಈ ಪ್ರಕಟನೆಯಲ್ಲಿ ಸಾರಲಾಗಿದೆ. ವೈಸರಾಯರು ಹೊರಡಿಸಿದ ಈ ಪ್ರಕಟನೆಯಿಂದ ನೋಕರರಿಗೆ ಯಾವದೇ ಬಗೆಯ ಅನ್ಯಾಯವಾದಂತಾಗಲಿಲ್ಲ. ಈ ಮೊದಲು ನಾವು ಅಭಿಪ್ರಾಯಪಟ್ಟಂತೆ ಬ್ರಿಟಿಶರು ಇಲ್ಲಿಂದ ಹೊರಟು ಹೋದ ಬಳಿಕವೂ ಈ ನವಕರರು ನೋಕರಿಯಲ್ಲಿ ಉಳಿದು ಹಿಂದುಸ್ತಾನದ ಸೇವೆ ಸಲ್ಲಿಸಬಹುದಾಗಿದೆ. ಲಾರ್ಡ್ಸ ಮತ್ತು ಕಾಮನ್ಸ ಸಭೆಯಲ್ಲಿಯೂ ಈ ಪ್ರಕಟನೆಯನ್ನು ಘೋಷಿಸಿ ಒಮ್ಮೆ ಈ ಪ್ರಶ್ನೆಯನ್ನು ಬ್ರಿಟಿಶ ಸರಕಾರದವರು ಸಮಾಧಾನಕರವಾಗಿ ಬಿಡಿಸಿದ್ದು ಸಂತೋಷದ ಸಂಗತಿಯಾಗಿದೆ.

ಘಟನಾ ಸಮಿತಿಯ ಸಭೆ

ಘಟನಾ ಸಮಿತಿಯ ಪ್ರಾಸ್ತಾವಿಕ ಅಧಿವೇಶನದ ಮೂರನೆಯ ಸಭೆ ಕಳೆದ ೨೮ ನೆಯ ತಾರೀಖಿನಿಂದ ಪ್ರಾರಂಭವಾಗಿದೆ. ಈ ಸಲದ ಕೊನೆಯ ಪ್ರಾಸ್ತಾವಿಕ ಅಧಿವೇಶನದಲ್ಲಿಯಾದರೂ ಮುಸ್ಲಿಂ ಲೀಗಿನವರು ಭಾಗವಹಿಸಿ ಹಿಂದುಸ್ತಾನದ ರಾಜ್ಯಘಟನೆಯನ್ನು ಸಿದ್ಧ ಮಾಡುವಲ್ಲಿ ಸಹಾಯಕರಾಗಬಹುದೆಂದು ಆಶಿಸಲಾಗಿತ್ತು. ಆದರೆ ಮುಸ್ಲಿಂ ಲೀಗಿನವರು ಘಟನಾ ಸಮಿತಿಯಲ್ಲಿ ಸೇರುವದು ಮೊದಲಿನಕಿಂತ ಹೆಚ್ಚು ಸಂಶಯಾಸ್ಪದವಾಗಿದೆ. ಜಿನ್ನಾರವರು ತಮ್ಮ ಹಟಮಾರಿತನದ ಧೋರಣವನ್ನು ಬಿಟ್ಟುಗೊಟ್ಟಿಲ್ಲ: ಬಿಟ್ಟುಗೊಡುವ ಲಕ್ಷಣಗಳೂ ತೋರುವುದಿಲ್ಲ. ಈ ಬಗೆಯ ಅನಿಶ್ಚಿತ ಪರಿಸ್ಥಿತಿಯಲ್ಲಿಯೆ ಅದು ಜೂನದ ವರೆಗೆ ಮುಂದೆ ಬೀಳಬಹುದೆಂದು ಹೇಳಲಾಗುತ್ತದೆ. ವೈಸರಾಯ ಲಾರ್ಡ ಮೌಂಟ ಬ್ಯಾಟನ್‌ರಿಗೆ ತಮ್ಮ ಯೋಜನೆಯ ಬಗ್ಗೆ ಜನ ಬೆಂಬಲವನ್ನು ಪಡೆಯುವುದಕ್ಕಾಗಿ ಅವಕಾಶ ಕೊಡಲು ಮತ್ತು ಮುಸ್ಲಿಂಲೀಗಿನವರಿಗೂ ಇನ್ನೊಂದು ಸಲ ತಮ್ಮ ಧೋರಣದ ಬಗ್ಗೆ ಪುನರ್ವಿಮರ್ಶೆ ಮಾಡಲು ಸಂಧಿಯನ್ನೂ ಕೊಡಲು ಅಧಿವೇಶನವನ್ನು ಮುಂದಕ್ಕೆ ಹಾಕಲಾಗುವದೆಂದು ಹೇಳಲಾಗುತ್ತದೆ. ಏನೇ ಇದ್ದರೂ ಘಟನಾ ಸಮಿತಿಯ ಭವಿತವ್ಯ ಅಷ್ಟೊಂದು ಉಜ್ವಲವಾಗಿಲ್ಲೆಂಬುದು ಸ್ಪಷ್ಟವಾದವಾಗಿದೆ. ಡಾಕ್ಟರ ರಾಜೇಂದ್ರ ಪ್ರಸಾದರು ಈ ಸಲದ ಅಧಿವೇಶನದ ಪ್ರಾರಂಭ ಭಾಷಣ ಮಾಡುತ್ತ ಸದಸ್ಯರಿಗೆ ಕೆಲ ಮಹತ್ವದ ಮಾತುಗಳನ್ನು ಹೇಳಿದರು. ಹಿಂದುಸ್ತಾನದ ವಿಭಜನೆಗೆ ಸಿದ್ಧರಾಗಿರಿ, ಇಷ್ಟೇ ಅಲ್ಲ ಕೆಲ ಪ್ರಾಂತಗಳ ವಿಭಜನೆಗೆ ಸಿದ್ಧರಾಗಿರೆಂದು ಘಟನಾ ಸಮಿತಿಯ ಅಧ್ಯಕ್ಷರು ಹೇಳಿದ್ದನ್ನೋದಿ ಹಿಂದುಸ್ತಾನದ ದುರ್ದೈವವಿನ್ನೂ ತೀರಿಲ್ಲೆಂದು ವಿಷಾದಿಸಬೇಕಾಗಿದೆ. ಆದರೆ ಬರಿ ವಿಷಾದ ಪ್ರದರ್ಶಿಸುತ್ತ ಕೊಡುವದರಿಂದ ಯಾವ ಪುರುಷಾರ್ಥವು ಸಾಧಿಸದು. ಬಂದುದನ್ನೆಲ್ಲ ಧೈರ್ಯದಿಂದ ಎದುರಿಸಲೇಬೇಕು. ಯಾವ ಸಂದರ್ಭದಲ್ಲಿಯೂ ಹಿಂದುಸ್ತಾನದ ಅಖಂಡತ್ವವನ್ನು ಕಾಯ್ದುಕೊಳ್ಳಬೇಕೆಂದು ಪ್ರತಿಪಾದಿಸುತಿದ್ದ ಕಾಂಗ್ರೆಸ್ಸಿಗರೇ ಈಗ ಹಿಂದುಸ್ತಾನದ ವಿಭಜನೆಗೆ ಸಿದ್ಧರಾಗಬೇಕಾದರೆ ಅವರು ಎಷ್ಟೊಂದು ಕಳವಳಪಡುತ್ತಿರಬಹುದೆಂಬುದು ಕಲ್ಪಿತಲಭ್ಯವಾಗಿದೆ. ಆದರೂ ಎಲ್ಲವನ್ನೂ ಧೈರ್ಯದಿಂದ ಎದುರಿಸುವದೇ ಧೀರರ ಲಕ್ಷಣವಲ್ಲವೆ?

ಸ್ವಯಂ ನಿರ್ಣಯ ತತ್ವ

ಸ್ವಯಂ ನಿರ್ಣಯ ತತ್ವದನ್ವಯ ತಾವು ಪಾಕಿಸ್ತಾನವನ್ನು ಬೇಡುತ್ತಿರುವದಾಗಿ ಜಿನ್ನಾ ಪ್ರಭೃತಿಗಳು ಹೇಳುತ್ತಿರುವರು. ಅದೇ ತತ್ವದ ಪ್ರಕಾರ ಪಂಜಾಬ ಮತ್ತು ಬಂಗಾಲ ಪ್ರಾಂತಗಳನ್ನು ವಿಭಾಗಿಸಬೇಕೆಂದು ಕಾಂಗ್ರೆಸ್ಸಿಗರು ಕೇಳುತ್ತಿರುವರು. ಈ ಸ್ವಯಂ ನಿರ್ಣಯ ತತ್ವದನ್ವಯ ಪಾಕಿಸ್ತಾನದ ಹಟಹಿಡಿದರೆ ಕಾಂಗ್ರೆಸ್ಸು ಯಾರ ಮೇಲೆಯೂ ಒತ್ತಾಯಪಡಿಸುವದಿಲ್ಲೆಂದು ಆಶ್ವಾಸನ ಕೊಟ್ಟಿದೆ. ಆದರೆ ಈ ಸ್ವಯಂ ನಿರ್ಣಯತತ್ವವು ಕೇವಲ ಮುಸಲ್ಮಾನರಿಗಷ್ಟೆ ಅನ್ವಯಿಸತಕ್ಕದ್ದು ಅಲ್ಲಲ್ಲಿ ಇರುವ ಬಹುಸಂಖ್ಯಾಕ ಪಕ್ಷಗಳಿಗೆ ಈ ತತ್ವ ಅನ್ವಯಿಸಲ್ಪಡಬಾರದು; ಪಡಲಾರದು ಎಂದು ಜಿನ್ನಾ ಪ್ರಭೃತಿಗಳು ಹೇಳುತ್ತಿರುವರು. ಇದಾವನ್ಯಾಯವೊ ತಿಳಿಯದು. ಬಂಗಾಲ ಪಂಜಾಬಗಳಲ್ಲಿಯ ಬಹುಸಂಖ್ಯಾಕ ಹಿಂದೂ ಶೀಖರಿಗೆ ಸ್ವಯಂ ನಿರ್ಣಯ ತತ್ವದನ್ವಯ ಸ್ವತಂತ್ರ ಪ್ರಾಂತವನ್ನು ಕೊಡಲಿಕ್ಕೆ ಲೀಗಿನವರು ಏಕೆ ಸಿದ್ಧರಾಗಬಾರದೊ ತಿಳಿಯದು. ತಾವು ಮಾತ್ರ ಸ್ವಯಂನಿರ್ಣಯ ತತ್ವದ ಪ್ರಯೋಜನ ಪಾಕಿಸ್ತಾನವನ್ನು ಹೊಂದಬೇಕು. ಆದರೆ ಉಳಿದ ಬಹುಸಂಖ್ಯಾಕರು ಪಾಕಿಸ್ತಾನ ಪ್ರದೇಶದಲ್ಲಿಯೆ ಲೀಗಿನವರ ಬೊಗಸೆಯಲ್ಲಿ ನೀರು ಕುಡಿಯುವದರಲ್ಲಿ ಸಮಾಧಾನ ಹೊಂದಬೇಕು. ಇದೆಲ್ಲಿಯ ನ್ಯಾಯ! ಪಂಜಾಬ ಬಂಗಾಲಗಳ ವಿಭಜನೆಯ ಬೇಡಿಕೆಯು ವೈಷಮ್ಯದಿಂದ ಪ್ರೇರಿತವಾಗಿದೆಂದೂ ವೈಸರಾಯರೂ ಬ್ರಿಟಿಶ ಸರಕಾರದವರೂ ಆ ಬಲೆಯಲ್ಲಿ ಬಿದ್ದು ಘೋರ ಪ್ರಮಾದಕ್ಕೆ ಕಾರಣರಾಗಬಾರದೆಂದೂ ಜಿನ್ನಾ ಸಾಹೇಬರು ಪ್ರಸಿದ್ಧಿಸಿದ್ದಾರೆ. ಪಂಜಾಬ ಮತ್ತು ಬಂಗಾಲಗಳವಿಭಜನೆಯ ಬೇಡಿಕೆಯು ಮುಸ್ಲಿಂ ಲೀಗಿನ ಲಾಹೋರ ಗೊತ್ತುವಳಿಯನ್ನೇ ಅನುಸರಿಸಿದೆಂದು ಡಾ. ರಾಜೇಂದ್ರಪ್ರಸಾದರು ಸ್ಮರಣೆಗೆ ತಂದು ಕೊಟ್ಟಿದ್ದಾರೆ. ಅವಶ್ಯವೆನಿಸಿದ ಪ್ರಾದೇಶಿಕ ಹೆಚ್ಚು ಕಡಿಮೆಗಳನ್ನು ಮಾಡಿಕೊಂಡು ಭೌಗೋಲಿಕ ದೃಷ್ಟಿಯಿಂದ ಹತ್ತಿಕೊಂಡಿದ್ದ ಭಾಗಗಳನ್ನು ಒಂದುಗೂಡಿಸಿ ವಿಭಾಗಗಳನ್ನು ಕಲ್ಪಿಸಬೇಕು. ಯಾವ ಪ್ರಮಾಣದಲ್ಲಿ ಮುಸಲ್ಮಾನರು ಬಹುಸಂಖ್ಯಾಕರಾಗಿರುವರೋ ಅಂಥ ಪ್ರದೇಶಗಳನ್ನು ಒಂದುಗೂಡಿಸಿ ಸ್ವತಂತ್ರ ರಾಷ್ಟ್ರ ರಚಿಸಬೇಕು ಇಂಥ ರಾಷ್ಟ್ರಗಳಲ್ಲಿ ಸೇರುವ ಘಟಕಗಳಿಗೂ ಸ್ವಾತಂತ್ರ್ಯ ಮತ್ತು ಸಾರ್ವಭೌಮತ್ವವಿರಬೇಕೆಂದು ಆ ಗೊತ್ತುವಳಿಯಲ್ಲಿ ಹೇಳಿದೆ. ಲೀಗಿನವರ ವಿರುದ್ಧ ಯಾರೂ ಯಾವದೇ ಕ್ರಮಕೈಗೆತ್ತಿಕೊಂಡರೂ ಘೋರ ಪ್ರಮಾದ ಮಾಡಿದಂತಾಗುತ್ತದೆ. ಅದರಿಂದ ಅನರ್ಥಗಳು ಸಂಭವಿಸಬಹುದೆಂದು ಮುಂತಾಗಿ ಡಾ. ಜಿನ್ನಾ ಸಾಹೇಬರು ಅಂಜಿಕೆ ಹಾಕುತ್ತಿರುವರು. ತಮ್ಮ ಪಾಶವೀ ಬಹುಮತದ ಮತ್ತು ಶಸ್ತ್ರಗಳ ಬಲದಿಂದಲೆ ಅವರು ಹೀಗೆ ಮಾಡುತ್ತಿರುವರೆಂಬುದು ಸುಸ್ಪಷ್ಟವಿದೆ. ಆದರೆ ಲೀಗಿನ ಇಂಥ ಬೆದರಿಕೆಗಳಿಗೆ ಬ್ರಿಟಿಶ್ ಸರಕಾರವಾಗಲಿ ಹಿಂದೀ ಧುರೀಣರಾಗಲಿ ಸೊಪ್ಪು ಹಾಕುವ ದಿನಗಳೀಗ ಉಳಿದಿಲ್ಲೆಂಬುದನ್ನು ಡಾ. ಜಿನ್ನಾ ಸಾಹೇಬರು ಬೇಗ ತಿಳಿದಷ್ಟು ಹಿತ. ಪರಸ್ಪರ ವಿಚಾರವಿನಿಮಯದಿಂದ ಈ ಸ್ವಯಂ ನಿರ್ಣಯ ತತ್ವಕ್ಕೆ ಲೀಗಿನವರು ಒಪ್ಪದಿದ್ದರೆ ಹಿಂದುಸ್ತಾನದಲ್ಲಿ ಯಾವದೇ ಕಲಹ ನಡೆವುದೆಂಬುದು ನಿಶ್ಚಿತ. ಅಂಥ ದುರ್ಘಟನೆಗೆ ಯಾರೂ ಅವಕಾಶ ಕೊಡದಿರುವುದು [illegible] ಹಿತಕರ.

ಬಂಗಾಲ ಪಂಜಾಬ ವಿಭಜನೆಯ ವಿರುದ್ಧ ಜಿನ್ನಾರ ಕೂಗು— ಹಿಂದುಸ್ತಾನದಲ್ಲಿಯೂ ಚಿಕ್ಕ "ಪಾಕಿಸ್ತಾನ"ಗಳನ್ನು ಬೇಡುವರು ?—

ವಾಯಿಸರಾಯರ ಹೊಸ ಯೋಜನೆ

ವಾಯಿಸರಾಯರ ಗಡಿನಾಡ ಮತ್ತು ಪಂಜಾಬ ಸಂಚಾರದಿಂದ ಹೊಸದಿಲ್ಲಿಯಲ್ಲಿ ರಾಜಕೀಯ ಚಟುವಟಿಕೆ ಕಡಿಮೆಯಾಗಿದ್ದರೂ ತಮ್ಮ ತಮ್ಮ ಸ್ಥಿತಿಯನ್ನು ಭದ್ರಗೊಳಿಸಲು ಎರಡೂ ಪಕ್ಷಗಳು ಚಟುವಟಿಕೆಗಳನ್ನು ನಡೆಸುತ್ತಲೇ ಇದ್ದವು. ವಾಯಿಸರಾಯರು ತಾ ೩೦ಕ್ಕೆ ತಿರುಗಿ ಬಂದಿರುವದರಿಂದ ಪುನಃ ಈ ಚಟುವಟಿಕೆಗಳು ಪ್ರಾರಂಭವಾಗಬಹುದು. ಮಹಾತ್ಮಾ ಗಾಂಧೀಯವರಿಗೆ ಜವಾಹರರಿಂದ ದಿಲ್ಲಿಗೆ ಕರೆಬಂದದ್ದು ಇದರ ದ್ಯೋತಕ.

ಕಾಂಗ್ರೆಸ್ಸು ಹಿಂದುಸ್ತಾನದ ವಿಭಜನೆಯನ್ನು ವಿರೋಧಿಸುವದಿಲ್ಲವೆಂಬ ಮಾತು ಈಗ ನಿಸ್ಸಂಶಯವಾಗಿದೆ. ಘಟನಾ ಸಮಿತಿಯ ಅಧ್ಯಕ್ಷರಾದ ಡಾ. ರಾಜೇಂದ್ರ ಪ್ರಸಾದರು ಸಮಿತಿಯ ಸಭೆಯಲ್ಲಿ ಹಿಂದುಸ್ತಾನದ ವಿಭಜನೆಗೆ ಮಾತ್ರವಲ್ಲ. ಪ್ರಾಂತಗಳ ವಿಭಜನೆಗೂ ಸಿದ್ಧರಾಗಿ ನಾವು ಘಟನೆಯನ್ನು ಸಿದ್ಧಗೊಳಿಸಬೇಕಾದೀತೆಂದು ಹೇಳಿದ್ದೇ ಇದಕ್ಕೆ ಸಾಕ್ಷಿ. ಈಗ ಪ್ರಾಂತಗಳ ವಿಭಜನೆಯ ಪ್ರಶ್ನೆಯೊಂದೇ ಉಳಿದಿದೆ.

ಮೌಂಟ ಬ್ಯಾಟನ್ ಯೋಜನೆ

ಮೌಂಟ ಬ್ಯಾಟನ್ನರು ಹಿಂದೀ ಮುಂದಾಳುಗಳೊಡನೆ ನಡೆಸಿದ ಚರ್ಚೆಯ ಫಲವಾಗಿ ಅವರೂ ಅಖಂಡ ಹಿಂದುಸ್ತಾನದ ಆಸೆಯನ್ನು ಬಿಟ್ಟುಕೊಟ್ಟಿದ್ದಾರೆಂದು ಹೇಳಲಾಗಿದೆ. ಈ ಹೊಸ ಬೆಳಕನ್ನು ಅನುಲಕ್ಷಿಸಿ ಅವರು ಅಧಿಕಾರತ್ಯಾಗದ ವಿಷಯಕ್ಕೆ ಒಂದು ಯೋಜನೆಯನ್ನು ರಚಿಸಿದ್ದಾರೆಂದೂ ಅದು ಮೇ ೧೬ರ ಘೋಷಣೆಗೆ ತೀರ ವ್ಯತಿರಿಕ್ತವಾಗಿರುವದರಿಂದ ಆ ಬಗ್ಗೆ ಬ್ರಿಟಿಶ ಸರಕಾರದ ಸಮ್ಮತಿಯನ್ನು ಪಡೆಯಲು ತಮ್ಮ ಸಲಹೆಗಾರರಾದ ಲಾರ್ಡ ಇಸ್ಮೇಯವರನ್ನು ಅವರು ಲಂಡನ್ನಿಗೆ ಕಳಿಸುವರೆಂದೂ ತಿಳಿಯುತ್ತದೆ. ಈ ವಿಷಯ ಅತ್ಯಂತ ಮಹತ್ವದ್ದಾದುದರಿಂದ ಸ್ವತಃ ತಾವೇ ಹೋಗಬೇಕಾಗಿದ್ದು ವಿಹಿತವಾಗಿದ್ದರೂ ಹಿಂದುಸ್ತಾನದ ಪ್ರಕ್ಷುಬ್ಧ ಪರಿಸ್ಥಿತಿಯನ್ನು ನೋಡಿ ಅವರು ತಮ್ಮ ಸಲಹೆಗಾರರನ್ನು ಕಳಿಸುವರಂತೆ. ಅವರ ಹೊಸ ಯೋಜನೆ ಹಿಂದುಸ್ತಾನ ಪಾಕಿಸ್ತಾನಗಳಿಗೆ ಪ್ರತ್ಯೇಕ ಘಟನಾ ಸಮಿತಿಗಳ ಸ್ಥಾಪನೆ; ಪಂಜಾಬ ಬಂಗಾಲಗಳ ವಿಭಜನೆ ಈ ಎರಡು ಮುಖ್ಯ ತತ್ವಗಳನ್ನು ಅವಲಂಬಿಸಿದೆಯಂತೆ. ಪಾಕಿಸ್ತಾನ ಘಟನಾ ಸಮಿತಿಯ ಉಲ್ಲೇಖ ಬ್ರಿಟಿಶ ಸರಕಾರದ ಯಾವ ಘೋಷಣೆಯಲ್ಲಿಯೂ ಇಲ್ಲ, ಈಗ ವಿಭಜನೆ ಅನಿವಾರ್ಯವೆಂದು ಸಿದ್ಧವಾದ ಮೇಲೆ ಅಲ್ಲಿಯೂ ಘಟನಾ ಸಮಿತಿ ಬೇಕೇ ಬೇಕಾಗುವದು.

ಬಂಗಾಲ ಪಂಜಾಬ ವಿಭಜನೆಗೆ ಜಿನ್ನಾರ ವಿರೋಧ

ಈ ಪ್ರಕಾರದ ಪಾಕಿಸ್ತಾನದ ತತ್ವಕ್ಕೆ ಮನ್ನಣೆ ದೊರಕಿಸಿಕೊಳ್ಳುವಲ್ಲಿ ಜಿನ್ನಾ ಸಾಹೇಬರು ಯಶಸ್ವಿಯಾಗಿದ್ದಾರೆ. ಅದಕ್ಕಾಗಿ ಅವರು ಕಳೆದ [illegible]ದಿಂದಲೂ ಹೆಣಗಿದ್ದರ ಫಲ ಈಗ ದೊರಕಿದಂತಾಗಿದೆ. ಪಾಕಿಸ್ತಾನ ಕೈಗೆಬಂದಂತಾಯಿತೆಂದು ಅವರಿಗೆ ಖಂಡಿತ ಭರವಸೆಯುಂಟಾದ್ದರಿಂದ ಈಗ ತಮ್ಮ ಬೇಡಿಕೆಯನ್ನು, ಹಿಟ್ಲರನಂತೆ ಇನ್ನಷ್ಟು ವಿಸ್ತರಿಸುವ ಹಂಚಿಕೆಯಲ್ಲಿ ಅವರು ತೊಡಗಿದ್ದಾರೆ. ಪಂಜಾಬ ವಿಭಜನೆಯು [illegible] ವಿಭಜನೆಗಾಗಿ ಕೂಡ ಕೂಗೆದ್ದು ಹಲವು ವಾರಗಳಾದರೂ ಆ ಬಗ್ಗೆ ಏನನ್ನೂ ಹೇಳದ ಅವರು ಈಗ ಆ ಪ್ರಶ್ನೆಯನ್ನೆತ್ತಿಕೊಂಡಿದ್ದಾರೆ. ಪಂಜಾಬ ಬಂಗಾಲಗಳ ವಿಭಜನೆಯ ಬೇಡಿಕೆ [illegible]ರಿತವಾದುದು. ಹಿಂದುಸ್ತಾನದ ವಿಭಜನೆ ಅನಿವಾರ್ಯವೆಂದು ಸ್ಪಷ್ಟವಾದಮೇಲೆ ಕಾಂ[illegible] ಹಿಂದುಗಳು ಸೇಡುತೀರಿಸಿಕೊಳ್ಳಲು ಹಾಗೂ ಹರಕಮುರುಕು ಹುಳುತಿಂದ ಪಾಕಿಸ್ತಾನದಿಂದ ಫಲವಿಲ್ಲೆಂದು ಮುಸ್ಲಿಮರನ್ನು [illegible] ಈ ಹಂಚಿಕೆ ಹೂಡಿದ್ದಾರೆಂದೂ ಈ [illegible] ಬ್ರಿಟಿಶ ಸರಕಾರ ಬೀಳಕೂಡದ್ದೆಂದೂ [illegible] ಎಚ್ಚರಿಕೆ ಕೊಟ್ಟಿದ್ದಾರೆ. ನೂರಾರು [illegible] ಆರ್ಥಿಕ ಘಟಕವಾಗಿ [illegible] ಪ್ರಾಂತಗಳನ್ನು ಇಬ್ಭಾಗಿಸಿದರೆ [illegible] ಕಾರಣವಾಗುವದು. [illegible] ಈ ಪ್ರಾಂತ ವಿಭಜನೆಯ [illegible] ಇಲ್ಲ ಪಾಕಿಸ್ತಾನ [illegible] ಮಾತ್ರ [illegible] ಭೂಮಿಬೇಕೆಂಬ ತತ್ವವನ್ನು ಆಧರಿಸಿದೆ. ಪ್ರಾಂತ ವಿಭಜನೆಯನ್ನು ಬೇಕೆಂಬ ಹಿಂದುಗಳ ಬೇಡಿಕೆ ಹಾಗಲ್ಲ. ಹಿಂದುಗಳಿಗೆ ಏಳು ವಿಸ್ತಾರ ಪ್ರಾಂತಗಳುಳ್ಳ ಹಿಂದುಸ್ತಾನ ಮಾತೃಭೂಮಿಯಾಗಿಯೆ ಉಳಿಯುವದು. ಅದರ ಮಾತೃಭೂಮಿಯಲ್ಲಿ ಹಿಂದುಗಳೂ ಮುಸ್ಲಿಮರೂ ತಂತಮ್ಮ ಮಾತೃಭೂಮಿಗಳಿಗೆ ಇಚ್ಛೆಯಿದ್ದರೆ ವಲಸೆ ಹೋಗಬಹುದು. ಅದ್ದರಿಂದ ಕಡೆಗಿರುವ ೬ ಪ್ರಾಂತಗಳನ್ನೊಳಗೊಂಡ (ಸಿಂಧ, ಬಲೂಚಿಸ್ಥಾನ, ಪಂಜಾಬ, ಗಡಿನಾಡ, ಬಂಗಾಲ, ಆಸಾಮ) ಪಾಕಿಸ್ತಾನ ಸ್ಥಾಪನೆಯ ಬೇಡಿಕೆಯೆ ಮುಸ್ಲಿಮ ಲೀಗಿನ ಬೇಡಿಕೆಯೆಂದು ಅವರು ಒತ್ತಿ ಹೇಳಿದರು. ೧೯೪೮ರೊಳಗೆ ಹಿಂದುಸ್ತಾನ ಪಾಕಿಸ್ತಾನಗಳಲ್ಲಿ ಹಿಂದೀ ಸೈನ್ಯವನ್ನು ವಿಭಜಿಸಿ ಬ್ರಿಟಿಶರು ಹೊರಟು ಹೋಗಬೇಕೆಂದು ಅವರ ಅಭಿಪ್ರಾಯ. ಹಿಂದೂ— ಮುಸ್ಲಿಂ ಜನರನ್ನು ಹಿಂದುಸ್ತಾನ ಪಾಕಿಸ್ತಾನಗಳಲ್ಲಿ ವರ್ಗಾಯಿಸುವ ಬಗ್ಗೆ ಎರಡೂ ಪ್ರಾಂತಗಳ ಘಟನಾ ಸಮಿತಿಗಳು ಸಂಧಾನ ನಡೆಸಬಹುದೆಂದೂ ಅವರ ಹೇಳಿಕೆ.

ಬಂಗಾಲ ಮುಖ್ಯ ಮಂತ್ರಿ ಸುಹ್ರವರ್ದಿಯವರೂ ಒಂದು ಹೇಳಿಕೆ ಹೊರಡಿಸಿ ಬಂಗಾಲ ವಿಭಜನೆಯ ಬೇಡಿಕೆಯನ್ನು ಖಂಡಿಸಿದ್ದಾರೆ. ಅದರಿಂದ ಹಿಂದುಗಳಿಗೇ ಹಾನಿ ಹೆಚ್ಚು, ಬಂಗಾಲಿಗಳೆಲ್ಲ ಒಂದು, ವಿಭಕ್ತ ಹಿಂದುಸ್ತಾನದಲ್ಲಿ ಸ್ವತಂತ್ರ ಬಂಗಾಲವಾದರೆ ಅದರಲ್ಲಿ ಹಿಂದುಗಳು ಬಲಿಷ್ಠರಾಗಿಯೆ ಉಳಿಯುವರು, ಮುಸ್ಲಿಮರು ತಮ್ಮ ಅತ್ಯಲ್ಪ ಬಹುಮತದಿಂದ ಹಿಂದುಗಳನ್ನು ಹತ್ತಿಕ್ಕಲಾರರು. ಇತ್ಯಾದಿಯಾಗಿ ಅವರು ಹಿಂದುಗಳ ಮನವೊಲಿಸಲು ಪ್ರಯತ್ನಿಸಿದ್ದಾರೆ.

ಹೊಸ ಬೇಡಿಕೆ?

ಇಷ್ಟು ಮಟ್ಟಿಗೆ ಹೊಸದೇನೂ ಇಲ್ಲ. ಆದರೆ ಇದಕ್ಕಿಂತ ದುಷ್ಟವಾದ ಇನ್ನೊಂದು ಸಂಚು ನಡೆದಿದೆಯೆಂದು ಸುದ್ದಿ ಬಂದಿದೆ. ಪಾಕಿಸ್ತಾನ ತತ್ವಕ್ಕೆ ಎಲ್ಲ ಪಕ್ಷಗಳ ಒಪ್ಪಿಗೆ ಪಡೆದಂತಾಯಿತೆಂಬ ವಿಶ್ವಾಸ ಹುಟ್ಟಿದೊಡನೆ ಜಿನ್ನಾ ಸಾಹೇಬರು ಈಗ ಹಿಂದುಸ್ತಾನದಲ್ಲಿಯೂ ಅಲ್ಲಲ್ಲಿ ಮುಸ್ಲಿಂ ದುರ್ಗಗಳನ್ನು ಸ್ಥಾಪಿಸಬೇಕೆಂದು ಸಾಧಿಸತೊಡಗಿದ್ದಾರಂತೆ. ಈಗಾಗಲೆ ಪ್ರಾಂತಿಕ ಮುಸ್ಲಿಂ ಲೀಗುಗಳಿಗೆ ಪ್ರಾಂತಿಕ ಪ್ರಾದೇಶಿಕ ಮಂತ್ರಿ ಮಂಡಲಗಳ ಸ್ಥಾಪನೆಗಾಗಿ ಚಳವಳಿ ಹೂಡಲು ಅವರು ಆದೇಶ ಕಳಿಸಿದ್ದಾರೆ. ಅರ್ಥಾತ್ ಪ್ರತಿ ಪ್ರಾಂತದಲ್ಲೂ ಅಲ್ಲಲ್ಲಿ ಮುಸ್ಲಿಂ ಪ್ರಜೆಗಳನ್ನು ಕೂಡಿಹಾಕಿ ಪ್ರತ್ಯೇಕ ಮಂತ್ರಿಮಂಡಲಗಳನ್ನು ಅವರಿಗೆ ಕೊಡಬೇಕೆಂದು ಅವರು ಬೇಡುವರಂತೆ. ಯುಕ್ತಪ್ರಾಂತದ ಲಖನೌ, ಬರೇಲಿ, ಸಹರಾನಪುರಗಳನ್ನೊಳಗೊಂಡ ಮುಸ್ಲಿಂ "ದುರ್ಗ" ಸ್ಥಾಪಿಸುವ ಸಂಬಂಧದಲ್ಲಿ ಅಂಕಿ ಸಂಖ್ಯೆಗಳನ್ನು ಕಲೆಹಾಕಲು ಅಲೀಗಡ ವಿಶ್ವವಿದ್ಯಾಲಯದ ಇಬ್ಬರು ಪ್ರೊಫೆಸರರಿಗೆ ಈಗಾಗಲೆ ಸಂದೇಶ ಹೋಗಿದೆ. ಈ ಬೇಡಿಕೆಯನ್ನು ಜಿನ್ನಾ ಸಾಹೇಬರು ಪಂಜಾಬ ಬಂಗಾಲ ವಿಭಜನೆಯ ಚಳವಳಿಗೆ ಪ್ರತಿಯಾಗಿ ಮುಂದೊಡ್ಡಿರಬಹುದು. ಮೇಲೆ ಹೇಳಿದ ಅವರ ಹೇಳಿಕೆಯಲ್ಲಿ ಇದರ ಗಂಧ ಕಾಣಿಸುತ್ತದೆ. ಪಂಜಾಬ ಬಂಗಾಲಗಳ ವಿಭಜನೆಯ ತತ್ವವನ್ನೊಪ್ಪಿದರೆ ಹಿಂದೂ ಪ್ರಾಂತಗಳಿಗೂ ಅದೇ ತತ್ವವನ್ನನ್ವಯಿಸಬೇಕಾಗುವದು. ಆಗ ಹಿಂದುಸ್ತಾನ ಛಿನ್ನವಿಚ್ಛಿನ್ನವಾಗಿ ಕೋಲಾಹಲವಾದೀತು ಎಂದು ಸೂಚಿಸಿದ್ದಾರೆ.

ಶಾಂತಿಯಿಂದ ಅಧಿಕಾರತ್ಯಾಗವಿಲ್ಲ?

ಅಂತೂ ಜಿನ್ನಾರ ಈ ಹೇಳಿಕೆಯಲ್ಲಿ ಹೊರಗೆ ತೋರುವದಕ್ಕಿಂತ ಗಂಭೀರವಾದ ಅಂಶಗಳು ಅಡಕವಾಗಿವೆಯೆನ್ನಬಹುದು. ಪಾಕಿಸ್ತಾನ ತತ್ವವನ್ನು ಮಾತ್ರ ಅಂಗೀಕರಿಸಿದರೆ ಸಮಸ್ಯೆಯ ಪರಿಹಾರವಾಗುತ್ತಿಲ್ಲವೆಂದು ಅದು ಎಚ್ಚರಿಕೆ ಕೊಡುವಂತಿದೆ. ಕಾಂಗ್ರೆಸ್ಸಿನ ಶಾಂತಿಪ್ರಿಯತೆಯ ದುಷ್ಪ್ರಯೋಜನ ಪಡೆದು ಅಲ್ಲ ಸಲ್ಲದ ಬೇಡಿಕೆಗಳನ್ನು ದೊರಕಿಸಿಕೊಳ್ಳುವ ಜಿನ್ನಾ ಸಾಹೇಬರ ತೃಷ್ಣೆಗೆ ಅಂತವೇ ಇಲ್ಲವೆಂದು ತೋರುತ್ತದೆ. ಎಲ್ಲೆಲ್ಲಿಯೂ ಸಂಧಾನದ ಮರೆಯಲ್ಲಿ ಪುಂಡಾಟಿಕೆಯ ಸಿದ್ಧತೆ ನಡೆಸಿದ್ದೇ ಕಾಣಬರುತ್ತದೆ. ಆಸಾಮದಲ್ಲಿ ಬಂದು ನೆಲಸಿದ ಅನಧಿಕೃತ ಮುಸ್ಲಿಂ ಬಂಗಾಲ ವಲಸೆಗಾರರನ್ನು ಉಚ್ಚಾಟನೆ ಮಾಡುವ ಆಸಾಮ ಸರಕಾರದ ಧೋರಣದ ವಿರುದ್ಧ ಹೋರಾಟ ಹೂಡಲು ಬಂಗಾಲದಿಂದ ಮುಸ್ಲಿಂ ಅಭಿಯೋಗದ ಸಿದ್ಧತೆ ನಡೆದಿದೆ. ಅದರ ಬೊಬ್ಬಾಟ ಬಹಳವಾದುದರಿಂದ ಆಸಾಮ ಮುಖ್ಯ ಮಂತ್ರಿ ಬಾರ್ಡೊಲಾಯಿಯವರೊಡನೆ ಪ್ರಾಂತಿಕ ಲೀಗ್ ಅಧ್ಯಕ್ಷ ಸಾದುಲ್ಲಾ ಅವರು ಸಂಧಾನ ನಡೆಸಿ ಒಪ್ಪಂದ ಮಾಡಿಕೊಂಡರು. ಆದರೆ ಲೀಗ್ ಕ್ರಿಯಾ ಸಮಿತಿ ಆ ಒಪ್ಪಂದಕ್ಕೆ ಮನ್ನಣೆ ಕೊಡದೆ ಚಳವಳಿ ಹೂಡಲು ನಿರ್ಧರಿಸಿದೆ. ಗಡಿನಾಡಿನ ಹಾಡಾದರೂ ಇದೇ. ಜಿನ್ನಾ ಸಾಹೇಬರ ಶಾಂತಿ ಸಂದೇಶ ಅಲ್ಲೇನೂ ಪರಿಣಾಮಕಾರಿಯಾಗಿಲ್ಲ. ಚಳವಳಿಯನ್ನು ಹಿಂತೆಗೆದುಕೊಳ್ಳುವ ವಿಷಯದ ಸಂಧಾನಕ್ಕೆ ಅನುಕೂಲವಾಗಲೆಂದು ಡಾ. ಖಾನಸಾಹೇಬರು ಲೀಗ್ ಚಳವಳಿಗಾರರನ್ನು ಬಿಡುಗಡೆ ಮಾಡಲು ಒಪ್ಪಿದ್ದಾರೆ. ವಾಯಿಸರಾಯರು ಅಲ್ಲಿಗೆ ಹೋದಾಗ ಲೀಗ್ ಕೈದಿಗಳು ತಮ್ಮನ್ನೆಲ್ಲರನ್ನು ಒಂದೇ ಕಡೆ ಇಟ್ಟರೆ ವಿಚಾರವಿನಿಮಯಕ್ಕೆ ಅನುಕೂಲವಾಗುವದೆಂದೂ ಕೆಲವರನ್ನು ಪೆರೋಲ ಮೇಲೆ ಬಿಟ್ಟರೆ ದಿಲ್ಲಿಗೆ ಹೋಗಿ ಜಿನ್ನಾಸಾಹೇಬರೊಡನೆ ವಿಚಾರವಿನಿಮಯ ಮಾಡಿ ಬರುವೆವೆಂದೂ ಹೇಳಿದರು. ವೈಸರಾಯರು ಅದಕ್ಕೊಪ್ಪಿದರು. ಈಗ ಲೀಗಿನವರು ಚಳವಳಿಯನ್ನು ನಿಲ್ಲಿಸುವದಿಲ್ಲೆಂದು ಹೇಳುತಿದ್ದಾರೆಂದು ಗೊತ್ತಾಗಿದೆ. ಅಲ್ಲಿ ಲೀಗಿನವರ ಪುಂಡಾಟಿಕೆಯ ಕಥೆ ಅಮಾನುಷವಾಗಿದೆ. ೪೦೦ ಹಿಂದೂ—ಸೀಖರು ಕೊಲ್ಲಲ್ಪಟ್ಟರು, ೩೦೦ ಜನರನ್ನು ಬಲಾತ್ಕಾರದಿಂದ ಮತಾಂತರಗೊಳಿಸಲಾಯಿತು, ೫೦ ಜನರನ್ನು ಅಪಹರಿಸಲಾಗಿದೆ. ೧೬೦೦ ಮನೆ ಅಂಗಡಿಗಳೂ ೫೦ ಪೂಜಾ ಸ್ಥಳಗಳನ್ನು ಹಾಳುಗೆಡಹಲಾಗಿವೆಯೆಂದು ಮೆಹರಚಂದ ಖನ್ನಾ (ಹಣಕಾಸಿನ ಮಂತ್ರಿ) ಹೇಳಿದ್ದಾರೆ. ಗಡಿನಾಡಿನ ಮಂತ್ರಿಮಂಡಲವನ್ನು ಹೇಗಾದರೂ ಉರುಳಿಸಬೇಕೆಂದು ಲೀಗಿನ ಹಟವಿದೆ. ಇದಕ್ಕಾಗಿ ಹಿಂದುಗಳನ್ನು ಕೊಲ್ಲುವ "ಚಳವಳಿ". ಗಡಿನಾಡ ಮಂತ್ರಿಮಂಡಲ ಇನ್ನೇನು ಒಂದೆರಡು ವಾರಗಳಲ್ಲಿ ಉರುಳುವದೆಂದೂ ಫಿರೋಜಖಾನ ನೂನರು ಕಳೆದ ವಾರ ಹೇಳಿದರು. ವಾಯಿಸರಾಯರು ಇದನ್ನು ಸಾಧಿಸುವದಕ್ಕೆ ಅಲ್ಲಿ ಹೋಗುವರೆಂಬ ಆಸೆ ಅವರಿಗಿತ್ತು. ಆದರೆ ಗಡಿನಾಡ ಕಾಂಗ್ರೆಸ ಮಂತ್ರಿಮಂಡಲ ರಾಜೀನಾಮೆ ಕೊಡುವದಿಲ್ಲ. ಪುಂಡರಿಗೆ ಕಾಂಗ್ರೆಸ್ಸು ತಲೆವಾಗಲಾರದು ಎಂದು ಸರದಾರ ಪಟೇಲರು ಉತ್ತರ ಕೊಟ್ಟದ್ದರಿಂದ ನೂನರದು ಗಾಳಿಗೋಪುರವೆಂದು ಸ್ಪಷ್ಟವಾಯಿತು. ಪಂಜಾಬದಲ್ಲಿಯೂ ಲೀಗ್ ಮಂತ್ರಿಮಂಡಲ ಸ್ಥಾಪಿಸಲು ದೌಲತಾನಾ ಅವರು ಬೇಕಷ್ಟು ಪ್ರಯತ್ನ ಮಾಡುತಿದ್ದಾರೆ. ಆದರೆ ಈಗ ಲೀಗಿನವರೇ ಕೆಲವರು ಇದಕ್ಕೆ ವಿರೋಧವೊಡ್ಡಿದ್ದಾರಂತೆ. ಶುದ್ಧ ಲೀಗು ಮಂತ್ರಿಮಂಡಲವಾದರೆ ಪಂಜಾಬ ವಿಭಜನೆಯ ಬೇಡಿಕೆಗೆ ಪುಷ್ಟಿದೊರೆತು ತಮ್ಮ ಹಿತಸಂಬಂಧಗಳಿಗೆ ಧಕ್ಕೆ ಬಂದೀತೆಂದು ಅಂಬಾಲಾ ವಿಭಾಗದ ಮುಸ್ಲಿಂ ಲೀಗ ಸದಸ್ಯರು ಹೆದರಿದ್ದಾರಂತೆ. ಆದರೆ ಇಂಥ ಮತಭೇದದಿಂದ ಪಾರಾಗಲಿಕ್ಕೋಸ್ಕರವೇ ಲೀಗು ಇನ್ನೊಂದು ಚಳವಳಿ ಹೂಡಬಹುದೆಂದು ಲೀಗ ನೀತಿಯನ್ನು ಅರಿತವರು ವಾದಿಸುತ್ತಾರೆ. ಒಟ್ಟಿನ ಮೇಲೆ ಮುಸ್ಲಿಂ ಸಾಮ್ರಾಜ್ಯದ ಕನಸು ಕಾಣುತಿರುವ ಲೀಗಿನವರು ಶಾಂತಿಯಿಂದ ಅಧಿಕಾರತ್ಯಾಗವಾಗಗೊಡುವದಿಲ್ಲೆಂದು ಸಂಶಯ ಬರಹತ್ತಿದೆ. ಮನಸ್ಸಿಲ್ಲದಿದ್ದರೂ ಉಳಿದವರು ಈ ಹೋರಾಟದಲ್ಲಿ ವಿಧಿಯಿಲ್ಲದೆ ಭಾಗವಹಿಸಬೇಕಾದೀತೇನೊ.

ಸಾಮ್ಯವಾದಿಗಳ ಕೈಗೆ ಅಧಿಕಾರ ಬರಬೇಕು

ಮಂಗಳೂರಲ್ಲಿ ಜಯಪ್ರಕಾಶರ ಭಾಷಣ

ಕೇರಳ ಪ್ರವಾಸವನ್ನು ಮುಗಿಸಿಕೊಂಡು ಶ್ರೀ ಜಯಪ್ರಕಾಶ ನಾರಾಯಣರು ಮಂಗಳೂರಿಗೆ ತಾ ೨೫ಕ್ಕೆ ಬಂದರು. ಅವರು ಶ್ರೀಮತಿ ಕಮಲಾದೇವಿಯರ ಅಧ್ಯಕ್ಷತೆಯಲ್ಲಿ ಸೇರಿದ ಸಾರ್ವಜನಿಕ ಸಭೆಯಲ್ಲಿ ಸಾಮ್ಯವಾದಿ ಪಕ್ಷದ ಧ್ಯೇಯ ಧೋರಣೆಗಳನ್ನು ವಿವರಿಸಿದರು. ಬ್ರಿಟಿಶರು ಬಿಟ್ಟುಹೋಗಲು ಅವರು ಹಿಂದೀ ಕ್ರಾಂತಿಯನ್ನೆದುರಿಸಲು ಅಸಮರ್ಥರಾಗಿರುವದೇ ಕಾರಣ. ಈಗ ಹೊರಟು ಹೋಗಬೇಕಾಗಿ ಬಂದರೂ ಜಿನ್ನಾಸಾಹೇಬರ ಮತ್ತು ಸಂಸ್ಥಾನಿಕರ ಬೆಂಬಲದಿಂದ ಅಲ್ಲಲ್ಲಿ ತಮ್ಮ ದುರ್ಗಗಳನ್ನು ಕಟ್ಟಿಕೊಳ್ಳುವ ಹಂಚಿಕೆ ಅವರದು. ಬ್ರಿಟಿಶರು ಬರುವವರ್ಷ ಬಿಟ್ಟುಕೊಡುವ ಅಧಿಕಾರ ಯಾರ ಕೈಗೆ ಬರಬೇಕು. ಕಾಂಗ್ರೆಸಿನ ಕೈಗೆಂದು ಹೇಳಬಹುದು. ಇದು ಒಂದುಬಗೆಯಿಂದ ಸಮ್ಮತವಾದರೂ ಇಂದುಕಾಂಗ್ರೆಸ್ಸು ಸತತ [illegible] ಬಂಡವಳಗಾರರ ಸಂಸ್ಥೆಯಾಗ ತೊಡಗಿರುವದರಿಂದ ಬ್ರಿಟಿಶರು ಹೊರಟು ಹೋದೊಡನೆ ಕಾಂಗ್ರೆಸ್ಸು ವಿಸರ್ಜಿಸಲ್ಪಡಬೇಕು. ನಾವು ನರೇಂದ್ರರೊಡನೆಯೂ ಪಾಕಿಸ್ತಾನದೊಡನೆಯೂ ಮಾತ್ರವಲ್ಲದೆ ನೆಹರೂ ಸರಕಾರದೊಡನೆಯೂ ಹೋರಾಡುವ ಪ್ರಸಂಗ ಬರಬಹುದೆಂದು ಅವರು ಅಭಿಪ್ರಾಯಪಟ್ಟರು. ಕಮ್ಯುನಿಸ್ಟರು ರಶಿಯಾದ ಅಜ್ಞಾಧಾರಕರಾದ ದೇಶದ್ರೋಹಿಗಳೆಂದೂ ಅವರ ಅಭಿಪ್ರಾಯವಾಗಿತ್ತು.

ಮಂಗಳೂರು ನಾಗರಿಕರು ಅವರಿಗೆ ೫೦೦೧ ರೂ ನಿಧಿ ಅರ್ಪಿಸಿದರು.

ಅಂತರರಾಷ್ಟ್ರೀಯ

ಮೊಸ್ಕೊ ಪರಿಷತ್ತಿನ ವಿಫಲತೆ

ಒಂಭತ್ತು ವಾರಗಳ ವಿಫಲ ಎಳೆದಾಟದ ನಂತರ, ಜರ್ಮನಿ ಆಸ್ಟ್ರಿಯಾಗಳ ಹಣೆಬರಹವನ್ನು ತಿದ್ದಿ ಬರೆಯಲೆಂದು ಮಾಸ್ಕೋದಲ್ಲಿ ಸೇರಿದ ಚತುರ್ ರಾಷ್ಟ್ರ ವಿದೇಶ ಮಂತ್ರಿಗಳು ಬರಿಗೈಯಿಂದ ತಂತಮ್ಮ ಮನೆಗಳಿಗೆ ಮರಳಿದರು. ಯಾವುದೊಂದು ಮಹತ್ವದ ಪ್ರಶ್ನೆಯಲ್ಲಿಯೂ ಒಮ್ಮತವನ್ನು ಸಾಧಿಸುವದು ಶಕ್ಯವಾಗಲಿಲ್ಲ. ಆದುದರಿಂದ ನಾಳೆ ನವೆಂಬರದಲ್ಲಿ ಲಂಡನ್ನಿನಲ್ಲಿ ಪುನಃ ಸಭೆ ಸೇರುವ ನಿರ್ಣಯದೊಡನೆ ಜರ್ಮನಿ ಆಸ್ಟ್ರಿಯಾಗಳ ಯಾತನೆಯನ್ನು ಯಥಾಪೂರ್ವ ಇಟ್ಟು ಮಂತ್ರಿ ಮಹನೀಯರು ತೆರಳಿದರು.

ಮತಭೇದದ ಮುಖ್ಯ ವಿಷಯಗಳನ್ನು ಹೀಗೆ ಕಾಣಿಸಬಹುದು:

(೧) ಜರ್ಮನಿಯ ಆರ್ಥಿಕ ಐಕ್ಯವನ್ನು ಕುರಿತು ಒಪ್ಪಂದವಾಗಲಿಲ್ಲ. ಬ್ರಿಟಿಶ ಮತ್ತು ಅಮೇರಿಕನ್ ಆಕ್ರಮಣ ವಿಭಾಗಗಳನ್ನು ಒಂದುಗೂಡಿಸಿದ್ದು ರಶಿಯಾದ ಮನಸಿಗೆ ಬಂದಿಲ್ಲ. ಜರ್ಮನಿಯ ಆರ್ಥಿಕ ಐಕ್ಯವನ್ನು ಸ್ಥಾಪಿಸಬೇಕಾದರೆ ಮೊದಲು ರಶಿಯಾಕ್ಕೆ ಬರಬೇಕಾದ ಪರಿಹಾರದ್ರವ್ಯದ ವ್ಯವಸ್ಥೆ ಆಗಬೇಕೆಂದು ರಶಿಯನ್ನರು ಹಟತೊಟ್ಟರು.

(೨) ಪರಿಹಾರ ದ್ರವ್ಯದ ಪ್ರಶ್ನೆ ತೀರ್ಮಾನವಾಗಲಿಲ್ಲ. ಜರ್ಮನಿಯ ದೈನಂದಿನ ಉತ್ಪಾದನೆಯಿಂದ ಯಾಲ್ಟಾ ಕರಾರಿನಂತೆ ತಮಗೆ ಪರಿಹಾರ ದೊರೆಯಬೇಕೆಂದು ರಶಿಯನ್ನರು ಸಾಧಿಸಿದರು. ಆದರೆ ಯಾಲ್ಟಾ ಕರಾರಿನ ಅರ್ಥ ಹೀಗಾಗುವದಿಲ್ಲೆಂದು ಆಂಗ್ಲೋ—ಅಮೇರಿಕನ್ನರು ವಾದಿಸಿದರು. ಮುಖ್ಯವಾಗಿ, ರಶಿಯನ್ನರಿಗೆ ಹೀಗೆ ಪರಿಹಾರ ಕೊಡುವದೆಂದರೆ, ಪಾಶ್ಚಿಮಾತ್ಯ ಮಿತ್ರರ ಆಕ್ರಮಣ ಭಾಗದಿಂದ ಸರಕುಗಳು ಧಾರಾಕಾರವಾಗಿ ರಶಿಯನ್ನರಿಗೆ ಕಳಿಸಬೇಕು. ಹಾಗೆ ಮಾಡಿದರೆ ಪಶ್ಚಿಮ ಜರ್ಮನಿಯಲ್ಲಿ ಹುಟ್ಟಿದ ಸರಕುಗಳು ಪ್ರತಿಫಲವಿಲ್ಲದೆ ಹೊರ ಹೋದಂತಾಗಿ ಅಲ್ಲಿ ಈಗಾಗಲೆ ವಿಪನ್ನಾವಸ್ಥೆಗೆ ಮುಟ್ಟಿದ ಬಡತನದಿಂದ ಜರ್ಮನರನ್ನು ಸಜೀವವಾಗಿಡಲು ಆಂಗ್ಲೋ-ಅಮೇರಿಕನ್ನರು ತಮ್ಮ ಕೈಯಿಂದ ಹಣ ಸುರುವಬೇಕಾಗುವದು. ಇದಕ್ಕೆ ಅವರು ಸಿದ್ಧರಾಗಿಲ್ಲ.

(೩) ಜರ್ಮನಿಯ ಭಾವೀ ರಾಜಕೀಯ ಘಟನೆಯ ಬಗ್ಗೆ ಒಮ್ಮತವಾಗಲಿಲ್ಲ. ಆಂಗ್ಲೋ ಅಮೇರಿಕನ್ನರೂ ಅವರ ಜತೆಗೆ ಫ್ರೆಂಚರೂ ಜರ್ಮನಿಯನ್ನು ವಿವಿಧ ಸ್ವಾಯತ್ತ ಪ್ರಾಂತಗಳ ದುರ್ಬಲ ಸಂಯುಕ್ತ ರಾಜ್ಯವಾಗಿ ಮಾಡಬೇಕೆಂದರು. ರಶಿಯನ್ನರು ಒಂದೇ ಭಾಷೆ ಸಂಸ್ಕೃತಿ ಜನಾಂಗಗಳಿಗೆ ಸೇರಿದ ಜರ್ಮನ್ನರನ್ನು ಸಂಯುಕ್ತ ಘಟನೆಯಾಗಿ ಮಾಡುವದು ಅಯೋಗ್ಯವೆನ್ನುತ್ತಾರೆ. ಏಕೀಕೃತ ಅಖಂಡ ಜರ್ಮನ್ ರಾಜ್ಯ ಘಟನೆ ಬೇಕೆಂದು ಅವರ ಪ್ರತಿಪಾದನೆ. ಇದರಿಂದ ಪುನಃ ಜರ್ಮನಿಯಲ್ಲಿ ಸರ್ವಾಧಿಕಾರ ತಲೆಯೆತ್ತಿ ಜಗತ್ತಿಗೆ ಗಂಡಾಂತರಪ್ರಾಯವಾದೀತೆಂದು ಉಳಿದವರ ಭಯ.

(೪) ಚತುರ್ಮೂರ್ತಿಗಳಲ್ಲದೆ ಉಳಿದ ಚಿಕ್ಕಪುಟ್ಟ ಮಿತ್ರರಿಗೆ ಶಾಂತಿ ಒಪ್ಪಂದದ ಸಂಧಾನದಲ್ಲಿ ದೊರೆಕಬೇಕಾದ ಸ್ಥಾನದ ಬಗ್ಗೆಯೂ ಅಭಿಪ್ರಾಯಭೇದವುಳಿಯಿತು. ತಮ್ಮ ಸುತ್ತ ಅನೇಕ ಚಿಕ್ಕ ರಾಷ್ಟ್ರಗಳನ್ನು ಕಟ್ಟಿಕೊಂಡ ಪಾಶ್ಚಿಮಾತ್ಯ ಮಿತ್ರರು ಚಿಕ್ಕ ಪುಟ್ಟ ರಾಷ್ಟ್ರಗಳಿಗೆ ಇದರಲ್ಲಿ ಮಹತ್ವದ ಸ್ಥಾನಕೊಡಲು ಒಪ್ಪುತ್ತಾರೆ. ಆದರೆ ಅಷ್ಟು ಉಪಗ್ರಹರಿಲ್ಲದ ರಶಿಯನ್ನರು ಇದನ್ನು ವಿರೋಧಿಸುತ್ತಾರೆ.

(೫) ಜರ್ಮನಿ ಇನ್ನೊಮ್ಮೆ ಯುದ್ಧ ಕೆದರದಂತೆ ಅದನ್ನು ನಿಶ್ಶಸ್ತ್ರವಾಗಿರಿಸಲು ಮಾಡಬೇಕಾದ ಉಪಾಯಗಳಲ್ಲಿಯೂ ಮತಭೇದವಾಯಿತು. ಈ ಬಗ್ಗೆ ಚತುರ್ರಾಷ್ಟ್ರ ಒಡಂಬಡಿಕೆಯೊಂದನ್ನು ಅಮೇರಿಕನ್ ವಿದೇಶಮಂತ್ರಿ ಮುಂದೊಡ್ಡಿದನು. ಆದರೆ ರಶಿಯನ್ನರು ಅದರಲ್ಲಿ ಕೆಲ ರಾಜಕೀಯ ಕಲಮುಗಳನ್ನು—ನಿರ್ನಾಜೀಕರಣ ಮೊದಲಾದ ವಿವರಗಳನ್ನು—ಸೇರಿಸಲು ಹವಣಿಸಿದರು. ಇದಕ್ಕೆ ಅಮೇರಿಕನ್ನರು ಒಪ್ಪಲಿಲ್ಲ.

(೬) ಆಸ್ಟ್ರಿಯಾದ ಶಾಂತಿ ಒಪ್ಪಂದ ಸಾಧ್ಯವಾಗದಿರಲು ಮುಖ್ಯವಾಗಿ ಆಸ್ಟ್ರಿಯಾದಲ್ಲಿರುವ ಜರ್ಮನ್ ಸೊತ್ತುಗಳ ಪ್ರಶ್ನೆ ತೀರ್ಮಾನವಾಗದಿದ್ದುದೇ ಕಾರಣ. ಜರ್ಮನರು ಬೇರೆ ರಾಷ್ಟ್ರೀಯರಿಗೆ ಮಾರಿರಬಹುದಾದ ಸೊತ್ತುಗಳನ್ನೂ ಜರ್ಮನ್ ಸೊತ್ತುಗಳಲ್ಲಿ ಸೇರಿಸಬೇಕು. ಇಲ್ಲದಿದ್ದರೆ ಅವನ್ನು ಬೇಕೆಂದೇ ಕೈಬದಲಿಸಿ ರಶಿಯಾಕ್ಕೆ ಸಿಗಬೇಕಾದ ಜರ್ಮನ್ ಸೊತ್ತುಗಳಿಗೆ ಕತ್ತರಿ ಹಾಕಬಹುದೆಂದು ರಶಿಯನ್ನರು ಭಯಪಟ್ಟರು. ರಶಿಯನ್ನರ ವಾದಕ್ಕೆ ಉಳಿದವರ ಬೆಂಬಲವಿಲ್ಲ.

ಫಲಶ್ರುತಿ

ಈ ಪರಿಷತ್ತಿನ ಬಗ್ಗೆ ಭಗ್ನಮನೋರಥರಾಗುವ ಕಾರಣವಿಲ್ಲೆಂದು ಸ್ಟಾಲಿನ್, ಬೆವಿನ್, ಮಾರ್ಶಲ್ ಈ ಮೂವರೂ ಹೇಳಿರುವದು ನಿಜ. ಆದರೆ ಮತಭೇದದ ವ್ಯಾಪ್ತಿ ಮತ್ತು ಆಳವನ್ನು ಸ್ಫುಟವಾಗಿ ವ್ಯಕ್ತಗೊಳಿಸುವ ಹೊರತು ಮತ್ತಾವ ಲಾಭವೂ ಇದರಿಂದಾಗಲಿಲ್ಲವೆಂಬುದು ಸ್ಪಷ್ಟವಾಗಿಯೆ ಇದೆ. ವಿಶಿಷ್ಟ ಸಮಸ್ಯೆಯ ಮೇಲೆ ವಿಶಿಷ್ಟ ರಾಷ್ಟ್ರದ ಅಭಿಮತ ಹೀಗೆಯೆ ಇದೆಯೆಂದು ಮಾಸ್ಕೋದಲ್ಲಿ ಬೊಟ್ಟಿಟ್ಟು ತೋರಿದಂತಾದರೂ ಅದು ಮುಂಬರುವ ನವೆಂಬರ ಅಧಿವೇಶನದಲ್ಲಿ ಹೇಗೆ ಬಗೆಹರಿಯಬಲ್ಲದೋ ಯಾರಿಗೂಗೊತ್ತಿದ್ದಂತಿಲ್ಲ. ಜರ್ಮನ್ ಶಾಂತಿ ಒಪ್ಪಂದದ ಪ್ರಶ್ನೆ ಮಾಸ್ಕೋದಲ್ಲಿ ಬಿಡಿಸಲ್ಪಡಬಹುದೆಂದು ಯಾರೂ ನಿರೀಕ್ಷಿಸಿಲ್ಲ. ಆದರೆ ಆಸ್ಟ್ರಿಯಾದ ಒಪ್ಪಂದವು ಬಿಟ್ಟೀತೆಂದು ಆಂಗ್ಲೋ ಅಮೇರಿಕನ್ನರು ಆಶಿಸಿದಂತಿದೆ. ಅದೂ ಸಾಧಿಸದುದು ನೋಡಿದರೆ ಮತಭೇದ ಎಷ್ಟು ಗಾಢವಾಗಿದೆಯೆಂದು ತಿಳಿದೀತು. ಆಸ್ಟ್ರಿಯನ್ ಒಪ್ಪಂದದ ಅನಿರ್ಣೀತ ಪ್ರಶ್ನೆಗಳನ್ನು ಹಿಂಜಲು ವಿಯನ್ನಾ (ಆಸ್ಟ್ರಿಯನ್ ರಾಜಧಾನಿ) ದಲ್ಲಿ ಚತುರ್ರಾಷ್ಟ್ರ ಸಮಿತಿಯನ್ನು ನೇಮಿಸುವ ರಶಿಯನ್ ಸೂಚನೆ ಗ್ರಾಹ್ಯವಾಗಿದ್ದರೂ ವಿದೇಶ ಮಂತ್ರಿಗಳೇ ಬಿಡಿಸಲಾರದ್ದನ್ನು ಈ ಸಮಿತಿಯೆಂತು ಬಿಡಿಸುವದೊ. ಇನ್ನು ಮುಂದೆ ಒಪ್ಪಂದವಾಗುವ ಸಂಭವ ಕಡಿಮೆಯಾಗುತ್ತಲೆ ಹೋಗುವದು. ಟ್ರೂಮನ್ನರ ಕಮ್ಯುನಿಸ್ಟ್ ವಿರೋಧಿ ರಾಷ್ಟ್ರಗಳಿಗೆ ಸಹಾಯ ನೀಡುವ ಧೋರಣೆಯಿಂದ ಪ್ರಬಲ ರಾಷ್ಟ್ರ ಸಂಬಂಧದ ಬಿರುಕು ಇನ್ನಷ್ಟು ಅಗಲಿಸದಿರದು. ಒಕ್ಕಲತನದ ಉತ್ಪನ್ನಗಳ ಅಭಾವದಿಂದ ನರಳುತ್ತಿರುವ ಪಶ್ಚಿಮ ಜರ್ಮನಿಯನ್ನು ಕೊರಳಿಗೆ ಹಾಕಿಕೊಂಡಿರುವ ಆಂಗ್ಲೋ ಅಮೇರಿಕನ್ನರು ಅಲ್ಲಿಯ ಪರಿಸ್ಥಿತಿ ಕೆಟ್ಟಂತೆ ತಮ್ಮಿಬ್ಬರ ಆಕ್ರಮಣ ಪ್ರದೇಶಗಳ ಒಕ್ಕೂಟವನ್ನು ಬಿಗಿಗೊಳಿಸಬೇಕಾಗುವದು. ಹೀಗೆ ಪಶ್ಚಿಮ ಜರ್ಮನಿ ಪಶ್ಚಿಮಯುರೋಪಿನ ಆರ್ಥಿಕ ಕಟ್ಟಡದಲ್ಲಿ ಆಳವಾಗಿ ಅಂತರ್ಹಿತವಾಗುವದು. ಅತ್ತ ರಶಿಯನ್ ಆಕ್ರಮಿತ ಪೂರ್ವ ಜರ್ಮನಿಯಾದರೂ ಆಂಗ್ಲೋ—ಅಮೇರಿಕನ್ನರ ಧೋರಣೆಯ ಫಲವಾಗಿ ಪೂರ್ವ ಯುರೋಪಿನ ಆರ್ಥಿಕ ಕಟ್ಟುಪಾಡಿನಲ್ಲಿ ಲೀನವಾಗಿ ಹೋಗಬಹುದು. ಹೀಗಾದರೆ ಜರ್ಮನಿಯ ಐಕ್ಯದ ಸಂಭವ ದೂರದೂರ ಹೋಗುವದು.

ಚತುರ್ರಾಷ್ಟ್ರಗಳಲ್ಲಿ ಜರ್ಮನಿಯ ಬಗೆಗೆ ಒಪ್ಪರಿದವಾಗದುದರಿಂದ ಒಂದು ಬಗೆಯಲ್ಲಿ ಜರ್ಮನ್ ನಾಜೀ ಅವಶೇಷಗಳಿಗೆ ಪುನಃ ಜೀವ ಬರುವದು. ಪೂರ್ವ ಜರ್ಮನಿಯಲ್ಲಿ ಉಕ್ಕಿನ ಮನುಷ್ಯ ನಾಜಿಗಳ ಹುಟ್ಟಳಿಸುವಲ್ಲಿ ಸಾಕಷ್ಟು ಯಶಸ್ವಿಯಾಗಿದ್ದರೂ ಪಶ್ಚಿಮದಲ್ಲಿ ಅದು ಅಷ್ಟು ಸುಗಮವಾಗಿಲ್ಲ. ನಾಜೀ ಗುಪ್ತ ಸಂಸ್ಥೆಗಳು ವಿಸ್ತಾರವಾಗಿಹಬ್ಬಿ ಜನತೆಯ ಸಹಕಾರದಿಂದಲೆ ಚಟುವಟಿಕೆಗಳನ್ನು ಸಾಗಿಸುತ್ತ ಹಿಟ್ಲರನ ಕಕ್ಕಡವನ್ನು ಜ್ವಲಿತವಾಗಿಟ್ಟಿರುವವು ಮಾತ್ರವಲ್ಲ, ಪ್ರಸಿದ್ಧ ನಾಜಿಗಳನ್ನು ಆಂಗ್ಲೋ ಅಮೇರಿಕನ್ನರು ಕಾರಖಾನೆಗಳ ನೇತೃಸ್ಥಾನಗಳಲ್ಲಿ ಇನ್ನೂ ಇಟ್ಟಿದ್ದಾರೆ. ರಶಿಯನ್ನರ ಭಯದಿಂದ ಪಾಶ್ಚಿಮಾತ್ಯ ಮಿತ್ರರು ಹಿಂದಿನ ನಾಜಿಗಳನ್ನು ಇನ್ನಷ್ಟು ಸೌಮ್ಯವಾಗಿ ನಡೆಸಿಕೊಳ್ಳಬೇಕಾಗುವದಲ್ಲದೆ ದೈನಂದಿನ ಜರ್ಮನ್ ಅವಶ್ಯಕತೆಗಳನ್ನು ತಮ್ಮ ಸ್ವದೇಶಗಳ ಭಾಂಡಾರಕ್ಕೆ ಕತ್ತರಿ ಹಾಕದೆ ಪೂರೈಸಬೇಕಾದರೆ ಜರ್ಮನಿಯ ಔದ್ಯೋಗಿಕ ಮಟ್ಟವನ್ನೂ ವಿಧಿಯಿಲ್ಲದೆ ಏರಿಸಬೇಕಾಗುವದು. ಹೀಗೆ ಜರ್ಮನಿಯನ್ನು "ಒಕ್ಕಲತನ ಮತ್ತು ಚಿಲ್ಲರೆ ಉದ್ಯೋಗಗಳ ರಾಷ್ಟ್ರ" ವಾಗಿ ಮಾಡಿ ಅದರ ಯುದ್ಧಶಕ್ತಿಯನ್ನು ತಗ್ಗಿಸುವ ಮಾತು ಬಾಯಲ್ಲಿಯೆ ಉಳಿಯುವದು. ಇದೇ ನಾಜಿಗಳಿಗೆ ಬೇಕಾದ್ದು. ಒಂದಲ್ಲ ಒಂದು ದಿನ ಅವರಿಗೆ ಅಧಿಕಾರ ಕಸಿದುಕೊಳ್ಳಲು ಇದು ಅನುಕೂಲ ವೊದಗಿಸದಿರದು!

ವಾಲೇಸರ ಉಪಾಯ

ಅಮೇರಿಕನ್ ವಿದೇಶ ಧೋರಣೆಯ ವಿರುದ್ಧ ಯುರೋಪಿನಲ್ಲಿ ಪ್ರಚಾರ ಸಂಚಾರ ಕೈಕೊಂಡಿದ್ದು ಈಗ ಅಮೇರಿಕೆಗೆ ಮರಳಿರುವ ಹಿಂದಿನ ಉಪಾಧ್ಯಕ್ಷ ಹೆನ್ರಿ ವಾಲೇಸರು ಅಮೇರಿಕೆಗೂ ರಶಿಯಾಕ್ಕೂ ಸೇರಿಯೇ ಈ ಬಗ್ಗೆ ಎಚ್ಚರಿಕೆ ಕೊಟ್ಟದ್ದು ಉಚಿತವೆಂದು ತೋರುತ್ತದೆ. "ಒರಟುತನದಿಂದ ಒರಟುತನವೇ ಹುಟ್ಟುತ್ತದೆ" ಎಂದಿದ್ದಾರೆ ಅವರು. ಅಮೇರಿಕನ್ ಬಂಡವಲುವಾದ ಮತ್ತು ರಶಿಯನ್ ಕಮ್ಯೂನಿಝಂ ಇವು ಪರಸ್ಪರ ಘರ್ಷಣೆಯನ್ನು ಬಿಟ್ಟುಕೊಟ್ಟು ಶಾಂತಿಮಯವಾಗಿಸಾಗಬೇಕೆಂದು ಅವರ ಪ್ರತಿಪಾದನೆ. ಅಮೇರಿಕೆಯಲ್ಲಿಬಂಡವಲುವಾದ ಎಷ್ಟು ಸ್ವಾಭಾವಿಕವೋ ಯುರೋಪಿನಲ್ಲಿ ಕಮ್ಯುನಿಝಂ ಮತ್ತು ಸಾಮ್ಯವಾದ ಅಷ್ಟೇ ಸ್ವಾಭಾವಿಕವಾಗಿ ಇತಿಹಾಸದಗತಿಯಿಂದ ಸಿದ್ಧವಾದ ಸಂಗತಿಗಳು. ಒಂದನ್ನೊಂದು ಮುರಿಯಬಲ್ಲದೆಂಬ ಭ್ರಾಂತಿ ಬೇಡ.

ಅಮೇರಿಕನ್ ವಿದೇಶ ಮಂತ್ರಿ ಜಾರ್ಜ ಮಾರ್ಶಲ್ಲರು ಸ್ವದೇಶಕ್ಕೆ ಮರಳಿದ ನಂತರ ಮಾಸ್ಕೊದಲ್ಲಿ ಒಪ್ಪಂದವಾಗದಿರಲು ರಶಿಯನ್ನರು ಬಲಿಷ್ಠ ಅಖಂಡ ಜರ್ಮನ್ ಕೇಂದ್ರ ಸರಕಾರ ಬೇಕೆಂದು ಹಟತೊಟ್ಟದ್ದು ಕಾರಣವೆಂದು ಹೇಳಿದರೂ ನಿಜವಾಗಿಲ್ಲ ಎಲ್ಲಕ್ಕಿಂತ ಹೆಚ್ಚು ಕಲಮುಗಳು ಅನಿಶ್ಚಿತವಾಗಿ ರಶಿಯನ್ನರು ತಮಗೆ ಬರಬೇಕಾದ ಪರಿಹಾರವನ್ನು ಪಡೆದೇತೀರುವೆವೆಂದುಹಟತೊಟ್ಟದ್ದೇ ಕಾರಣವೆಂಬುದು ಸ್ಪಷ್ಟವೇ ಆಗಿದೆ. ವಾಲೇಸರು ಇದನ್ನು ಮನಗಂಡೇ ಇರಬೇಕು, ರಶಿಯಾಕ್ಕೆ ಅಮೇರಿಕೆ ದೊಡ್ಡ ಸಾಲ ಕೊಡಬೇಕೆಂದು ಸೂಚಿಸುತ್ತ ಬಂದಿದ್ದಾರೆ. ಪ್ಯಾರೀಸಿನಲ್ಲಿ ಅವರು ಇನ್ನೊಂದು ಹೆಜ್ಜೆ ಮುಂದೆ ಸಾಗಿ ೫೦೦೦ ಕೋಟಿ ಡಾಲರಿನ ಜಾಗತಿಕ ಪರಿಹಾರ ಮತ್ತು ಪುನರ್ನಿಯೋಜನ ಯೋಜನೆಯನ್ನು ಸಿದ್ಧಗೊಳಿಸಿ ಆ ಹಣದಲ್ಲಿ ೧೦೦೦ ರಿಂದ ೧೫೦೦ ಕೋಟಿ ಡಾಲರ ಸಹಾಯವನ್ನು ರಶಿಯಾಕ್ಕೆ ಕೊಡಬೇಕೆಂದು ಪ್ರತಿಪಾದಿಸಿದರು. ರಶಿಯನ್ನರು ಇದರಬದಲು ಜರ್ಮನ್ ಪರಿಹಾರ ದ್ರವ್ಯದ ಬೇಡಿಕೆಯನ್ನು ತಗ್ಗಿಸಬೇಕೆಂದು ಅವರು ಸೂಚಿಸುತ್ತಾರೆ.

ಟ್ರೂಮನ್ನರು ಕೇಳುವರೆ?

ಯೋಗ್ಯ ಸಲಹೆ. ರಶಿಯನ್ನರು ಯುದ್ಧದಲ್ಲಿ ಅಪಾರ ಹಾನಿಗೊಳಗಾಗಿರುವದರಿಂದಲೇ ತಮ್ಮ ಪುನರ್ನಿಯೋಜನೆಗಾಗಿ ನಿರುಪಾಯರಾಗಿ ಜರ್ಮನರಿಂದ ಪರಿಹಾರವನ್ನು ಕಸಿದುಕೊಳ್ಳುವ ಛಲಕ್ಕೆ ಬಿದ್ದಿದ್ದಾರೆ. ಆದರೆ ಟ್ರೂಮನ್ನರೂ ಅವರ ಕಮ್ಯುನಿಸ್ಟ ದ್ವೇಷವೂ ರಶಿಯಾಕ್ಕೆ ಹೀಗೆ ಸಹಾಯಮಾಡಲೊಪ್ಪುವವೆ ? ಅವರು ಪ್ರವಾಹದಲ್ಲಿ ಸಾಗರಬಿದ್ದಾಗಿದೆ. ಸಿನೇಟ ಸಭೆ ಗ್ರೀಸ—ತುರ್ಕಿಗಳಿಗೆ ಸಹಾಯ ಕೊಡುವ ಯೋಜನೆಗೆ ೪೦ ಕೋಟಿ ಡಾಲರ ಮಂಜೂರು ಮಾಡಿ ಆಗಿದೆ. ಇನ್ನೂ ಇತರ ಯುರೋಪಿಯನ್ ರಾಷ್ಟ್ರಗಳಿಗೂ ೩೫ ಕೋಟಿ ಸಹಾಯ ನೀಡಲು ಸಿನೇಟ ವಿದೇಶ ವಿಷಯ ಸಮಿತಿ ಸಿದ್ಧವಾಗಿದೆ. ಅದೇ ವೇಳೆಗೆ ರಶಿಯಾದ ಪಂಗಡಕ್ಕೆ ಸೇರಿದ್ದ ಯುಗೊಸ್ಲಾವಿಯಾಕ್ಕೆ ಸಹಾಯ ನಿರಾಕರಿಸಲಾಗಿದೆ. ಮಾತ್ರವಲ್ಲ, ಯುಕ್ತರಾಷ್ಟ್ರ ಪರಿಹಾರ ಸಮಿತಿಯ ಮೂಲಕ ಬಂದ ಯುಗೊಸ್ಲಾವಿಯಾದ ಬೇಡಿಕೆಗಳನ್ನೂ ತಿರಸ್ಕರಿಸಲಾಗಿದೆ. ಫ್ರೆಂಚ ಬಲಪಕ್ಷಗಳಿಗೆ ಬೆಂಬಲವಿತ್ತು ಎಡ ಪಕ್ಷದ ಶಕ್ತಿಯನ್ನಿಳಿಸುವ ಒಳಸಂಚುಗಳೂ ನಡೆದಿವೆ. ಎಲ್ಲಕ್ಕಿಂತ ಹೆಚ್ಚಾಗಿ ಶುದ್ಧ ಫ್ಯಾಸಿಸ್ಟ್ ಸ್ಪೇನದೊಡನೆ ಕೂಡ ಸೇರಿಕೊಂಡು ರಶಿಯಾದ ವಿರುದ್ಧ ಸ್ಪೇನದಲ್ಲಿ ಅಮೇರಿಕೆ ಠಾಣಗಳನ್ನು ಅಮೇರಿಕೆ ರಚಿಸುತ್ತಿದೆಯೆಂದು ಸುದ್ದಿ ಹಬ್ಬಿದೆ.

ಯುಕ್ತ ರಾಷ್ಟ್ರದಲ್ಲಿ ಪಾಲಿಸ್ತಾನ

ಪಾಲಿಸ್ತಾನ ಪ್ರಶ್ನೆಯನ್ನು ಬಗೆಹರಿಸಲಾರದೆ ಬ್ರಿಟನ್ನು ಯುಕ್ತರಾಷ್ಟ್ರ ಸಂಘಕ್ಕೆ ಒಪ್ಪಿಸಿಕೊಂಡ ಪ್ರಕಾರ ತಾ. ೨೮ಕ್ಕೆ ಈ ಬಗ್ಗೆ ವಿಶೇಷ ಅಧಿವೇಶನ ಲೇಕ ಸೆಕ್ಸೆಸ (ನ್ಯೂಯಾರ್ಕ)ದಲ್ಲಿ ಪ್ರಾರಂಭವಾಯಿತು. ಪಾಲಿಸ್ತಾನ ಸಮಸ್ಯೆಯ ಪರಿಹಾರದ ಬಗ್ಗೆ ವಿಧಾನಗಳನ್ನು ಸೂಚಿಸಲು ಯುಕ್ತರಾಷ್ಟ್ರ ಸಮಿತಿಯನ್ನು ನೇಮಿಸಬೇಕೆಂಬ ಬ್ರಿಟಿಶರ, ಮತ್ತು ಪಾಲಿಸ್ತಾನವನ್ನು ಬ್ರಿಟಿಶ ಅಧಿಷ್ಠಾಧಿಕಾರದಿಂದ ಮುಕ್ತಗೊಳಿಸಿ ಸ್ವತಂತ್ರವಾಗಿ ಮಾಡಬೇಕು ಎಂಬ ಇಜಿಪ್ತದ ಸೂಚನೆಗಳು ಬಂದಿವೆ. ಹಿಂದುಸ್ತಾನ ಪಾಲಿಸ್ತಾನದ ಅರಬರ ಪಕ್ಷದಲ್ಲಿ ನಿಂತಿದೆ. ನಿರ್ದೇಶಕ ಸಮಿತಿಯಲ್ಲಿ ಬ್ರಿಟಿಶ ಸೂಚನೆಯ ಚರ್ಚೆ ನಡೆದಾಗ ರಾಯಭಾರಿ ಆಸಫ ಅಲ್ಲಿಯವರು ಬ್ರಿಟಿಶ ಪ್ರತಿನಿಧಿಗೆ ಕೇಳಬಾರದ ಪ್ರಶ್ನೆ ಹಾಕಿದರು: ಯುಕ್ತರಾಷ್ಟ್ರ ಸಂಸ್ಥೆಯ ಸೂಚನೆ ಹೇಗೇ ಇದ್ದರೂ ಅದನ್ನು ಆಚರಣೆಗೆ ತರಲು ಬ್ರಿಟನ್ನು ಸಿದ್ಧವಾಗಿದೆಯೆ? ಅದರ ಇಚ್ಛೆಗೆ ಒಗ್ಗದ ಸೂಚನೆ ಬಂದರೆ ಇಂಗ್ಲಂಡು ಅದನ್ನು ಪಾಲಿಸುವದಿಲ್ಲವಾದರೆ ಇಲ್ಲೇಕೆ ನಾವು ಕಾಲಹರಣ ಮಾಡಬೇಕು? —ಎಂದು. ಯುಕ್ತರಾಷ್ಟ್ರನಿರ್ಣಯವನ್ನು ಪಾಲಿಸಲು ತಾವು ಬದ್ಧರಲ್ಲೆಂದು ಬ್ರಿಟಿಶ ಪ್ರಮುಖರು ಹೇಳಿದುದೇ ಈ ಆಹ್ವಾನಕ್ಕೆ ಕಾರಣ. ಇಜಿಪ್ತ ಮತ್ತು ರಶಿಯಾ ಅಸಫ ಅಲ್ಲಿಯವರಿಗೆ ಬೆಂಬಲವಿತ್ತವು. ಬ್ರಿಟಿಶ ಪ್ರತಿನಿಧಿ ಅಲೆಗ್ಸಾಂಡರ ಕೊಡಗಾನರು ಇದಕ್ಕೆ ನೇರ ಉತ್ತರಕೊಡಲಿಲ್ಲ. ಕೊನೆಗೆ ಚರ್ಚೆ ನಡೆದು ಬ್ರಿಟಿಶ ಸೂಚನೆಯನ್ನೂ ಸಾಧಾರಣ ಸಭೆಯ ಮುಂದೆ ಮಂಡಿಸಬೇಕೆಂದು ನಿರ್ಣಯವಾಯಿತು. ಪಾಲಿಸ್ತಾನ ಸ್ವಾತಂತ್ರ್ಯದ ಸೂಚನೆ ಚರ್ಚೆಗೆ ಬಾರದಂತೆ ತಡೆ ಪ್ರಯತ್ನ ಮಾಡಲು ಬ್ರಿಟಿಶರು ಸಿದ್ಧರಾಗಿದ್ದಾರೆ.

ಕೊರಿಯಾ ಪ್ರಶ್ನೆ

ಮಾಸ್ಕೋ ಪರಿಷತ್ತಿನ ಕಾಲಕ್ಕೆ ಸಾಧಿಸಲ್ಪಟ್ಟ ಕಾರ್ಯಗಳಲ್ಲಿ ಕೊರಿಯಾದ ಭವಿಷ್ಯದ ಪ್ರಶ್ನೆಯ ಚರ್ಚೆ ನಡೆಸಲು ಅಮೇರಿಕನ್ ಮತ್ತು ರಶಿಯನ್ ವಿದೇಶ ಮಂತ್ರಿಗಳು ಒಪ್ಪಿದ್ದನ್ನು ಉಲ್ಲೇಖಿಸಬಹುದು. ಜಪಾನಿ ಸಾಮ್ರಾಜ್ಯವಾದಕ್ಕೆ ಬೊಟ್ಟನೊಡಲು ತುತ್ತಾದ ಈ ದುರ್ದೈವಿ ಈಶಾನ್ಯ ಏಶಿಯಾ ದೇಶದ ಉತ್ತರಾರ್ಧವನ್ನು ರಶಿಯನ್ನರೂ ದಕ್ಷಿಣಾರ್ಧವನ್ನು ಅಮೇರಿಕನ್ನರೂ ಆಕ್ರಮಿಸಿದರು. ೫ ವರ್ಷಗಳ ಮಹಾಪಾಲಕ ಏರ್ಪಟ್ಟ ಅವಧಿಯ ನಂತರ ಸ್ವತಂತ್ರ ಕೊರಿಯಾ ರಾಜ್ಯವನ್ನು ಸ್ಥಾಪಿಸಬೇಕೆಂದು ಆಗ ಗೊತ್ತಾಗಿತ್ತು. ಆದರೆ ಆಂಗ್ಲೋ—ಅಮೇರಿಕನ್ ತಿಕ್ಕಾಟ ಹೆಚ್ಚಿದಂತೆ ಈ ಧ್ಯೇಯ ಮೂಲೆಗೆ ಬಿತ್ತು. ಉತ್ತರ ಭಾಗದಲ್ಲಿ ರಶಿಯನ್ನರು ತಮ್ಮ ಪ್ರಸ್ಥ ಬೆಳೆಸಿಕೊಳ್ಳಲು ಕಮ್ಯುನಿಸ್ಟರ ಕೈಯನ್ನು ಬಲಗೊಳಿಸಕೊಡಗಿದರೆ ದಕ್ಷಿಣದಲ್ಲಿ ಅಮೇರಿಕನ್ನರು ಪ್ರತಿಗಾಮಿಗಳಿಗೆ ಬೆಂಬಲವಿತ್ತು ರಶಿಯಾ ವಿರೋಧವನ್ನು ಎತ್ತಿಕಟ್ಟಿದರು. ದಕ್ಷಿಣ ಕೊರಿಯಾದಲ್ಲಿ ಮಾಸ್ಕೊ ಒಪ್ಪಂದದ ವೈರಿಗಳನ್ನು ಬೆಳೆಸಿ ಸಾಮ್ಯವಾದಿ ಮತ್ತು ಕೂಲಿಕಾರ ಚಳವಳಿಗಳನ್ನು ಅಮೇರಿಕನ್ನರು ಹತ್ತಿಕ್ಕುತಿದ್ದಾರೆಂದು ರಶಿಯನ್ನರ ಆರೋಪ. ಪ್ರಕೃತಿಸಂಪತ್ತಿ ಸಮೃದ್ಧವೂ ರುಸೋ ಅಮೇರಿಕನ್ ಸೈನ್ಯಗಳ ಸಂಗಮಸ್ಥಾನವೂ ಆದ ಕೊರಿಯಾ ಕುರುಕ್ಷೇತ್ರವಾದೀತೆಂಬ ಭಯ ಇನ್ನೂ ಇದೆ. ಮಾತುಕತೆಯನ್ನು ಪ್ರಾರಂಭಿಸಲು ಒಪ್ಪಿಕೊಳ್ಳಲಾಗಿದೆಯೆಂದಾಕ್ಷಣ ಒಪ್ಪಂದವಾಯಿತೆನ್ನುವಂತಿಲ್ಲವೆಂಬುದನ್ನು ಮರೆಯಕೂಡದು.

ಚೀನದಲ್ಲಿ ಸಮ್ಮಿಶ್ರ ಸರಕಾರ

ಕ್ರಾಂತಿ ನಂತರದ ಚೀನದ ಇತಿಹಾಸದಲ್ಲಿ ಮೊನ್ನೆ ಎಪ್ರಿಲ ೨೩ ಪರ್ವದಿನವೆನ್ನಬೇಕು. ಅಂದು ಕೌಮಿಂಟಾಂಗ್ ಪಕ್ಷದ ಏಕತಂತ್ರಾಧಿಕಾರ ಕೊನೆಗೊಂಡು ಮಂತ್ರಿಮಂಡಳದಲ್ಲಿ ಇತರ ಪಕ್ಷಗಳನ್ನು ಸೇರಿಸಿಕೊಳ್ಳಲಾಯಿತು. ೨೬ ಜನರ ಮಂತ್ರಿ ಮಂಡಳದಲ್ಲಿ ೨೦ ಜನರು ಕೌಮಿಂಟಾಂಗ್ ಪಕ್ಷದವರಿರುವರೆಂಬುದು ನಿಜವಾದರೂ ಒಂದೆರಡು ಮಹತ್ವದ ದಫ್ತರಗಳು ಮೂವರ ಚೀನ ಪಕ್ಷದ ಇಬ್ಬರು ಮಂತ್ರಿಗಳಿಗೆ ದೊರೆತಿವೆ. ಜನರಲ್ ಚಾನ್ ಚುನ್ನರು ಮುಖ್ಯ ಮಂತ್ರಿಗಳು. ಕಮ್ಯುನಿಸ್ಟರನ್ನು ಬಗ್ಗು ಬಡಿಯಲಾಗುವದೆಂದು ಅವರು ಸಾರಿದ್ದಾರೆ.

ತುಣುಕುಗಳು

ಬ್ರಹ್ಮದೇಶದ ಘಟನಾ ಸಮಿತಿಯ ಚುನಾವಣೆಗಳಲ್ಲಿ ಕಮ್ಯುನಿಸ್ಟರಿಗೆ ಸಿಕ್ಕಿದ ೭ ಸ್ಥಾನಗಳನ್ನು ಬಿಟ್ಟರೆ ಮತ್ತೆ ಎಲ್ಲ ೨೫೦ ಸ್ಥಾನಗಳು ಆಂಗಸಾನರ ಫ್ಯಾಸಿಸ್ಟ್ ವಿರೋಧಿ ಪಕ್ಷಕ್ಕೇ ಸಿಕ್ಕಿವೆ.

× × ×

ಪೂರ್ವ ಇಂಡೋನೇಶಿಯಾದ ಕಾರ್ಯಮಂಡಳಿ ಕಳೆದ ವಾರ ಪ್ರಾರಂಭವಾಯಿತು. ಈ ರಾಜ್ಯದಲ್ಲಿ ಸಿಲೆಬಸ್, ಸಿರಿ ಸುಂದಾ ದ್ವೀಪಗಳು ಮತ್ತು ಇತರ ಭಾಗಗಳು ಸೇರುತ್ತವೆ. ಇದು ಇಂಡೋನೇಶಿಯಾದ (ಡಾ. ಶಹರೀರರ) ಪ್ರಜಾರಾಜ್ಯಕ್ಕೆ ಅಷ್ಟು ಸ್ನೇಹಪೂರ್ವವಾಗಿಲ್ಲ. ಇಂಡೋನೇಶಿಯನ್ನರಲ್ಲಿ ಒಡಕು ಹುಟ್ಟಿಸುವ ಡಚ್ಚರ ಆಟದ ಫಲವಿದೆನ್ನಬಹುದು.

ಅಮೇರಿಕೆಯಲ್ಲಿ ಮಗನಲಾಲ ಶಹಾರ ಕಾರ್ಯ
ಹಿಂದುಸ್ತಾನದ ಬಗ್ಗೆ ಅಲ್ಲಿ ಅಗಾಧ ಅಜ್ಞಾನ
ಅಪಪ್ರಚಾರದ ಸುರಿಮಳೆ

(ವಿಶೇಷ ಸುದ್ದಿಗಾರರಿಂದ)



ಶ್ರೀ ಮಗನಲಾಲ ಶಹಾ

'ಅವರು ಬಹಳ ದೊಡ್ಡ ಪ್ರಮಾಣದಲ್ಲಿ ಹಿಂದುಸ್ತಾನದ ಬಗ್ಗೆ ಭಾಷಣಗಳನ್ನು ಮಾಡುತಿರುವರು' 'ಅವರಮಾತು ಭವಿಷ್ಯವಾಣಿಯಾಗಿ ಪರಿಣಮಿಸಿತು' ಎಂದು ಮುಂತಾಗಿ ಅಮೇರಿಕೆಯ 'ಡೆಟ್ರಾಯಿಟ ನ್ಯೂಜ' ಪತ್ರಿಕೆಯಲ್ಲಿ ಶ್ರೀ ಶಹಾ ಇವರ ವರ್ಣನೆ ಬಂದಿದೆ.

ಅವರು ಹೋದುದು ಮೋಟಾರ ಉತ್ಪತ್ತಿಯ ಅಭ್ಯಾಸಕ್ಕಾಗಿ. ಜಗತ್ತಿನಲ್ಲಿಯ ಮೋಟಾರ ಉತ್ಪತ್ತಿಯ ಮೂರು ನಾಲ್ಕಾಂಶದಷ್ಟು ಒಂದೇ ಒಂದು ಡೆಟ್ರಾಯಿಟ ಪಟ್ಟಣದಲ್ಲಿ ಆಗುತಿರುವದು. ಶಹಾ ಇವರು ಸುಮಾರು ಆರು ತಿಂಗಳು ಆ ಪಟ್ಟಣದಲ್ಲಿಯ 'ಕ್ರಿಸಲರ' ಕಂಪನಿಯಲ್ಲಿಯೇ ಅಭ್ಯಾಸಮಾಡುತಿದ್ದರು. ಮುಂದೆ ಕಾನಡಾ, ಫ್ರಾನ್ಸ, ಇಂಗ್ಲಂಡ, ಸ್ವಿತ್ಸರಲಂಡ, ಇಟಲಿ ಇಜಿಪ್ತ ಮುಂತಾದ ದೇಶಗಳನ್ನಾದರೂ ಎರಡು ತಿಂಗಳು ಸುತ್ತಾಡಿ ಅವರು ಇದೇ ೧೯ ನೆ ದಿನಾಂಕಕ್ಕೆ ಮುಂಬಯಿಗೆ ಬಂದರು.

'ನಾನು ಮೋಟಾರ ಉತ್ಪತ್ತಿಯ ಕಲೆಯನ್ನು ಕಲಿಯಲು ಮುಖ್ಯವಾಗಿ ಹೋಗಿದ್ದಾದರೂ ಅಲ್ಲಿ ಹಿಂದುಸ್ತಾನದ ವಿರುದ್ಧ ನಡೆದ ಅಪಪ್ರಚಾರವು ನನಗೆ ಅಸಹ್ಯವಾಯಿತು' ಎಂದು ಅವರು ಹೇಳಿದರು.

ಅವರು ವಿಜಾಪುರದ ಪ್ರಸಿದ್ಧ ಕಾಂಗ್ರೆಸ ಕಾರ್ಯಕರ್ತರು, ಮುಂಬಯಿ ಶಾಸನಸಭೆಗೆ ಆರಿಸಿ ಬಂದವರು, ಒಳ್ಳೆ ನುರಿತ ಎಂಜನಿಯರರು. ಅವರನ್ನು ಕಾನಡಾದಲ್ಲಿ ಬರಗೊಡಬಾರದೆಂದು ಪ್ರಯತ್ನವಾಯಿತು. ಆ ನಿರ್ಬಂಧವು ಸಡಿಲಿಸಲಾಯಿತು.

ಅವರ ಅನುಭವದ ಲಾಭವು 'ಕರ್ಮವೀರ' ವಾಚಕರಿಗೆ ಆಗಬೇಕೆಂದು ಅವರಿಗೆ ಭೆಟ್ಟಿಯಾಗಿ ನಾನು ಹಲವು ಪ್ರಶ್ನೆಗಳನ್ನು ಕೇಳಿದೆನು.

ಪ್ರಶ್ನೆ:— ನೀವು ಹೋದುದರ ಉದ್ದೇಶವೇನು?

ಉತ್ತರ:— ಹಿಂದುಸ್ತಾನದಲ್ಲಿ ಮೋಟಾರ ಜೋಡಿಸುವ ಹಾಗೂ ಹೊಸದಾಗಿ ತಯಾರಮಾಡುವ ಉದ್ಯೋಗವನ್ನು ಬೆಳೆಸುವದೇ ಉದ್ದೇಶ. ಮೋಟಾರ ಉತ್ಪತ್ತಿಯ ಪದ್ಧತಿಯನ್ನು ಕಲಿಯಲಿಕ್ಕೆಂದೇ ನಾನು ಹೋದುದು. ಆದರೆ ಅಲ್ಲಿಯ ಅಪಪ್ರಚಾರಗಳನ್ನು ನೋಡಿ ನನಗೆ ಅಸಹ್ಯವಾಯಿತು. ಅದುದರಿಂದ ನಾನು ಪ್ರಚಾರಕಾರ್ಯಕ್ಕೂ ಕೈಹಾಕಬೇಕಾಯಿತು.

ಪ್ರಶ್ನೆ:— ನಿಮ್ಮ ಪ್ರಚಾರದ ಪ್ರಾರಂಭವು ಹೇಗೆ ಆಯಿತು.

ಉತ್ತರ:— ನಾವು ೨೧-೯-೪೬ ಕ್ಕೆ ಹಡಗ ವನ್ನೇರಿ ಹಾಂಕಾಂಗ ಮಾರ್ಗವಾಗಿ ಹೊರಟೆವು. ಹಡಗದಲ್ಲಿ ಇರಾಕ, ಇರಾಣ, ಮುಂತಾದ ರಾಷ್ಟ್ರದ ಜನರೂ ಇದ್ದರು. ನಡುಗಾಲ ಸರಕಾರವು ಹಿಂದುಸ್ತಾನದಲ್ಲಿ ಸ್ಥಾಪನವಾದ ಸುದ್ದಿಯನ್ನು ಹಡಗ ಕೇಳಿ ನನಗೆ ಬಹಳ ಸಂತೋಷವಾಯಿತು. ಹಡಗದಲ್ಲಿ ಒಂದು ಸಭೆಮಾಡಿ ಅಭಿನಂದನದ ತಂತಿಯನ್ನು ಕಳಿಸಬೇಕೆಂದು ಗೊತ್ತುಮಾಡಿದೆವು. ಇರಾಣದ ಒಬ್ಬ ಪ್ರಸಿದ್ಧ ವಿದ್ವಾಂಸನೂ ಪ್ರೊಫೆಸರನೂ ನಮ್ಮೊಡನೆ ಇದ್ದನು. ಅವನು ಅಂದದ್ದು, "ಒಕ್ಕಟ್ಟಾದ ಸ್ವತಂತ್ರ ಹಿಂದುಸ್ತಾನವೆ ಏಶಿಯಾದ ಜನರನ್ನು ಉಳಿಸಬಲ್ಲದು. ಇಲ್ಲದಿದ್ದರೆ ನಾವೆಲ್ಲ ಹಾಳಾಗಿ ಹೋಗುವೆವು. ಆದರೆ ಹಡಗದಲ್ಲಿ ಹಲವು ಲೀಗಿನವರು ಮಾತ್ರ ಎಲ್ಲಕ್ಕೂ ವಿರೋಧ ಮಾಡಿದರು. ನೀವು ನಿಜವಾದ ಮೂಲ ಮುಸಲ್ಮಾನರೇ ಅಲ್ಲ. ಈ ಧರ್ಮವನ್ನು ನೀವು ಈಚೆಗೆ ಸ್ವೀಕರಿಸಿರುವಿರಿ, ಎಂದು ಆ ಇರಾಣೀ ಪ್ರೊಫೆಸರನು ಅವರನ್ನು ಹೀಯಾಳಿಸಿದನು.

ಪ್ರಶ್ನೆ:— ಅಮೇರಿಕೆಯಲ್ಲಿ ನಿಮ್ಮ ಪ್ರಚಾರ ಹೇಗೆ ಪ್ರಾರಂಭವಾಯಿತು?

ಉತ್ತರ:- ಹಿಂದುಸ್ತಾನವನ್ನು ಕುರಿತು ನಾನು ಒಂದು ಸಾವಿರ ರೂಪಾಯಿಯಷ್ಟು ಬೆಲೆಬಾಳುವ ಸುಂದರ ಪುಸ್ತಕಗಳನ್ನು ಸಂಗಡ ಒಯ್ದಿದ್ದೆನು. ಅವುಗಳನ್ನು ಲೇಖಕರಿಗೆ ವೃತ್ತಪತ್ರಕಾರರಿಗೆ ಕೊಡುತಿದ್ದೆನು. ಒಮ್ಮೆ ವಾಯ್. ಎಮ್. ಸಿ. ಎ. ದಲ್ಲಿ ನನ್ನದೊಂದು ಭಾಷಣವಾಯಿತು. ಅಂದಿನಿಂದ ನನಗೆ ಒಂದೇ ಸವನೆ ಆಮಂತ್ರಣಗಳು ಬರಲಾರಂಭಿಸಿದವು.

ಪ್ರಶ್ನೆ:— ನಿಮ್ಮ ಪ್ರಚಾರದ ಮುಖ್ಯ ಸಾಧನ ಮತ್ತು ಸ್ವರೂಪವೇನು?

ಉತ್ತರ:— ನಾನು ಸುಮಾರು ೬೦ ವ್ಯಾಖ್ಯಾನಗಳನ್ನು ಕೊಟ್ಟಿರಲಿಕ್ಕೆ ಸಾಕು. ಕ್ಲಬ್ಬುಗಳಲ್ಲಿ ಚರ್ಚುಗಳಲ್ಲಿ, ಅಭ್ಯಾಸ ಮಂಡಲಗಳಲ್ಲಿ, ಸ್ತ್ರೀಯರ ಸಂಘಗಳಲ್ಲಿ ನನ್ನನ್ನು ಕರೆಯುತಿದ್ದರು. ಅದೇ ಮೇರೆಗೆ ಭೆಟ್ಟಿಯಾಗುತಿದ್ದರು. ಅವರು ಪತ್ರಿಕೆಗಳಲ್ಲಿ ನಾನು ಹೇಳಿದ ಸಂಗತಿಗಳನ್ನು ಬರೆಯುತಿದ್ದರು. ಹಿಂದುಸ್ತಾನದ ಬಗ್ಗೆ ನಿಜ ಸಂಗತಿ ಹೇಳುವದೆ ನನ್ನ ಮುಖ್ಯಕೆಲಸವಾಗಿದೆ.

ಪ್ರಶ್ನೆ :— ಸಾಮಾನ್ಯವಾಗಿ ಅಮೇರಿಕನ್ ಜನರ ಸ್ವಭಾವವು ನಿಮಗೆ ಹೇಗೆ ಕಂಡಿತು?

ಉತ್ತರ:— ಪ್ರಜಾಪ್ರಭುತ್ವ ತತ್ವವು ಅವರ ರೋಮರೋಮದಲ್ಲಿ ಭೇದಿಸಿದೆ. ಅವರು ತೆರೆ ಮನಸಿನವರು. ಎಲ್ಲಬಗೆಯ ಚರ್ಚೆಯನ್ನು ಮಾಡುವ ಪ್ರೀತಿ ಅವರಿಗೆ. ಹಿಂದುಸ್ತಾನದ ಬಗ್ಗೆ ಅವರಿಗೆ ವಿಶೇಷ ಪ್ರೀತಿ ಹಾಗೂ ಜಿಜ್ಞಾಸೆ. ಅಂಕಿಸಂಖ್ಯೆಗಳ ಮೇಲೆ ಅವರ ಭರವಸೆ ಬಹಳ.

ಪ್ರಶ್ನೆ :— ಅಲ್ಲಿ ಅಪಪ್ರಚಾರ ಯಾವ ಬಗೆಯದು ಹಾಗೂ ಯಾರು ಮಾಡಿದ್ದು?

ಉತ್ತರ :— ಈವರೆಗೆ ಮಿಶನರಿ ಜನರು, ಸಾಮ್ರಾಜ್ಯವಾದೀ ಬ್ರಿಟಿಶ ಲೇಖಕರು ಹಾಗೂ ಭಾಷಣಕಾರರು ಈಚೆಗೆ ಲೀಗಿನವರು ಈ ಅಪಪ್ರಚಾರವನ್ನು ಬಹಳ ದೊಡ್ಡ ಪ್ರಮಾಣದಲ್ಲಿ ಮಾಡಿರುವರು.

ಪ್ರಶ್ನೆ:— ಈ ಅಪಪ್ರಚಾರದ ಸ್ವರೂಪವೇನು?

ಉತ್ತರ:— ಅನೇಕ ಉದಾಹರಣೆಗಳನ್ನು ಕೊಡಬಹುದು. (ಅ) ಒಂದು ಜಾತಿಯ ಶಿಕ್ಷಕರಿದ್ದರೆ ಇನ್ನೊಂದು ಜಾತಿಯ ವಿದ್ಯಾರ್ಥಿಗಳೇ ಶಾಲೆಗೆ ಬರುವದಿಲ್ಲ. ಅದುದರಿಂದಲೆ ಹಿಂದೀಯರು ಅಶಿಕ್ಷಿತರಾಗಿ ಉಳಿದಿರುವರು. (ಬ) ಗಾಂಧೀಜಿಯವರು ಯಾವ ಬಗೆಯ ಯಂತ್ರಗಳನ್ನೂ ಉಪಯೋಗಿಸಲು ಅಸ್ಪದ ಕೊಡುವದಿಲ್ಲ. ಅದುದರಿಂದ ಹಿಂದುಸ್ತಾನವು ಉದ್ಯೋಗೀಕರಣದಲ್ಲಿ ಹಿಂದುಳಿದಿದೆ. (ಕ) ಜಾತಿ ಭೇದದ ಮೂಲಕ ಪ್ರಜಾಪ್ರಭುತ್ವವೆಂಬುದು ಹಿಂದುಸ್ತಾನದಲ್ಲಿ ಸಾಧ್ಯವೇ ಇಲ್ಲ. (ಡ) ಕಾಂಗ್ರೆಸು ಕೇವಲ ಹಿಂದೂ ಜನರದೇ ಇದೆ. ಮೌಲಾನಾ ಆಝಾದರು ಮುಸಲ್ಮಾನರು ಎಂಬುದು ಸಹ ಅನೇಕ ಅಮೇರಿಕನ್ನರಿಗೆ ಗೊತ್ತಿಲ್ಲ! ಹೀಗೆ ಒಂದಲ್ಲ, ಎರಡಲ್ಲ. ಅನೇಕ ವಿಷಯಗಳಲ್ಲಿ ಒಂದೇ ಸವನೆ ಅಪಪ್ರಚಾರ ನಡೆಯುತಿರುವದು?

ಪ್ರಶ್ನೆ:— ಈ ಅಪಪ್ರಚಾರವನ್ನು ನೀವು ಹೇಗೆ ಹೋಗಲಾಡಿಸಲೆತ್ನಿಸಿದಿರಿ.

ಉತ್ತರ:— ಅಲ್ಲಿಯ ಜನರಿಗೆ ಭಾವನಾತ್ಮಕವಾದ ಉದ್ಬುದ್ಧ ವ್ಯಾಖ್ಯಾನಗಳು ರುಚಿಸವು. ಅವರ ದೃಷ್ಟಿ ಹೆಚ್ಚು ವ್ಯವಹಾರಿಕ. ಒಂದು ಬಗೆಯಿಂದ ಬಣಜಿಗನ (ಬನಿಯಾ ದೃಷ್ಟಿ) ಅಂದರೂ ಸಲ್ಲುವದು. ಸಾಮಾನ್ಯವಾಗಿ ಅಲ್ಲಿ ೨೦ ೩೦ ಮಿನೀಟು ಮಾತ್ರ ವ್ಯಾಖ್ಯಾನಗಳು ಆಗುವವು. ಮುಂದೆ ೧೫-೨೦ ಮಿನೀಟು ಪ್ರಶ್ನೋತ್ತರಗಳು ನಡೆಯುವವು. ಅಂಕಿಸಂಖ್ಯೆಗಳನ್ನು ಕೊಟ್ಟು ಅವರ ಮನವರಿಕೆ ಕೊಡುವದೆ ನನ್ನ ಕೆಲಸವಾಗಿತ್ತು. ಫ್ಯಾಸಿಝಂ, ಹಿಟ್ಲರಶಾಹಿ

— ೧೧ ನೇ ಪುಟಕ್ಕೆ

ಕರ್ಮವೀರ
ಹರಿಜನ ಪುರವಣಿ

ಉತ್ಪಾದನೆಯನ್ನು ಹೆಚ್ಚಿಸುವುದು

'ಉತ್ಪಾದನೆಯನ್ನು ಹೆಚ್ಚಿಸುವುದು ಮತ್ತು ದೇಶದಲ್ಲಿಯ ಜನಸಾಮಾನ್ಯರ ಜೀವನ ಮಟ್ಟವನ್ನು ಸುಧಾರಿಸುವುದು, ಕಲಕತ್ತೆಯ ಮಾರವಾಡಿ ವಣಿಕ್ ಸಂಘದ ಅಧ್ಯಕ್ಷಸ್ಥಾನದಿಂದ ಶೇಠ ಬಿ. ಎನ್. ಜಾಲನ್‌ರವರು ಮಾಡಿದ ಭಾಷಣದ ರಹಸ್ಯವಾಗಿದೆ. ಅನುಕೂಲ ಸಮಯದಲ್ಲೆಲ್ಲ ಈ ಎರಡು ವಾಕ್ಯಗಳನ್ನು ಅತ್ತಿಂದಿತ್ತ ಅಲೆದಾಡಿಸುವದುಂಟು. ಇತ್ತೀಚಿಗೆ ಕಾರಖಾನೆದಾರರ ಸಂಘದ ಸಭೆಯಲ್ಲಿ ಪಂಡಿತ ಜವಾಹರಲಾಲರು ಮಾಡಿದ ಭಾಷಣದಲ್ಲಿಯೂ ಈಯೆರಡು ವಾಕ್ಯಗಳೆ ಎದ್ದು ಕಾಣುತ್ತಿದ್ದವು. ಆದರೆ ಈಯೆರಡು ವಾಕ್ಯಗಳ ಅರ್ಥವೇನೆಂಬುದನ್ನೆಂದಿಗೂ ನಿಚ್ಚಳವಾಗಿ ಉಲ್ಲೇಖಿಸಿಲ್ಲ. ಆದುದರಿಂದ ಅಜಾಗ್ರತ ಜನರ ಲಕ್ಷ್ಯವನ್ನೆಳೆಯುವದಕ್ಕಾಗಿ ಮತ್ತು ವಿಚಾರಮಾಡದಿರುವ ಜನರ ಮನವರಿಕೆ ಮಾಡಿಕೊಡಲು ಈ ಶಬ್ದಗಳು ಉಪಯೋಗಿಸಲ್ಪಡುವವೆಂದು ಹೇಳಬಹುದು. ಈಬಗೆಯ ಶಬ್ದಪ್ರಯೋಗಗಳಿಂದ ಜನಸಾಮಾನ್ಯರು ಆಕರ್ಷಿಸಲ್ಪಡುವರೆಂಬುದು ನಿಸ್ಸಂದಿಗ್ಧವಾಗಿದೆ.

ಉಪವಾಸ ಬಳಲುವ ಮತ್ತು ಸಾಕಷ್ಟು ಬಟ್ಟೆಯಿಲ್ಲದ ಇಂಥ ದೇಶದಲ್ಲಿ ಜನತೆಯ ಮುಖ್ಯಾವಶ್ಯಕತೆಗಳಾದ ಆಹಾರ ಮತ್ತು ಬಟ್ಟೆಯನ್ನಾದರೂ ಪೂರೈಸಿಕೊಟ್ಟದ್ದಾದರೆ ಈ ಶಬ್ದಗಳಿಗೆ ಏನಾದರೂ ಅರ್ಥವುಂಟೆಂದು ಹೇಳಿದಂತಾಗುವದು. ಆದುದರಿಂದ ಇಂದು ಎಲ್ಲೆಲ್ಲಿ ಒಂದೊಪ್ಪತ್ತುಕೂಡ ಅನ್ನ ಸಿಕ್ಕುವುದಿಲ್ಲವೋ ಅಂಥಲ್ಲೆಲ್ಲ ಎರಡೊತ್ತು ಊಟವಾದರೂ ಪ್ರತಿಯೊಬ್ಬನಿಗೆ ಸಿಕ್ಕುವಂತೆ ನಾವು ಪ್ರಯತ್ನಿಸಬೇಕು. ಜನತೆಯ ಲಲಿತಕಲಾದೃಷ್ಟಿಯನ್ನು ಪರಿಪೂರ್ಣಗೊಳಿಸಲಿಕ್ಕಾಗದಿದ್ದರೂ ನಿಷ್ಠ ಅವರು ಮರ್ಯಾದೆಯನ್ನು ಮುಚ್ಚಿಕೊಂಡು ಗಾಳಿಮಳೆಗಳಿಂದ ಸಂರಕ್ಷಿಸಲ್ಪಡುವಂತೆ ನೋಡಿಕೊಳ್ಳುವ ಮಟ್ಟಿಗಾದರೂ ಬಟ್ಟೆ ಸಿಕ್ಕುವಂತೆ ಪ್ರಯತ್ನಿಸಬೇಕು.

ಜನತೆಯ ಅವಶ್ಯಕತೆಗಳಿಗಿಂತಲೂ ತಮ್ಮ ಸ್ವಂತ ಉದ್ದೇಶಗಳ ಅಭಿವೃದ್ಧಿಯಾಗಬಹುದೆಂಬುದರ ಕಡೆಗೇ ಶೇಠ ಜಲಾನರು ಹೆಚ್ಚು ಆಸ್ಥೆಯನ್ನು ತಳೆದಿರುವರೆಂಬದು ಅವರ ಭಾಷಣದಿಂದ ಗೊತ್ತಾಗುತ್ತದೆ. ಏಕೆಂದರೆ ಅವರು ತಮ್ಮ ಭಾಷಣದಲ್ಲಿ "ಹಿಂದುಸ್ತಾನವು ತನ್ನ ಉದ್ಯೋಗ ಧಂದೆಗಳನ್ನು ಶಾಶ್ವತ ತಳಹದಿಯ ಮೇಲೆ ಅಭಿವರ್ಧಿಸಿಕೊಳ್ಳಬೇಕಾಗಿದ್ದರೆ ಕೆಲ ಸಮಯ ನಾವು ಅಭಾವದಿಂದ ಬಳಲುವ ಪ್ರಸಂಗ ... ಸರಕಾರದವರು ನಿರ್ಯಾತದ ಧೋರಣ ... ವಹಿಸಬೇಕೆಂದು ಅಭಿಪ್ರಾಯಪಟ್ಟರು ... ಹಿಂದುಸ್ತಾನದಲ್ಲಿ ತಯಾರಾದ ಸರಕು ಗ... ಪರದೇಶಗಳಿಗೆ ಕಳಿಸದಿದ್ದರೆ ಹಿಂದುಸ್ತಾನದ ಔದ್ಯೋಗಿಕ ಅಭಿವೃದ್ಧಿಯು ಶಾಶ್ವತ ತಳಹದಿಯ ಮೇಲೆ ಸಾಗಲಾರದೆಂದು ತಮ್ಮ ನಿಶ್ಚಿತ ಮತವಾಗಿದೆಂದೂ ಅವರು ತಮ್ಮ ಭಾಷಣದಲ್ಲಿ ಹೇಳಿರುವರು. ಲಾರ್ಡ ಕೇನ್ಸರವರು ಪ್ರತಿಪಾದಿಸಿದ ಉತ್ಪಾದನೆಯ ಹೆಚ್ಚಳದ ಧೋರಣೆಯ ತತ್ವಾನುಸಾರವಾಗಿಯೆ ಸರಕಾರದವರು ತಮ್ಮ ಸೂಚನೆಗಳನ್ನು ಮಾಡಬೇಕೆಂದು ಅವರು ಸಲಹೆಯನ್ನಿತ್ತಿರುವರು. 'ಹೆಚ್ಚು ರೊಟ್ಟಿ ತಿಂದಂತೆ ಆರೊಟ್ಟಿ ಹೆಚ್ಚುತ್ತಲೇ ಹೋಗುವದು' ಎಂಬುದೇ ಅವರ ಆ ಸಲಹೆ. ಅರ್ಥಸಚಿವರು ಸೂಚಿಸಿದ ಸಾಮಾಜಿಕ ಧ್ಯೇಯಗಳು ಸಾಧ್ಯವಾಗಬೇಕಾದರೆ ಇಂಥ ಧೋರಣವೇ ಅವಶ್ಯವೆಂದು ಅವರ ನಂಬುಗೆ. ಲಾರ್ಡ ಕೇನ್ಸರವರು ತಮ್ಮ ಗುರುಗಳೆಂದು ಅವರು ಬಹಿರಂಗವಾಗಿ ಒಪ್ಪಿಕೊಂಡದ್ದಕ್ಕಾಗಿ ನಮಗೆ ಸಂತೋಷ. 'ಹೆಚ್ಚೆಚ್ಚು ರೊಟ್ಟಿ ತಿನ್ನುತ್ತ ಹೋದರೆ ಉತ್ಪಾದನೆ ಹೆಚ್ಚುತ್ತ ಹೋಗುತ್ತದೆಂಬುದು ನಮ್ಮಂಥ ಸಾಮಾನ್ಯ ಮನುಷ್ಯಜೀವಿಗಳಿಗೆ ಎಷ್ಟೇ ವಿಸಂಗತ ಕಾಣಬಂದರೂ ಆ ದೇವತಾಪುರುಷರಿಗೆ ಅದು ಸುಸಂಗತವಾಗಿಯೇ ಕಾಣಬಹುದು. ಅವರು ಆ ರೊಟ್ಟಿಯನ್ನು ತಿನ್ನುವರೇನೊ ನಿಜ ಆದರೆ ಅದು ಅವರದಾಗಿರದೆ ಎರಡನೆಯವರದಾಗಿರುವುದು. ಆ ಪವಾಡದ ರಹಸ್ಯವೆಲ್ಲ ಇದರಲ್ಲಿ ಅಡಕವಾಗಿದೆ. ಅವರು ಎರಡನೆಯವರ ರೊಟ್ಟಿಯನ್ನೇ ತಿನ್ನುತ್ತ ಹೋದರೆ ಅವರ ಸ್ವಂತದ ರೊಟ್ಟಿಯು ಹಾಗೆಯೇ ಸ್ಥಿರವಾಗಿ ಉಳಿಯುತ್ತಕ್ಕದ್ದೆಂಬುದು ನಿಶ್ಚಿತ. ಆದರೆ ನಿಮಗೆ ಪಚನವಾಗುವದಕ್ಕಿಂತ ಹೆಚ್ಚಿನ ಎರಡನೆಯವರ ರೊಟ್ಟಿಯನ್ನು ಕಚ್ಚುವುದೆ ಸಾಮಾನ್ಯವಾಗಿ ಇಂಥವರ ಕ್ರಮವಾಗಿದೆ. ಇದರಿಂದ ಅವರ ಬೊಜ್ಜು ಹೆಚ್ಚಿಗೆ ಬೆಳೆಯುತ್ತ ಹೋಗುತ್ತದೆ.

ಉತ್ಪಾದನೆಯೋ ವಿನಾಶವೊ ?

ಇಂದು ಅಸ್ತಿತ್ವದಲ್ಲಿರುವ ದೊಡ್ಡ ಪ್ರಮಾಣದ ಉದ್ಯೋಗಗಳು ಯಾವ ಬಗೆಯಿಂದ ನಡೆಸಲ್ಪಡುತಿವೆಯೊ ಆ ಬಗೆಯ ಕ್ರಮಗಳನ್ನು ನಾವು ಹಿಂದಿನ ಬರೆಹದಲ್ಲಿ ಪ್ರತಿಪಾದಿಸಿದ್ದೇವೆ. ಈ ಉದ್ಯೋಗಗಳು ಪ್ರಗತಿಪರವಾಗಿ ಸಾಗಿಲ್ಲೆಂಬುದನ್ನೂ ನಾವು ತೋರಿಸಿಕೊಟ್ಟಿದ್ದೇವೆ. ಉತ್ಪಾದಿಸುವದಕ್ಕಲ್ಲ ವಿನಾಶಕ್ಕಾಗಿಯೆ ಶಾಸ್ತ್ರಗಳ ಉಪಯೋಗವೆಂತು ಮಾಡಲಾಗುತ್ತಿದೆಂಬದನ್ನೂ ನಾವು ಹಿಂದಿನ ಬರೆಹದಲ್ಲಿ ತೋರಿಸಿಕೊಟ್ಟದ್ದೇವೆ. ಪರಿಸ್ಥಿತಿ ಹೀಗಿರುವದರಿಂದ ಉತ್ಪಾದನೆಯನ್ನು ಹೇಗೆ ಹೆಚ್ಚಿಸಬೇಕೆಂಬದನ್ನು ಚೆನ್ನಾಗಿ ಪರೀಕ್ಷಿಸುವದು ಅವಶ್ಯವೆನಿಸುತ್ತದೆ. ಭತ್ತದ ಗಿರಣಿಗಳ ಸಹಾಯದಿಂದ ನಾವು ಅನಾರೋಗ್ಯಕರ ಪಾಲಿಶ್ದ ಅಕ್ಕಿಯನ್ನು ಸಿದ್ಧಪಡಿಸಿದರೆ ಉತ್ಪಾದನೆಯ ಹೆಚ್ಚಳವೆಂದು ಅದಕ್ಕೆ ಕರೆಯಬಹುದೆ? ಒಕ್ಕಲಿಗನಿಂದ ಆ ಭತ್ತದ ಉತ್ಪಾದನೆಯ ವಿನಾಶವಾದಂತಲ್ಲವೆ? ಅದೇ ರೀತಿಯಾಗಿ ಸಕ್ಕರೆ ಗಿರಣಿಗಳು ಕಬ್ಬಿನರಸದಿಂದ ಬಿಳಿ ಸಕ್ಕರೆಯನ್ನು ಸಿದ್ಧಪಡಿಸಿ ಕಡಮೆ ಪೌಷ್ಟಿಕ ಆಹಾರವನ್ನು ಒದಗಿಸಿ ಅಷ್ಟೇ ಅಲ್ಲ ಅತ್ಯಂತ ಆರೋಗ್ಯಕರವಾದ ಕಬ್ಬಿನರಸದಲ್ಲಿಯ ಪೌಷ್ಟಿಕತೆಯನ್ನೆಲ್ಲ ನಾಶಮಾಡಿ ಬಿಟ್ಟರೆ ಉತ್ಪಾದನೆಯನ್ನು ಹೆಚ್ಚಿಸಿದೆ ಎಂಬ ಶಬ್ದವನ್ನು ನಾವು ಸರಿಯಾದ ಅರ್ಥದಲ್ಲಿ ಉಪಯೋಗಿಸಿದಂತಾಗುವದೆ? ಸೃಷ್ಟಿ ದೇವತೆಯು ಕೊಟ್ಟ ಕಾಣಿಕೆಗಳನ್ನು ನಾಶಗೊಳಿಸಿದ ಉದಾಹರಣೆಯಿದಲ್ಲವೆ? ಮನುಷ್ಯಪ್ರಯತ್ನಗಳಿಂದ ಬರಿ ಸಂಖ್ಯೆಯಲ್ಲಿ ಮಾತ್ರವಲ್ಲ ಗುಣದಲ್ಲಿಯೂ ಹೆಚ್ಚಳವಾದರೆ ನಿಜವಾಗಿ ಉತ್ಪಾದನೆಯ ಹೆಚ್ಚಳವಾದಂತಾಗುವದು. ಒಕ್ಕಲಿಗರು ಬೀಜಗಳನ್ನು ಬಿತ್ತಿ ತಮ್ಮ ಪರಿಶ್ರಮದಿಂದ ನೂರ್ಮಡಿ ಬೆಳೆದುಕೊಂಡಾಗ ಅವರು ಉತ್ಪಾದನೆಯನ್ನು ಹೆಚ್ಚಿಸಿದರೆಂದು ಹೇಳಿದರೆ ನ್ಯಾಯ್ಯವೆನಿಸುವದು. ಆದರೆ ಗಿರಣಿಗಾರರು ಗಿರಣಿಗಳ ಸಹಾಯದಿಂದ ಹೆಚ್ಚಿಸಿದ ಉತ್ಪಾದನೆಯನ್ನು ಸೃಷ್ಟಿದೇವತೆಯು ಔದಾರ್ಯದಿಂದ ಕೊಡಮಾಡಿದ ಕಾಣಿಕೆಗಳೊಡನೆ ಹೋಲಿಸಿ ನೋಡಿದ್ದಾದರೆ ಜನರು ಉತ್ಪಾದನೆಗಾಗಿ ಅಲ್ಲ ಆದರೆ ವಿನಾಶಕ್ಕಾಗಿ ಗಿರಣಿಗಳ ಉಪಯೋಗವನ್ನು ಮಾಡಿಕೊಂಡಿರುವರೆಂದು ಹೇಳಬೇಕಾಗುವದು. ಉತ್ಪಾದನೆಯನ್ನು ಹೆಚ್ಚಿಸುವ ಮಾತಂತೂ ದೂರೇ ಉಳಿಯಿತು.

ಬೆಳೆಗಳನ್ನು ಬದಲಿಸುವದು

ಬಿಹಾರದಲ್ಲಿ ಮತ್ತು ಸಂಯುಕ್ತಪ್ರಾಂತದಲ್ಲಿಯ ಬಹಳ ಭಾಗದಲ್ಲಿ ಸಾವಿರಗಟ್ಟಲೆ ಎಕರೆ ಭೂಮಿಯನ್ನು ಕಬ್ಬು ಬೆಳೆಯುವ ಕ್ಷೇತ್ರವನ್ನಾಗಿ ಮಾರ್ಪಡಿಸಲಾಗಿದೆ. ಮೊದಲು ಈ ಕ್ಷೇತ್ರ ಪಡ ಭೂಮಿಯಾಗಿದ್ದು ಈಗ ಅಲ್ಲಿ ಕಬ್ಬು ಬೆಳೆಯುವದನ್ನು ಕೈಕೊಂಡಿದ್ದರೆ, ಉತ್ಪಾದನೆಯನ್ನು ಅವರು ಹೆಚ್ಚಿಸಿದಂತಾಗುತಿತ್ತು. ಕಬ್ಬು ಬೆಳೆಯುವದನ್ನು ಕೈಕೊಳ್ಳುವ ಮೊದಲು ಬಿಹಾರದಲ್ಲಿ ಈ ಭೂಮಿಗಳಲ್ಲಿ ಭತ್ತ ಬೆಳೆಯುತಿತ್ತು. ಮತ್ತು ಕೈಯಿಂದ ಕುಟ್ಟಿದ ಅಕ್ಕಿಯನ್ನೆಲ್ಲ ಬಿಹಾರ ನುರಿಸುತಿದ್ದಿತು. ಆದರೀಗ ಬೆಳೆಗಳನ್ನೆ ಬದಲಿಸಿ ಬಿಟ್ಟು ಕಬ್ಬನ್ನು ಬೆಳೆಯಹತ್ತಿದ್ದರಿಂದ ಬಿಹಾರ ತನ್ನ ಅಕ್ಕಿಗಾಗಿ ಬ್ರಹ್ಮದೇಶವನ್ನವಲಂಬಿಸಬೇಕಾಗಿದೆ. ಬ್ರಹ್ಮದೇಶದಿಂದ ಪಾಲಿಶಾದ ಅಕ್ಕಿಯೆ ಬರುತ್ತದೆ. ಅರ್ಥಾತ್ ಪೌಷ್ಟಿಕ ಸತ್ವವೆಲ್ಲ ನಾಶವಾಗಿ ಹೋದ ಅಕ್ಕಿಯೇ ಅವರಿಗೆ ದೊರೆಯುತ್ತದೆ. ಕಬ್ಬಿನ ಬೆಳೆಯಿಂದ ಗಿರಣಿಗಾರರ ಬ್ಯಾಂಕಿನಲ್ಲಿಯ ಹಣದ ... ಳ ಬೇಕಾದಷ್ಟು ಆದರೂ ಜನಸಾಮಾನ್ಯರು ತಾವು ಸ್ವಂತ ಬೆಳೆದ ಆರೋಗ್ಯಕರವಾದ ಅಕ್ಕಿಯ ಬದಲು 'ಹೊರಗಿನಿಂದ ಬಂದ ನಿಃಸಾರ ಅಕ್ಕಿಯಿಂದಲೆ ಉಪಜೀವನ ಸಾಗಿಸಬೇಕಾವುದಾದ್ದರಿಂದ ಈ ಹೆಚ್ಚಳಕ್ಕೆ ಹೆಚ್ಚಳವೆಂದು ಅದೆಂತು ಕರೆಯಬೇಕೊ ತಿಳಿಯದಾಗಿದೆ? ಈ ರೀತಿಯಾಗಿ ಆಹಾರ ಪದಾರ್ಥಗಳ ಬದಲು ಗಿರಣಿಗಳಿಗೆ ಕಚ್ಚಾ ಮಾಲನ್ನು ಒದಗಿಸುವದಕ್ಕಾಗಿ ಬೆಳೆಗಳನ್ನು ಬದಲಿಸುವದೆಂದರೆ ದೇಶಕ್ಕೆ ಅಹಿತವಾದದ್ದಾಗುವದಿಷ್ಟೇ ಅಲ್ಲ ಜನರ ಆರೋಗ್ಯಕ್ಕೆ ಅದು ಅಪಾಯಕರವೂ ಆಗುವದೆಂಬದು ಖಂಡಿತ. ಬಹಳಾದರೆ ಅದಕ್ಕೆ ಒಂದು ಬಗೆಯ ಚಪ್ಪವೆಂದು ಕರೆಯಬಹುದು, ಆದರೆ ಉತ್ಪಾದನೆಯಲ್ಲ. ದೇಶದಲ್ಲಿ ನಡೆದ ಉತ್ಪಾದನೆಯ ಹೆಚ್ಚಳದ ಮಾದರಿಯಿದು ಇದರಿಂದ ಜನಸಾಮಾನ್ಯರಿಗೆ ತಮ್ಮ ಮುಖ್ಯ ಅವಶ್ಯಕತೆಗಳನ್ನು ಪೂರೈಸಿಕೊಳ್ಳುವದು ಅತ್ಯಂತ ಕಷ್ಟಕರವಾಗಿದೆ.

ಅದೇ ರೀತಿಯಾಗಿ ಮಲಬಾರಿನಲ್ಲಿ ಮೊದಲು ಭತ್ತದ ಗದ್ದೆಗಳಿದ್ದವುಗಳನ್ನೆಲ್ಲ ಈಗ ಟೆಂಗಿನಕಾಯಿ ಬನಗಳನ್ನಾಗಿ ಪರಿವರ್ತಿಸಲಾಗಿದೆ. ಈ ಟೆಂಗಿನ ಬನಗಳಾದರೂ ಜನತೆಯ ಆಹಾರಕ್ಕಾಗಿ ಟೆಂಗಿನಕಾಯಿಗಳನ್ನು ಉತ್ಪಾದಿಸುವದಿಲ್ಲ ಆದರೆ ಸಾಬೂಣದ ಗಿರಣಿಗಳಿಗೆ ಎಣ್ಣೆಯನ್ನು ಒದಗಿಸುವದಕ್ಕಾಗಿ. ಜನತೆಗೆ ಮಹತ್ವದ ಆಹಾರ ಪದಾರ್ಥವಿಲ್ಲದಂತೆ ಮಾಡಿ 'ಲಕ್ಸ' ಸಾಬೂಣದ ಉತ್ಪಾದನೆಯನ್ನು ಪ್ರಚಂಡ ಪ್ರಮಾಣದಲ್ಲಿ ಹೆಚ್ಚಿಸಿದರೆ ಅದಕ್ಕೆ ಉತ್ಪಾದನೆಯ ಹೆಚ್ಚಳವೆಂದು ಅದೆಂತು ಕರೆಯಬೇಕು? ಮೊದಲು ಭತ್ತವನ್ನು ಬೆಳೆಯುತಿದ್ದ ಒಕ್ಕಲಿಗರಿಗೆಲ್ಲ ಈಗ ಬ್ರೇಝಿಲ್‌ದಿಂದ ತರಿಸಿದ ಪಾಲಿಶ್ದ ಅಕ್ಕಿಯನ್ನು ಕೊಡಲಾಗುತ್ತದೆ. ಮೊದಲು ಯಾವ ಒಕ್ಕಲಿಗರು ತಾವು ಸ್ವತಃ ಬೆಳೆದ ಪಾಲಿಶ್ ಮಾಡದಿದ್ದ ಅಕ್ಕಿಯನ್ನು ತಿನ್ನುತಿದ್ದರೋ ಅವರಿಗೇ ಈಗ ಬ್ರೇಝಿಲ್‌ದ ಪಾಲಿಶ್ದ ಅಕ್ಕಿಯನ್ನು ಒದಗಿಸುವದೆ ಗಿರಣಿಗಾರರ ಈ ಎಲ್ಲ ಪ್ರಯತ್ನಗಳ ಪರ್ಯವಸಾನವೆಂಬುದು ಇದೆಲ್ಲ ಪೃಥಕ್ಕರಣದಿಂದ ಗೊತ್ತಾಗುತ್ತದೆ. ಅಲ್ಲದೆ ಭತ್ತದ ಗದ್ದೆಗಳನ್ನೆಲ್ಲ ಸಾಬೂಣಕ್ಕಾಗಿ ಕಚ್ಚಾಮಾಲನ್ನು ಸಿದ್ಧಪಡಿಸುವ ಬನಗಳನ್ನಾಗಿ ಮಾರ್ಪಡಿಸಲಾಗಿದೆ. ಇದು ಉತ್ಪಾದನದ ಹೆಚ್ಚಳವೆ? ಜನಸಾಮಾನ್ಯರ ಜೀವನ ಮಟ್ಟವನ್ನು ಏರಿಸುವುದಕ್ಕಾಗಿ ನಡೆದ ಪ್ರಯತ್ನಗಳೇ ಇವು? ಗಿರಣಿಗಾರರು ಕೆಲವು ರೊಟ್ಟಿಗಳನ್ನು ತಿಂದಿರುವರು. ಆದರೆ ಅದೇ ಕಾಲಕ್ಕೆ ರೊಟ್ಟಿಯ ಸಂಗ್ರಹ ಹೆಚ್ಚಿದೆಂಬುದು ಗೊತ್ತಾಗುವದು. ಆದರೆ ಜನಸಾಮಾನ್ಯರ ಪರಿಸ್ಥಿತಿಯೇನು?

ಆಹಾರ ಪದಾರ್ಥಗಳ ಬದಲು ಜೈನೀವಸ್ತುಗಳಿಗಾಗಿ ಕಚ್ಚಾ ಸಾಮಗ್ರಿಗಳನ್ನು ಸಿದ್ಧಪಡಿಸಲು ಬೇಕೆಂತಲೆ ಬೆಳೆಗಳನ್ನು ಬದಲು ಮಾಡುವ ಕ್ರಮ ನಡೆದಿರುವಾಗ ದೇಶದಲ್ಲಿ ಒಂದರ ಹಿಂದೊಂದರಂತೆ ಬರಗಳು ಬೀಳಹತ್ತಿದರೆ ಆಶ್ಚರ್ಯವೇನು? ನಿಜವಾಗಿಯೂ ನಾವು ಉತ್ಪಾದನೆಯನ್ನು ಹೆಚ್ಚಿಸುವದಕ್ಕಾಗಿ ಪ್ರಯತ್ನಿಸಿದ್ದರೆ ನಮ್ಮ ಮುಖ್ಯಾವಶ್ಯಕತೆಗಳ ಪೂರಯಿಕೆಯೆಲ್ಲ ಬಹಳ ಸಮಾಧಾನಕರವಾಗಿ ಸಾಗುತಿದ್ದಿತು. ಆದರೆ ನಾವು ಸುತ್ತಲೆಲ್ಲ ದೃಷ್ಟಿಯನ್ನು ಚೆಲ್ಲಿದರೆ 'ದೇಶದಲ್ಲೆಲ್ಲ ಈಗ ಆಹಾರ ಪದಾರ್ಥಗಳ ಪ್ರಚಂಡ ಕೊರತೆಯುಂಟಾಗಿದೆ,'ಂಬ ಶೇಠ ಜಲನರವರ ಅಭಿಪ್ರಾಯಕ್ಕೆ ಪುಷ್ಟಿ ದೊರೆಯುತ್ತದೆಂಬುದು ಗೊತ್ತಾಗುವದು. ಮುಖ್ಯವಾಗಿ ಒಕ್ಕಲತನದ ನಾಡಾಗಿರುವ ಹಿಂದುಸ್ತಾನವಿಂದು ಜನತೆಯ ಆಹಾರ ಪದಾರ್ಥಗಳಿಗಾಗಿ ಪರದೇಶದ ಆಯಾತವನ್ನವಲಂಬಿಸಬೇಕಾದುದು ದುರದೃಷ್ಟವಲ್ಲವೆ? ಈ ಪರಿಸ್ಥಿತಿಗಾಗಿ ನಾವು ಆಶ್ಚರ್ಯಪಡಬೇಕೆ? ಶೇಠ ಜಲನರವರು ತಿಳಿಯದಲೆ ಸತ್ಯವನ್ನು ಒಪ್ಪಿಕೊಂಡಿದ್ದಾರೆ. ವಸ್ತುಸ್ಥಿತಿಯನ್ನು ಅಲ್ಲಗಳೆಯಲಾಗದು. ಅದೇ ರೀತಿಯಾಗಿ ನಮ್ಮ ಪ್ರಯತ್ನಗಳಿಂದ. ಈಗ ನಡೆದ ರೀತಿಯಲ್ಲಿ—ಉತ್ಪಾದನೆ ಕಡಮೆಯಾಗಿದೆಂಬುದನ್ನೂ ಯಾರೂ ಅಲ್ಲಗಳೆಯಲಾರರು.

ಜೀವನ ಮಟ್ಟ

ನಿರುದ್ಯೋಗತೆಯಿಂದ ಮತ್ತು ಸಾಕಷ್ಟು ಉದ್ಯೋಗವಿಲ್ಲದಿರುವದರಿಂದ ಬಳಲುತಿರುವ ದೇಶದಲ್ಲಿ ಈಪ ಜಂಡ ಸಮಸ್ಯೆಯನ್ನು ಬಿಡಿಸುವದೃಷ್ಟಿಯಿಂದಲೆ ಉತ್ಪಾದನೆಯ ಕ್ರಮ ಸಾಗತಕ್ಕದ್ದು. ಈ ವರೆಗೆ ನಾವು ಉತ್ಪಾದನೆಯ ಹೆಚ್ಚಳಕ್ಕಾಗಿ ಅನುಸರಿಸುತ್ತ ಬಂದ ಕ್ರಮಗಳಿಂದ ನಿರುದ್ಯೋಗತೆ ನಿಸ್ಸಂದಿಗ್ಧವಾಗಿ ಹೆಚ್ಚಿದೆ. ಪಾಶ್ಚಿಮಾತ್ಯ ರಾಷ್ಟ್ರಗಳಲ್ಲಿ ಕೆಲಸವನ್ನು ಕಡಿಮೆಮಾಡುವ ಉಪಾಯಗಳೆಂದು ಕರೆಯಿಸಿಕೊಳ್ಳಲ್ಪಡುವ ಬೇರೆ ಶಬ್ದಗಳಲ್ಲಿ ಹೇಳುವದಾದರೆ ನಿರುದ್ಯೋಗತೆಯನ್ನು ಹೆಚ್ಚಿಸುವ ಉಪಾಯಗಳೆ ಕೆಲಸಗಾರರನ್ನು ನಿರುದ್ಯೋಗಿಗಳನ್ನಾಗಿಸುವ ಉಪಾಯಗಳೆಂದು ಕರೆಯಬಹುದಾಗಿದೆ. ಪ್ರಚಂಡ ಪ್ರಮಾಣದಲ್ಲಿ ಉತ್ಪಾದನೆಯನ್ನು ಹೆಚ್ಚಿಸುವ ಈ ಮಾರ್ಗಗಳನ್ನನುಸರಿಸುವದರಿಂದ ಗಿರಣಿಗಾರರು ಜನಸಾಮಾನ್ಯರ ಜೀವನ ಮಟ್ಟದ ಮೇಲೆ ದುಷ್ಪರಿಣಾಮವನ್ನುಂಟು ಮಾಡುತಿರುವರು. ಸೃಷ್ಟಿದೇವತೆ ಬೇಕಾದಷ್ಟು ಕೃಪೆಮಾಡಿದರೂ ನಮ್ಮ ದೇಶದಲ್ಲಿ ಬರಗಾಲಗಳು ಶಾಶ್ವತವಾಗಿವೆ. ಇದನ್ನು ನೋಡಿದರೆ ಜನಸಾಮಾನ್ಯರ ಜೀವನ ಮಟ್ಟವನ್ನು ಹೆಚ್ಚಿಸಬೇಕೆಂದು ನಾವು ಬಾಯಿಂದ ಎಷ್ಟೆ ಜಂಭ ಕೊಚ್ಚಿಕೊಂಡರೂ ನಿಜವಾಗಿಯೂ ನಾವು ಆ ಜೀವನಮಟ್ಟವನ್ನು ಕೆಳಗಿಳಿಸುತಿರುವೆವೆಂಬುದು ಇದರಿಂದ ಸಿದ್ಧವಾಗುವದಿಲ್ಲವೆ?

೪೦ ಕೋಟಿ ಜನರ ಔದ್ಯೋಗಿಕ ಪ್ರಗತಿ ಮತ್ತು ಸಂಪತ್ಸಮೃದ್ಧಿ ಪರಸ್ಪರಾವಲಂಬಿಗಳಾಗಿವೆ. ಮತ್ತು ಈ ೪೦ ಕೋಟಿ ಜನರು ದುಃಸ್ಥಿತಿಯಲ್ಲುಳಿಯುವದಾದರೆ ಔದ್ಯೋಗಿಕ ಅಭಿವೃದ್ಧಿಯೇ ಬೇಡ, ಕೆಲವರದೇ ಪ್ರಗತಿಯಾದರೆ ತೀರದು. ಜನಸಾಮಾನ್ಯರೆಲ್ಲರ ಪ್ರಗತಿಯಾಗಬೇಕು, ಎಂಬುದಾಗಿ ಪಂಡಿತ ಜವಾಹರಲಾಲರು ಆಸೆಯನ್ನು ಪ್ರದರ್ಶಿಸಿದ್ದಾರೆ. ದೇಶದಲ್ಲಿಯ ಜನಸಾಮಾನ್ಯರ ದೃಷ್ಟಿಯಿಂದ ನಾವು ವಿಚಾರಿಸಬೇಕಲ್ಲವೆ? ಮೇಲೆ ವಿವರಿಸಿದ ಉತ್ಪಾದನೆಯ ಹೆಚ್ಚಳದ ನಿಜ ಸಂಗತಿಗಳನ್ನು ದಯವಿಟ್ಟು ಗಮನಿಸಬೇಕೆಂದು ಪಂಡಿತಜಿಯವರಿಗೆ ಬಿನ್ನವಿಸಿಕೊಳ್ಳುತ್ತೇವೆ. ಬಳಕೆಯ ವಸ್ತುಗಳ ಉತ್ಪಾದನೆಯನ್ನು ಅವರು ಹೇಳುವಂತೆ ಕೇಂದ್ರೀಕೃತ ಕ್ರಮದಿಂದ ಮಾಡಿಕೊಳ್ಳಬೇಕೇ ಹೇಗೆಂಬುದನ್ನು ಅವರು ನಿರ್ಣಯಿಸಬೇಕೆಂದೂ ಕೇಳಿಕೊಳ್ಳುತ್ತೇವೆ. ಹಿಂದೆ ನಮ್ಮ ದೇಶದಲ್ಲಿ ಈ ದಿಸೆಯಲ್ಲಿ ನಡೆದ ಪ್ರಯತ್ನಗಳಿಂದ ಜನತೆಯ ದುಃಸ್ಥಿತಿ ಎಷ್ಟು ಹೆಚ್ಚಿದೆಂಬುದನ್ನು ಪಂಡಿತಜಿಯವರು ಗಮನಿಸಬೇಕು.

'ಜನಸಾಮಾನ್ಯರ ಹಿತವನ್ನು ಹೆಚ್ಚಿಸುವದಕ್ಕಾಗಿ ಮತ್ತು ದೇಶದ ಪ್ರಗತಿಯನ್ನು ಸಾಧಿಸುವುದಕ್ಕಾಗಿ ಪಂಡಿತಜಿಯವರು ಬಯಸುತಿರುವದಕ್ಕೆಲ್ಲ ನಮ್ಮ ಪೂರ್ಣ ಒಪ್ಪಿಗೆಯಿದೆ. ಕೇವಲ ಕೆಲವರ ಬೊಜ್ಜು ಬೆಳೆಸುವ ದೃಷ್ಟಿಯಿಂದಲ್ಲ. ಆದರೆ ಶಾಸ್ತ್ರೀಯವಾಗಿ ಇದನ್ನೆಲ್ಲ ಸಾಧಿಸಬೇಕೆಂದು ನಾವವರನ್ನು ಕೇಳಿಕೊಳ್ಳುತ್ತೇವೆ. ಈ ವರೆಗೆ ಶಾಸ್ತ್ರವೆಲ್ಲ ವಿನಾಶಕ್ಕಾಗಿಯೆ ಉಪಯೋಗಿಸಲ್ಪಟ್ಟಿರುವದಲ್ಲದೆ ಉತ್ಪಾದನೆಗಾಗಿ ಅಲ್ಲವೆಂಬುದನ್ನು ನಾವು ಕಂಡುಕೊಂಡದ್ದಾಗಿದೆ. ನಡುಗಾಲ ಸರಕಾರದಲ್ಲಿ ಅರ್ಥಸಚಿವರಾಗಿರುವ ಮಾನ್ಯ ಲಿಯಾಕತ ಅಲ್ಲೀಖಾನರು ಸಾಮಾಜಿಕ ಧ್ಯೇಯಗಳ ಸೂಕ್ತಸೂಚನೆಯನ್ನು ಮಾಡಿ ಜನಸಾಮಾನ್ಯರ ಹಿತಕ್ಕಾಗಿ ಅತ್ಯಂತ ಧೈರ್ಯದಿಂದ ಹೇಗೆ ಮುನ್ನಡೆಯಬೇಕೆಂಬುದನ್ನು ತಮ್ಮ ಸಹಕಾರಿಗಳಿಗೆಲ್ಲ ತೋರಿಸಿ ಕೊಟ್ಟಿದ್ದಾರೆ. ಇಡೀ ಸರಕಾರದ ಮೇಲೆ ಈ ಧುರೀಣತ್ವದಿಂದ ಒಳ್ಳೆ ಪರಿಣಾಮವಾಗುವದೆಂದು ಆಶಿಸುತ್ತೇವೆ.

—ಜೆ. ಸಿ. ಕುಮಾರಪ್ಪ

ಹಡಗದ ತೂಕ ತಪ್ಪಿಸದಿರಿ

ಮದ್ರಾಸ ಸರಕಾರದವರು ಕೆಲದಿನಗಳ ಹಿಂದೆ ತಮ್ಮ ಧುರೀಣರಾಗಿದ್ದ ಪ್ರಕಾಶಂರನ್ನು ಬಿಟ್ಟುಗೊಟ್ಟರು. ಅವರು ಹಾಕಿಕೊಂಡಿದ್ದ ಕಾರ್ಯಕ್ರಮಗಳನ್ನೆಲ್ಲ ಒಂದರಹಿಂದೊಂದರಂತೆ ಬಿಟ್ಟುಗೊಡಹತ್ತಿರುವರೆಂಬ ಸುದ್ದಿ ಇದೀಗ ಬರುತಲಿದೆ. ಜನತೆಯ ಸಂಪೂರ್ಣ ಒಪ್ಪಿಗೆ ಮತ್ತು ಸಹಕಾರವಿಲ್ಲೆಂಬ ನೆವ ಮುಂದೆ ಮಾಡಿ ಆಹಾರ ಪದಾರ್ಥಗಳನ್ನು ಸಂಗ್ರಹಿಸಿ ಹಂಚುವ ಯೋಜನೆಯನ್ನು ಹಾರಿಸಿಬಿಡಲು ಒಕ್ಕಲತನ ಮಂತ್ರಿಗಳೀಗ ಅಣಿಯಾಗಿರುವರೆಂದು ಹೇಳಲು ವಿಷಾದಿಸುತ್ತೇವೆ. ರೈತನು ಹೊಲದೊಡೆಯನು, ಆದರೆ ಜಮೀನದಾರನು ಹೊಲದೊಡೆಯನಲ್ಲ ಎಂದು ಸಾರುವ ... ಮತ್ತು ಕಂದಾಯ ಮಸೂದೆಯ ಚರ್ಚೆಯನ್ನು ಮುಂದೆ ಸಾಗಿಸಬಾರದೆಂದು ನಿರ್ಧರಿಸಲಾಗಿದೆ. ಇದಲ್ಲದೆ ಒಂದಿಲ್ಲೊಂದು ನೆವ ಮುಂದೆ ಮಾಡಿ ದಲ್ಲಾಳಿಗಳ ಮಧ್ಯಸ್ಥಿಯಿಲ್ಲದೆ ಆಹಾರ ಪದಾರ್ಥಗಳ ಮತ್ತು ಹಳ್ಳಿಗರ ಅವಶ್ಯಕ ಪದಾರ್ಥಗಳ ವ್ಯವಹಾರ ನಡೆಸಲು ಬೆಳೆವವರ ಮತ್ತು ಬಳಸುವವರ ಸಹಕಾರ ಸಂಘಗಳ ಸ್ಥಾಪನೆಯ ಕಾರ್ಯಕ್ರಮವನ್ನೂ ...

—ಪ್ಯಾರೇ ಲಾಲ

ಬಿಹಾರದ ಯಾತ್ರೆ

೧೪—೪—೪೭

ಬಂಕೀಪುರ ಮೈದಾನದಲ್ಲಿ ಪ್ರಾರ್ಥನೋತ್ತರ ಭಾಷಣ ಮಾಡುತ್ತ ಗಾಂಧೀಜಿ ನೌಖಾಲಿಯಿಂದ ಚಿಂತಾಜನಕ ಸುದ್ದಿಗಳು ಕೇಳಬರುತ್ತಿವೆಯೆಂದು ಹೇಳಿದರು. ಸತೀಶ ಬಾಬುಗಳು ಹರನ ಬಾಬುಗಳೂ ಅಂಕಿಸಂಖ್ಯೆಗಳೊಡನೆ, ಶೀಘ್ರವಾಗಿ ಕೆಡುತ್ತಿರುವ ಪರಿಸ್ಥಿತಿಯನ್ನು ತಮಗೆ ತಿಳಿಸಿದ್ದಾರೆ. ತಾವು ಕೇಳಿದ್ದು ಸತ್ಯವೆಂದು ಸಿದ್ಧವಾದರೆ ಇದಕ್ಕಾಗಿ ಉಪವಾಸ ಮಾಡಬೇಕಾದೀತೆಂದು ಗಾಂಧೀಜಿ ಎಚ್ಚರವಿತ್ತರು. ನೌಖಾಲಿಯಲ್ಲಿ ಕೈಕೊಂಡ ಕೆಲಸದ ಮಧ್ಯದಲ್ಲಿಯೇ ತಾವು ಬಿಹಾರಕ್ಕೆ ಬಂದಿರುವದರಿಂದ ಅಲ್ಲಿ ನಡೆದ ದುಷ್ಕೃತ್ಯಗಳ ವಿರುದ್ಧ ಉಪವಾಸ ಮಾಡುವ ಹಕ್ಕು ತಮಗುಂಟಾಗಿದೆ. ಈ ಉಪವಾಸ ನಿಶ್ಚಿತವೆಂದಲ್ಲ ಆದರೂ ಅದರ ಸೂಚನೆಯನ್ನು ಮುಂದಾಗಿ ಕೊಡುವದು ಕರ್ತವ್ಯವೆಂದು ತಮಗನಿಸಿದೆಯೆಂದು ಅವರು ತಿಳಿಸಿದರು.

ದಿಲ್ಲಿಯಲ್ಲಿ ವಾಯಿಸರಾಯರೊಡನೆ ತಾವು ನಡೆಸಿದ ಮಾತುಕತೆಗಳನ್ನು ಗಾಂಧೀಜಿ ಪ್ರಸ್ತಾಪಿಸಿದರು. ಬಹಿರಂಗ ಮತ್ತು ಅಂತರಂಗಮಾತುಕತೆಗಳೆರಡರಲ್ಲೂ ವಾಯಿಸರಾಯರು ತಾವು ಹಿಂದುಸ್ತಾನಕ್ಕೆ ಕೊನೆಯ ವಾಯಿಸರಾಯರೆಂದೂ ಅದು ೧೯೪೮ ಜೂನ ೩೦ ರವರೆಗೆ ಮಾತ್ರವೆಂದೂ ಸಾರಿದ್ದಾರೆ.

ವಾಯಿಸರಾಯರು ಪ್ರಾಮಾಣಿಕ ಹೃದಯದಿಂದಲೇ ಹೀಗೆ ಹೇಳಿದ್ದಾರೆಂದು ತಮಗನಿಸುತ್ತಿದೆಯೆಂದರು ಗಾಂಧೀಜಿ. ಅಧಿಕಾರ ವರ್ಗಾಯಿಸುವ ಸನ್ನಾಹವನ್ನು ಬ್ರಿಟಿಶರು ಈಗಾಗಲೆ ನಡೆಸಿದ್ದಾರೆ. ಬ್ರಿಟನ್ನು ಒಂದು ಶತಮಾನಕ್ಕಿಂತ ಹೆಚ್ಚು ದಿನ ಹಿಂದುಸ್ತಾನವನ್ನಾಳಿ ನಮ್ಮನಮ್ಮೊಳಗೆ ಹೋರಾಟವನ್ನು ಹುಟ್ಟಿಸಿದೆ ಹೊರತು ಮತ್ತೇನೂ ಸಾಧಿಸಿಲ್ಲವೆಂಬ ಅಪವಾದದಿಂದ ಅದು ಮುಕ್ತವಾಗಬೇಕೆಂದು ಕಾಯಿದೆ ಅಧಿಕಾರ ವರ್ಗೀಕರಣ ಶಾಂತರೀತಿಯಿಂದಾಗಬೇಕೆಂದು ವಾಯಿಸರಾಯರು ಮನಗಂಡಿರುವರೆಂದು ಗಾಂಧೀಜಿಗನಿಸಿತು. ಸ್ವಾತಂತ್ರ್ಯ ನಮ್ಮ ಕೈಗೆ ನಿಲುಕುವಂತಾಗಿರುವಾಗ ನಾವು ನಮ್ಮೊಳಗೆ ಹೋರಾಡುತ್ತಿರುವದು ಶೋಚನೀಯ. ಕಾಂಗ್ರೆಸಿನ ಎಲ್ಲ ಪ್ರಮುಖ ಮುಂದಾಳುಗಳೂ—ಅವರು ನಡುಗಾಲ ಸರಕಾರದಲ್ಲಿಯೇ ಇರಲಿ ಹೊರಗೇ ಇರಲಿ—ಹಳೆ ಸಂಪ್ರದಾಯದ ದೋಷಗಳನ್ನು ಸಾಧ್ಯವಾದಷ್ಟು ನಿವಾರಿಸಿ ಆ ಸ್ವಾತಂತ್ರ್ಯವನ್ನು ಸೆಳೆದುಕೊಂಡು, ದೇಶದಲ್ಲಿ ಶಾಂತಿಯನ್ನು ಸ್ಥಾಪಿಸಲು ಶಕ್ತಿಮೀರಿ ಹೆಣಗುತ್ತಿದ್ದಾರೆ.

೧೫—೪—೪೭

ಪ್ರಾರ್ಥನೆ ಮುಗಿದ ಮೇಲೆ ದಿಲ್ಲಿಯಲ್ಲಿ ತಾವಿದ್ದಾಗ ತಮಗೆ ಬಿಹಾರದಿಂದ ಬರುತ್ತಿದ್ದ ಪತ್ರಗಳ ಮಾತೆತ್ತಿದರು. ಅವುಗಳಲ್ಲಿ ಕೆಲವು ವಿಚಾರಶೂನ್ಯ ಶಬ್ದಗಳಿಂದಲೂ ಕೆಲವು ಪ್ರಶಂಸಾ ವಾಕ್ಯಗಳಿಂದಲೂ ಕೂಡಿದ್ದರೆ ಇನ್ನೂ ಕೆಲವು ಗಾಂಧೀಜಿ ತಾವು ಹಿಡಿದ ಕೆಲಸ ಪೂರೈಸಲು ಬಿಹಾರಕ್ಕೆ ಎಂದಾದರೂ ಮರಳುವರೇ ಎಂಬ ಸಂಶಯವನ್ನು ವ್ಯಕ್ತಗೊಳಿಸಿದ್ದವು.

ಕೊನೆಯಲ್ಲಿ ಜಾತಿಯವುಗಳಿಗೆ ಉತ್ತರಕೊಡುವ ಆವಶ್ಯಕತೆಯೇ ಇಲ್ಲ. ಇನ್ನು ಪ್ರಶಂಸೆಯೋ, ತಮ್ಮಂತೆ ಕರ್ತವ್ಯಬುದ್ಧಿಯಿಂದ ಕೆಲಸಮಾಡುವವರಿಗೆ ಅದು ಕೇವಲ ಅನಾವಶ್ಯಕ. ಒಂದು ಪತ್ರಮಾತ್ರ ಶುದ್ಧ ಅಜ್ಞಾನಪ್ರೇರಿತವಾಗಿದ್ದುದರಿಂದ ಅದನ್ನು ಗಾಂಧೀಜಿ ಎತ್ತಿಕೊಂಡರು. ನೌಖಾಲಿಯಲ್ಲಿನ ಕೆಲಸವನ್ನು ಬಿಟ್ಟು ಡಾ. ಸಯ್ಯದ ಮಹಮ್ಮದರ ಪ್ರೇರಣೆಯಿಂದ ಬಿಹಾರಕ್ಕೆ ಬಂದು ಅವರ ಆತಿಥ್ಯವನ್ನು ಸ್ವೀಕರಿಸುವ ದಿಟ್ಟತನ ತೋರಿದ್ದು ಗಾಂಧೀಜಿಯ ಅವಿವೇಕವನ್ನು ತೋರುವದಿಲ್ಲವೇ ಎಂದು ಸಂಶಯವನ್ನು ಆ ಪತ್ರ ವ್ಯಕ್ತಗೊಳಿಸಿತು.

ಡಾ. ಮಹಮ್ಮದರು ತಮ್ಮ ಗೆಳೆಯರೆಂಬ ಮಾತನ್ನು ಈ ಟೀಕಾಕಾರನು ಮರೆತಿದ್ದಾನೆಂದು ಗಾಂಧೀಜಿ ಹೇಳಿದರು. ತಮಗೆ ಪ್ರಾತಃಸ್ಮರಣೀಯ ದಿವಂಗತ ಬ್ರಜಕಿಶೋರರ ಅಥವಾ ಡಾ. ರಾಜೇಂದ್ರ ಪ್ರಸಾದರ ಪರಿಚಯವಾಗುವ ಮೊದಲೇ ಡಾ. ಮಹಮ್ಮದ ಮಾವನ ಗುರುತಾಗಿತ್ತೆಂದರವರು. ತಮ್ಮ ಅಭಿಪ್ರಾಯದಲ್ಲಿ ಡಾ. ಸಯ್ಯದ ಮಹಮ್ಮದರು ತಮ್ಮನ್ನು ಬಿಹಾರಕ್ಕೆ ಬರಮಾಡಿಕೊಂಡು ಹಿಂದೂ ಮುಸ್ಲಿಮರಿಬ್ಬರಿಗೂ ಉಪಕಾರವನ್ನೆ ಮಾಡಿದರು. ಹಿಂದುಸ್ತಾನದಲ್ಲೆಲ್ಲ ಸಂಭವತಃ ಉನ್ಮಾದ ಹಬ್ಬಿರುವಾಗ ಬಿಹಾರವೊಂದಾದರೂ ವಿವೇಕವುಳಿಸಿಕೊಂಡರೆ ಅದು ಜಗತ್ತಿನ ದೃಷ್ಟಿಯಲ್ಲಿ ಹಿಂದುಸ್ತಾನದ ಮಾನವನ್ನು ಕಾಯುವದು. ಭ್ರಾಂತಿಯ ಮಧ್ಯ ಶಾಂತಿಯ ಅಪೂರ್ವ ದೃಷ್ಟಾಂತವಾಗಿ ಉಳಿಯುವದು, ತಮ್ಮ ಸೇವಾಬಲದಿಂದಲ್ಲದೆ ಇಷ್ಟನ್ನು ಬಿಹಾರದಿಂದ ಅಪೇಕ್ಷಿಸಲು ತಮಗೆ ಅಧಿಕಾರವುಂಟೆಂದು ಗಾಂಧೀಜಿ ಹೇಳಿದರು. ಮೇಲಾಗಿ ಬಿಹಾರಿಗಳು ಧಿರೋತ್ತಂಗಳಾಗಿರಲಿ, ಪ್ರಪಂಚದ ಸಮಸ್ತ ಕಲ್ಯಾಣಗಳ ಮೂರ್ತಸ್ವರೂಪನಾದ ರಾಮನ ಭಕ್ತರಲ್ಲವೆ? ಕೆಲವೊಮ್ಮೆ ಅಪತ್ತೇ ಜಗತ್ತನ್ನು ಆಳುತ್ತಿರುವಂತೆ ಕಂಡರೂ ಒಬ್ಬನೇ ಒಬ್ಬನಲ್ಲಾದರೂ ಸದ್ಗುಣ ನೆಲಸಿರುವಷ್ಟೇ ಕಾಲ ಜಗತ್ತು ಉಳಿಯಬಲ್ಲದು. ಅಸತ್ತೆಗೆ ಸತ್ತೆಯ ಪ್ರಲೋಭನಗಳ ಮಧ್ಯದಲ್ಲಿ ಬಿಹಾರ ಸಾತ್ವಿಕವಾಗಿ ಉಳಿದರೆ ಅದಕ್ಕೂ ಒಳಿತು. ಇಡಿಹಿಂದುಸ್ತಾನಕ್ಕೆ ಒಳಿತು.

ನೌಖಾಲಿಯಿಂದ ತಮ್ಮನ್ನು (ಗಾಂಧೀಜಿಯನ್ನು) ಪರಾವೃತ್ತರನ್ನಾಗಿ ಮಾಡಿದ್ದರಲ್ಲಿ ದುರ್ಬುದ್ಧಿಜನ್ಯವಾದ ಉದ್ದೇಶವಿತ್ತೆಂದು, ಅರ್ಥಾತ್ ನೌಖಾಲಿ ಮುಸ್ಲಿಮರ ಮೇಲೆ ಆದ ತಮ್ಮ ವರ್ಚಸ್ಸನ್ನು ಸಡಿಲಿಸುವದೇ ಅವರ ಗುರಿಯಾಗಿತ್ತೆಂದು ಕುತರ್ಕವನ್ನು ಗಾಂಧೀಜಿ ನಂಬಲಿಲ್ಲ. ಈ ವಾದ ವಿಚಾರದ ಪರೀಕ್ಷೆಯನ್ನು ತಾಳಲಾರದೆಂದು ಅವರು ಹೇಳಿದರು. ಏಕೆಂದರೆ, ಬಿಹಾರದಲ್ಲಿ ತಾವು ಪೂರ್ಣ ಕೃತಕೃತ್ಯರಾದರೆ ನೌಖಾಲಿ ಮುಸ್ಲಿಮರು ಕಟಿಗೆ ನಾಚಿಕೆಯಿಂದಾದರೂ—ಉನ್ಮತ್ತರಾಗುವದು ಅಸಾಧ್ಯವೇ ಸರಿ.

ಕೊನೆಯಲ್ಲಿ, ಶೆಕೆ ಬಹಳವಾಗಿರುವದರಿಂದ ವಿಸ್ತಾರವಾಗಿ ಮೋಟಾರ ಪ್ರಯಾಣ ಮಾಡುವದೂ ಇಡೀದಿನ ಕೆಲಸಮಾಡುವದೂ ತಮಗೆ ಅಸಾಧ್ಯವಾಗುವದೆಂದು ಗಾಂಧೀಜಿ ಹೇಳಿದರು. ತಕ್ಕಮಟ್ಟಿಗಾದರೂ ಕೆಲಸ ಮಾಡಬೇಕಾದರೆ ನಡುವಡುವೆ ವಿಶ್ರಾಂತಿ ತೆಗೆದುಕೊಳ್ಳದೆ ವಿಧಿಯಿಲ್ಲದಾಗಿದೆ. ಪಾಟಣಾದಲ್ಲಿ ತಾವು ಮಾಡಬೇಕಾದುದೋ ಬಹಳ ಇದೆ.

ಪ್ರತಿದಿನವೂ ಸಂಜೆ ಸಾರ್ವಜನಿಕರಿಗೆ ರುಚಿಸುವ ವಿಷಯಗಳನ್ನು ಚರ್ಚಿಸುವದಾಗಿ ಗಾಂಧೀಜಿ ಸಂದರ್ಭವಶಾತ್ ಹೇಳಿದರು.

೧೬—೪—೪೭

ತಾವು ದಿಲ್ಲಿಯಲ್ಲಿದ್ದಾಗ ವಾಯಿಸರಾಯರ ಸೂಚನೆಯಂತೆ ಸಹಿ ಹಾಕಿದ ಹೇಳಿಕೆಯನ್ನು ಕುರಿತು ಗಾಂಧೀಜಿ ಇಂದು ಮಾತಾಡಿದರು. ಇದಕ್ಕೆ ಪಂಡಿತನೆಹರೂ ಮತ್ತು ಕಾರ್ಯಸಮಿತಿಯ ಇತರ ಸದಸ್ಯರ ಸಮ್ಮತಿಯಿತ್ತು. ಕಾಯಿದೆ ಆಝಂ ಜಿನ್ನಾರೂ ಅದಕ್ಕೆ ಅಂಕಿತವಿಕ್ಕಿದ್ದರು. ಆ ಹೇಳಿಕೆಯಲ್ಲಿ ಹೇಳಿರುದೇನಂದರೆ—

ಈಚೆಗೆ ಹಿಂದುಸ್ತಾನದ ಕೀರ್ತಿಗೆ ಅತ್ಯಂತ ಕಲಂಕವನ್ನು ಹಚ್ಚಿದ ಮತ್ತ ನಿರಪರಾಧಿ ಜನರಿಗೆ ಬಹಳ ಸಂಕಟವನ್ನು ತಂದಿರುವ ಹಿಂಸೆ ಅತ್ಯಾಚಾರಗಳಿಂದ ಅದನ್ನು ಮಾಡಿರುವರು ಯಾರೇ ಇರಲಿ ಅದಕ್ಕೆ ತುತ್ತಾದವರು ಯಾರೇ ಇರಲಿ, ನಾವು ಅತ್ಯಂತ ವಿಷಣ್ಣರಾಗಿದ್ದೇವೆ.

"ರಾಜಕೀಯ ಉದ್ದೇಶಗಳಿಗಾಗಿ ಬಲಾತ್ಕಾರವನ್ನು ಪ್ರಯೋಗಿಸುವದನ್ನು ನಾವು ಯಾವಾಗಲೂ ಖಂಡಿಸುತ್ತೇವೆ. ಅಲ್ಲದೆ, ಹಿಂದುಸ್ತಾನದ ಎಲ್ಲ ಜಾತಿಗಳೂ—ಅವು ಯಾವ ಕಾರ್ಯದಲ್ಲಿ ಉದ್ಯುಕ್ತವಾಗಿರಲಿ—ಗಲಭೆ ಹಿಂಸಾಚಾರಗಳಿಂದ ದೂರವಾಗಿರಬೇಕೆಂದಿಷ್ಟೇ ಅಲ್ಲ. ಮಾತಿನಲ್ಲಿಯೂ ಬರಹದಲ್ಲಿಯೂ ಹಿಂಸೆಗೆ ಪ್ರಚೋದನೆ ಕೊಡಬಹುದಾದಂಥ ಶಬ್ದಗಳನ್ನು ಉಪಯೋಗಿಸಬಾರದೆಂದೂ ಪ್ರಾರ್ಥಿಸುತ್ತೇವೆ."

ಸ್ವತಃ ತಮ್ಮ ಸಹಿಯ ಬಗ್ಗೆ ಹೇಳುವದಾದರೆ ಅದಕ್ಕೇನೂ ಮಹತ್ವವಿಲ್ಲೆಂದು ಗಾಂಧೀಜಿ ಹೇಳಿದರು. ಏಕೆಂದರೆ ತಮಗೆ ಹಿಂಸೆಯಲ್ಲಿ ಎಂದೂ ವಿಶ್ವಾಸ ಇದ್ದಿಲ್ಲ. ಆದರೆ ಕಾಯಿದೆ ಆಝಂ ಜಿನ್ನಾರು ಅದಕ್ಕೆ ಸಹಿ ಹಾಕಿದ್ದು ಅರ್ಥವತ್ತಾಗಿದೆ. ಈ ಬಿನ್ನಹದ ತತ್ವಕ್ಕೆ ಸಹಿ ಹಾಕಿದವರು ನಿಷ್ಠೆ ತೋರಿಸಿದರೆ, ಹಾಗೆ ತೋರದಿರಲು ಕಾರಣವಿಲ್ಲ—ಎಲ್ಲ ಉಪದ್ರವ? ರಕ್ತಪಾತಗಳು ನಿಂತು ಹೋದಾವು. "ಇನ್ನಾದರೂ ನೀವು ನನಗೆ ಬಿಹಾರವನ್ನು ಬಿಟ್ಟು ಹೋಗಿ ಬೇರೆ ಕೆಲಸದಲ್ಲಿ ತೊಡಗಲು ಅವಕಾಶ ಕೊಡಿರೆಂದು ಭಾವಿಸುತ್ತೇನೆ" ಎಂದರು ಗಾಂಧೀಜಿ.

"ನನ್ನ ಸಹಿಯನ್ನೇ ಏಕೆ ತೆಗೆದುಕೊಳ್ಳಬೇಕಾಗಿತ್ತು. ಕಾರ್ಯ ಸಮಿತಿಯ ಸದಸ್ಯರ ಅಥವಾ ಕಾಂಗ್ರೆಸ್ ಅಧ್ಯಕ್ಷರದನ್ನೇಕಲ್ಲ, ಎಂದು ಕೇಳಬಹುದು," ಗಾಂಧೀಜಿ ಮುಂದುವರಿಸಿದರು.

"ಆ ವಿಷಯವನ್ನು ವಿಚಾರಿಸಲು ತಮಗೆ ಸಾಧ್ಯವಾಗಲಿಲ್ಲ. ನಾನು ಸ್ವತಃ ನನ್ನೊಬ್ಬನ ಪ್ರತಿನಿಧಿ ಹೊರತು ಬೇರಾವನೂ ಅಲ್ಲವೆಂದು ನನಗೆ ಗೊತ್ತು. ಆದರೂ ಈ ಸಹಿಗಳಿಂದ ನಮ್ಮಿಬ್ಬರ ಮೇಲೆ ಬಹಳ ದೊಡ್ಡ ಹೊಣೆ ಬಿದ್ದಿದೆ. ನಾನು ಯಾವದಾದರೂ ಜಾತಿಯ ಪರವಾಗಿ ಅದಕ್ಕೆ ಸಹಿ ಹಾಕಲಿಲ್ಲ. ಎಲ್ಲ ಜಾತಿಗಳ ಪರವಾಗಿ ಹೊಣೆ ಹೊತ್ತಂತಾಯಿತೆಂದು ಅದರ ಅರ್ಥ. ಎಲ್ಲ ಧರ್ಮಗಳೂ ಸಮಾನವೆಂದು ನನ್ನ ಹೇಳಿಕೆಯೆಂದು ಕಾಯದೇ ಆಝಮರಾದರೂ ಇದೇ ಬಗೆಯಾಗಿ ಹೇಳಬಹುದು. ಏಕೆಂದರೆ ಅದು ಒಂದೇ ಜಾತಿಗೆ ಮಾಡಿದ ಬಿನ್ನಹವಾಗಿರದೆ ಎಲ್ಲವುಗಳನ್ನುದ್ದೇಶಿಸಿದ್ದಾಗಿದೆ. ಒಂದು ಕಾಲದಲ್ಲಿ ಜಿನ್ನಾಸಾಹೇಬರಿಗೆ ಕಾಂಗ್ರೆಸ್ಸಿನಲ್ಲಿ ದೊಡ್ಡ ಸ್ಥಾನವಿದ್ದಿಲ್ಲವೆ?

ಈ ಅಪೂರ್ವ ಹೇಳಿಕೆಯನ್ನು ಸಾಧಿಸಿದುದಕ್ಕಾಗಿ ವಾಯಿಸರಾಯರು ಅಭಿನಂದನಾರ್ಹರೆಂದು ಗಾಂಧೀಜಿ ಹೇಳಿದರು. ಹೊರಗಿನ ಹಸ್ತಕ್ಷೇಪವಿಲ್ಲದೆ ಕಾಂಗ್ರೆಸ್ ಮತ್ತು ಲೀಗಿನ ಪರವಾಗಿ ಅದು ಹೊರಡಿಸಲ್ಪಟ್ಟಿದ್ದರೆ ಎಷ್ಟೋ ಉತ್ತಮವಾಗಿತ್ತು. ನಿಜ. ಇನ್ನಾದರೂ ಈ ಎರಡು ಸಂಸ್ಥೆಗಳು ಸಹಕರಿಸಲೆಂದು ಅವರು ಹಾರೈಸಿದರು.

೧೭—೪—೧೯೪೭

ಇಂದು ಪ್ರಾರ್ಥನೆಯಲ್ಲಿ ಭಾಗಿಗಳಾಗಲು ಬಯಸಿದ ಮುಸ್ಲಿಂ ಗೆಳೆಯರಿಗೋಸ್ಕರ ಪ್ರಾರ್ಥನಾಕಾಲವನ್ನು ೧೫ ನಿಮಿಷ ಮುಂದೂಡಿದ್ದನ್ನು ಗಾಂಧೀಜಿ ಸಭಿಕರ ಗಮನಕ್ಕೆ ತಂದುಕೊಟ್ಟರು. ಹಗಲೂ ಈಗ ಉದ್ದವಾಗಿದೆಯೆಂದರು. ರೂಢಿ ವಿರುದ್ಧವಾಗಿ ಪ್ರಾರ್ಥನೆಯಲ್ಲಿ ಪಠಿಸಲು ಕುರಾಣ ಮತ್ತು ಇತರ ಧರ್ಮಗ್ರಂಥಗಳಿಂದ ವಾಕ್ಯಗಳನ್ನಾಯ್ದುಕೊಂಡದ್ದಕ್ಕೆ ತಿರಸ್ಕಾರಪೂರ್ವಕವಾಗಿ ನಗುವವರನ್ನು ಅವರು ಎಚ್ಚರಿಸಿದರು. ತಮ್ಮ ಧರ್ಮವನ್ನು ಹೇಗೋ ಹಾಗೆಯೆ ಅನ್ಯರದನ್ನೂ ಆದರಿಸಲು ನಾವು ಅಭ್ಯಾಸ ಮಾಡಬೇಕು. ಹಾಗೆ ಮಾಡದಿರುವದರಿಂದ ಸ್ವಧರ್ಮವನ್ನೇ ತುಚ್ಛೀಕರಿಸಿದಂತಾದೀತು; ಮಾತ್ರವಲ್ಲ ಅದರ ಮೇಲೆ ಹೊರಗಿಂದ ಆಕ್ರಮಣವಾಗಲು ಅವಕಾಶ ಕೊಟ್ಟಂತಾದೀತು.

ಪ್ರಾರ್ಥನಾ ನಂತರ ಅವರು ತಮ್ಮನ್ನು ಕಾಣಬಂದ ಮುಸ್ಲಿಂ ಗೆಳೆಯರ ದೂರುಗಳನ್ನು ಉಲ್ಲೇಖಿಸಿದರು. ಬಿಹಾರ ಶರೀಫ ಮತ್ತು ಮೋಂಘೀರ ಭಾಗಗಳಲ್ಲಿ ಸಂತ್ರಸ್ತರು ಮರಳಲು ಅನುಕೂಲ ವಿದ್ಯಮಾನಗಳಿಲ್ಲವೆಂದು ಅವರು ದೂರಿದರು. ಈ ಸುದ್ದಿ ನಿಜವಾಗಿದ್ದರೆ ತಮಗೆ ಬಹಳ ವಿಷಾದವಾಗುತ್ತದೆಂದು ಗಾಂಧೀಜಿ ನುಡಿದರು. ಸೆಕೆ ವಿಪರೀತವಾಗಿದೆ. ಆದರಿಂದ ವಿಶೇಷ ಶ್ರಮಾವಹವಾದ ಸಂಚಾರವನ್ನು ಕೈಕೊಳ್ಳಲು ತಮಗೆ ಧೈರ್ಯ ಸಾಲದಾಗಿದೆ. ಆದರೆ ಈ ಭಾಗಗಳ ಹಿಂದುಗಳು ಪಶ್ಚಾತ್ತಾಪಪಟ್ಟು, ಮುಸ್ಲಿಂ ನೆರೆಹೊರೆಯವರೊಡನೆ, ಅವರೆಷ್ಟೇ ಕಡಿಮೆ ಜನರಿರಲಿ, ಸ್ನೇಹವನ್ನು ಪುನರುಜ್ಜೀವಿಸಿದಲ್ಲಿ ತಮಗೆ ಈ ಸಂಚಾರ ಪ್ರಾರಂಭಿಸದೇ ಉಪಾಯವೇ ಇಲ್ಲ. ಹಿಂದುಗಳ ನೆರೆಹೊರೆಯಲ್ಲಿರಲು ಹೆದರುವ ಮುಸ್ಲಿಮರಿಗೆ ಆಯುಧಗಳನ್ನೊದಗಿಸಬೇಕೆಂದು ಕೆಲವರು ವಾದಿಸುತ್ತಾರೆ. ಈ ಸೂಚನೆ ಕೊಟ್ಟವರಿಗೆ ತಮ್ಮ ಪರಿಚಯವಿಲ್ಲೆಂದು ಕಾಣುತ್ತದೆ, ಎಂದು ಗಾಂಧೀಜಿ ಹೇಳಿದರು. ಆತ್ಮರಕ್ಷಣೆಗಾಗಿ ಮುಸ್ಲಿಮರಿಗಾಗಲಿ ಹಿಂದುಗಳಿಗಾಗಲಿ ಆಯುಧಧಾರಣಕ್ಕೆ ಅನುಮತಿ ಕೊಡುವವರು ತಾವಲ್ಲ. ಅದು ಅನಾಗರಿಕತೆಯ ಲಕ್ಷಣ. ಈಗಾಗಲೆ ಆಯುಧವುಳ್ಳವರಿಂದ ಅವುಗಳನ್ನು ಕಸಿದುಕೊಳ್ಳಬೇಕೆಂಬವರು ತಾವು. ಪರಮಾತ್ಮನಲ್ಲಿ ಅಚಲ ಶ್ರದ್ಧೆ ಮತ್ತು ಅದರಿಂದ ಹುಟ್ಟಿದ ಸಬಲ ಹೃದಯ ಇವೇ ನಮ್ಮ ಆಯುಧವಾಗಲಿ.

ತಮ್ಮನ್ನು ನೋಡಲು ಕೆಲ ಜಮೀನದಾರರೂ ಬಂದಿದ್ದರು. ಅವರು ರೈತರಲ್ಲಿಯೂ ಕೂಲಿಕಾರರಲ್ಲಿಯೂ ಬೆಳೆಯುತ್ತಿರುವ ಶಾಸನಬಾಹಿರತೆಯನ್ನು ಕುರಿತು ದೂರಿಕೊಂಡರು. ಇದಕ್ಕಾಗಿ ತಮಗೆ ದುಃಖವಾಗಿದೆಯೆಂದರು ಗಾಂಧೀಜಿ. ಬಿಹಾರದ ಕೀರ್ತಿಗೆ ಇದೊಂದು ಕುಂದು. ಇಂಥ ಶಾಸನ ಬಹಿಃತೆ ಪಾಪಕರ ಅದು ಜಮೀನದಾರರನ್ನು ಮಾತ್ರವಲ್ಲ, ರೈತ ಕೂಲಿಕಾರರನ್ನೇ ಹಾಳು ಮಾಡದಿರದು. ಜಮೀನದಾರರು ಹೇಳಿಕೇಳಿ ಕೈದೆರಳಲ್ಲೆಣಿಸುವಷ್ಟಿದ್ದಾರೆ ಅಹಿಂಸೆಯ ಗುಣಗಳನ್ನು ಪ್ರದರ್ಶಿಸುವ ಕಳೆದ ೩೦ ವರ್ಷಗಳ ಪಾಠ ಬಿಹಾರದ ಜನರ ಮೇಲೆ ಗೋರ್ಕಲ್ಲ ಮಳೆಯಾಗದಿರಲೆಂದು ಅವರು ಹಾರೈಸಿದರು. ವಾದಕ್ಕಾಗಿ ಜಮೀನದಾರರು ಎಷ್ಟೋ ಅನ್ಯಾಯ ಅಪರಾಧಗಳನ್ನು ಮಾಡಿದ್ದಾರೆಂದೇ ಒಪ್ಪಿಕೊಳ್ಳೋಣ. ಆದರೆ ಭೂಮಿತಾಯಿಯ ಉಪ್ಪಿನಂತಿರುವ ರೈತ ಕೂಲಿಕಾರರು ದಾರಿ ತಪ್ಪಿ ನಡೆಯಲು ಅದು ನೆವವಾಗಬೇಕೆ? ಉಪ್ಪೇ ತನ್ನ ರುಚಿ ಕಳೆದುಕೊಂಡರೆ ರುಚಿಗಾಗಿ ಯಾವುದನ್ನು ಬಳಸಬೇಕು?

೧೮—೪—೪೭

ಮುಂಚಿನ ದಿನ ಸಂಜೆ ಪ್ರಾರ್ಥನೋತ್ತರ ಭಾಷಣದಲ್ಲಿ ಕೂಲಿಕಾರ ರೈತರ ವಿಷಯವಾಗಿ ತಾವಾಡಿದ ಮಾತುಗಳಿಂದ ಬಿಹಾರದ ಕೂಲಿಕಾರರಿಗೂ ರೈತರಿಗೂ ಅನ್ಯಾಯವಾಗಿದೆಂದ್ಕೆ ತಮ್ಮೆಡೆಗೆ ದೂರು ಬಂದಿದೆಯೆಂದು ಇಂದಿನ ಭಾಷಣದಲ್ಲಿ ಗಾಂಧೀಜಿ ಹೇಳಿದರು. ಹಳೆಯ ಅನ್ಯಾಯ ಧೋರಣೆಯನ್ನೇ ಇನ್ನೂ ನಡೆಸಿಕೊಂಡು ಹೋಗುವವರು ರೈತರಲ್ಲ. ಜಮೀನದಾರರೋ ಎಂದೂ ಹೇಳಲಾಗಿದೆ. ಸತ್ಯವೇನೇ ಇರಲಿ, ಹಿಂದಿನ ದಿನದ ತಮ್ಮ ಟೀಕೆಗಳು ಜಮೀನದಾರರು ಹೇಳಿದ್ದು ಸತ್ಯವೆಂದು ಗ್ರಹಿಸಿ ಮಾಡಲ್ಪಟ್ಟವುಗಳು. ಕಿಸಾನರಿಗೆ ಅಹಿಂಸಾತ್ಮಕ ಸತ್ಯಾಗ್ರಹದ ಅಮೂಲ್ಯ ಅನುಭವವಿದೆ. ಅವರು ತೋರಿಸಿದ ಅದ್ಭುತ ಸಂಯಮದ ಪರಿಣಾಮವಾಗಿ ಶತಮಾನದಷ್ಟು ಹಳೆಯ ನೀಲಿ ತೋಟದ ಅನ್ಯಾಯವೂ ತೋಟದೊಡೆಯರ ರಾಜ್ಯವೂ ಕೊನೆಗೊಂಡಿತ್ತು. ಆ ಅನುಭವದ ಅಮೂಲ್ಯ ಪಾಠವನ್ನು ಅವರು ಮರೆಯಬಾರದೆಂದು ಗಾಂಧೀಜಿ ಹಾರೈಸಿದರು.

ಇನ್ನು ಜಮೀನದಾರರ ವಿರುದ್ಧ ಹೇಳಲಾದುದು ಸತ್ಯವಿದ್ದ ಪಕ್ಷದಲ್ಲಿ ಅವರ ಆಯುಷ್ಯ ಪೂರ್ತಿಯಾದಂತೆಯೆ ಸರಿಯೆಂದೂ ಗಾಂಧೀಜಿ ಎಚ್ಚರಿಕೆ ಕೊಟ್ಟರು. ಆಳುವವರಾಗಿ ಒಡೆಯರಾಗಿ ಅವರಿನ್ನು ಬಾಳುವದು ಅಸಾಧ್ಯ. ಬಡ ಕಿಸಾನರ ಧರ್ಮದರ್ಶಿಗಳಾಗಿ ವರ್ತಿಸಿದರೆ ಮಾತ್ರವೇ ಅವರಿಗೆ ಉಜ್ವಲ ಭವಿತವ್ಯವುಂಟು ಬರಿ ಹೆಸರಿನ ಪೂರ್ತಿ ಧರ್ಮದರ್ಶಿಗಳಲ್ಲ. ನಿಜವಾದ ವಿಶ್ವಸ್ತರು ಅವರಾಗಬೇಕೆಂದು ತಮ್ಮ ಅರ್ಥವೆಂದು ಅವರು ವಿವರಿಸಿದರು. ಅಂಥ ವಿಶ್ವಸ್ತರು ತಮ್ಮ ಶ್ರಮ ಮತ್ತು ಜಾಗರೂಕತೆಗಾಗಿ ತಮಗೆ ನ್ಯಾಯವಾಗಿ ಸಿಗಬೇಕಾದುದಕಿಂತ ಒಂದು ಕವಡೆಯನ್ನು ಕೂಡ ಹೆಚ್ಚು ತೆಗೆದುಕೊಳ್ಳಲಾರರು. ಆಗ ಯಾವ ಕಾಯಿದೆಯೂ ತಮ್ಮನ್ನು ಮುಟ್ಟಲಾರದೆಂದು ಅವರಿಗೆ ಅರಿವಾಗುವದು. ಒಕ್ಕಲಿಗರು ಅವರ ಮಿತ್ರರಾಗುವರು.

ತಪ್ಪು ದಂಡದ ತೆರಿಗೆಯನ್ನು ವಸೂಲಮಾಡಲಾಗುತ್ತಿದೆಯೆಂಬ ಇನ್ನೊಂದು ದೂರಿನ ಮಾತನ್ನು ಗಾಂಧೀಜಿ ಮೇಲೆ ಎತ್ತಿದರು. ಜನರು ತಮ್ಮಲ್ಲಿದ್ದ ಅಪರಾಧಿಗಳನ್ನು ಹಿಡಿದುಕೊಡದಿದ್ದರೆ ಸರಕಾರಕ್ಕೆ ಬೇರೆ ಉಪಾಯವೇ ಇಲ್ಲವೆಂದು ಅಭಿಪ್ರಾಯಪಟ್ಟರು. ಸಾವಿರಾರು ಜನರು ಹೇಯ ಲಜ್ಜಾವಹ ದುಷ್ಕರ್ಮದಲ್ಲಿ ಪ್ರಸಕ್ತರಾದಾಗ ಸರಕಾರ ಸಾಮೂಹಿಕ ಬಂಧನಗಳನ್ನು ಮಾಡಲಾದೀತೇ? ಪುಂಡಗಂಡಾಯದಿಂದ ತಪ್ಪಿಸಿಕೊಳ್ಳಲು ಜನರಿಗೊಂದೇ ಹಾದಿಯುಂಟು—ಅವರು ತಮ್ಮ ಕೃತ್ಯಗಳಿಗಾಗಿ ಪಶ್ಚಾತ್ತಾಪಪಟ್ಟು ಸ್ವಯಂಪ್ರೇರಣೆಯಿಂದ ಶ್ರಮ ಹಾಗು ಹಾಗು ಕಾಣಿಕೆಯ ಮೂಲಕ ಆದ ಅನ್ಯಾಯದ ಪರಿಮಾರ್ಜನೆ ಮಾಡಬೇಕು. ನೊಂದ ಮುಸ್ಲಿಮರ ಬಳಿಗೆ ಹೋಗಿ ಅವರನ್ನು ಮರಳಿ ಮನೆಗೆ ಬರುವಂತೆ ಮನವೊಲಿಸಬೇಕು ಅವರನ್ನು ಮಮತೆಯಿಂದ ನಡೆಸಿಕೊಳ್ಳುವದಾಗಿ ಆಶ್ವಾಸನ ಕೊಡಬೇಕು.

೧೯—೪—೪೭

ನಿತ್ಯದಂತೆ ಪ್ರಾರ್ಥನೆ ಮುಗಿದನಂತರ ಗಾಂಧೀಜಿ ತಮಗೆ ಬಂದಿದ್ದ ಎರಡು ಪತ್ರಗಳನ್ನು ಕುರಿತು ಪ್ರಸ್ತಾಪಿಸಿದರು. ಅದರಲ್ಲೊಂದು ಪಂಜಾಬದಿಂದ ತಮಗೆ ಪರಿಚಿತಳಾದ ಮಹಿಳೆಯೊಬ್ಬಳಿಂದ ಬಂದಿತ್ತು. ತನ್ನ ವಿಳಾಸವನ್ನು ಮುಚ್ಚಿಟ್ಟು ಬಹುಶಃ ಸುಳ್ಳು ಹೆಸರನ್ನಿಟ್ಟುಕೊಂಡ ಬಿಹಾರಿಯೊಬ್ಬನು ಬರೆದ ಇನ್ನೊಂದು ಪತ್ರ ಬಹಳ ಚನ್ನಾಗಿ ಬರೆಯಲ್ಪಟ್ಟಿತ್ತು. ಇವೆರಡೂ ಸೌಹಾರ್ದಪೂರ್ಣವಾಗಿದ್ದರೂ ನಿಟ್ಟಿನಿಂದ ಬರೆದವು. ಅವರು ಅಹಿಂಸೆಯಲ್ಲಿ ವಿಶ್ವಾಸವನ್ನು ಕಳೆದುಕೊಂಡಿದ್ದರು. ಮತ್ತು ಸೇನಾಬಲದಿಂದ ಗಳಿಸಿಕೊಂಡ ಸತ್ಕೀರ್ತಿಯನ್ನು ಉಳಿಸುವದಕ್ಕಾಗಿ ಗಾಂಧೀಜಿ ನಿವೃತ್ತರಾಗುವದೇ ಒಳಿತೆಂದು ಸೂಚಿಸಿದ್ದರು. ಈ ಗೆಳೆಯರಿಗೆ ಅಹಿಂಸೆಯ ಗುಣ ಗೊತ್ತಿಲ್ಲವೆಂದು ಗಾಂಧೀಜಿ ಟೀಕಿಸಿದರು. ಕೆಲವೇ ಜನರು ಅಂದರೆ ಸೈನಿಕರು ಮತ್ತು ಪೋಲೀಸರು ಜನರ ಮಾನವನ್ನು ಕಾಯಬೇಕೆಂಬ ಕನಸನ್ನು ತಾವು ಕಾಣುವದಿಲ್ಲೆಂದರವರು. ಬದಲಿಗೆ ಒಬ್ಬೊಬ್ಬ ಸ್ತ್ರೀಪುರುಷನೂ ತನ್ನ ಮಾನದ ರಕ್ಷಕನಾಗಿರಬೇಕ್ಕಿದ್ದು. ಇದು ಅಹಿಂಸೆಯ ರಾಜ್ಯದಲ್ಲಿ ಮಾತ್ರವೇ ಸಾಧ್ಯ. ಅತ್ಯಂತಿಕ ಧೈರ್ಯವನ್ನು ಅಹಿಂಸೆಯಿಂದಲೇ ಅಭಿವ್ಯಕ್ತಗೊಳಿಸಬರುತ್ತದೆಂಬ ಮಾತನ್ನು ಎಷ್ಟು ಒತ್ತಿ ಹೇಳಿದರೂ ಕಡಿಮೆಯೇ. ಬಿಹಾರದ ಜನರವರಿಂದೆ ಶತಮಾನಕಾಲದ ನೀಲಿ ತೋಟದ ಅನ್ಯಾಯದಿಂದ ನೀಲಿ ಒಕ್ಕಲಿಗರನು ವಿಮೋಚನ ಗೊಳಿಸಿದ ಅಹಿಂಸೆಯ ಉದಾಹರಣೆಯುಂಟು.

—ಸೇ ಪುಟ್ಸ್ಕಿ

ಬಿಹಾರದ ಯಾತ್ರೆ

(೮ನೇ ಪುಟದಿಂದ)

ಬಳಿಕ ಗಾಂಧೀಜಿ ಖಾದಿಯ ಬಗ್ಗೆ ಮಾತಾಡಿದರು. ಮುಂದಿನ ನಾಲ್ಕೈದು ದಿನಗಳ ವರೆಗೆ ಅ. ಭಾ. ಚರಖಾ ಸಂಘದ ಮತ್ತು ಹಿಂದುಸ್ತಾನಿ ತಾಲಿಮಿ ಸಂಘದ ಸಭೆಗಳಲ್ಲಿ ತಾವು ಮಗ್ನರಾಗಿರುವದರಿಂದ ಬಿಹಾರ ಗಲಭೆಗಳ ಸಂಬಂಧದಲ್ಲಿ ಸ್ಥಳೀಯ ಜನರನ್ನು ಕಾಣುವದಿಲ್ಲೆಂದು ಅವರು ಹೇಳಿದರು. ಹಿಂದುಸ್ತಾನದಲ್ಲೆಲ್ಲ ಹಳ್ಳಿಗಳಲ್ಲಿ ಚಟುವಟಿಕೆಗಳಿಗೆ ಕಾರಣವಾದ ಖಾದಿಯ ವಿಷಯ ಮಾತಾಡುವದು ಸುಪ್ರಸ್ತುತವೇ ಸರಿ. ಖಾದಿ ಅಥವಾ ಚರಖಾವೇ ಕೇಂದ್ರವಾದ ವಿಧಾಯಕ ಕಾರ್ಯಕ್ರಮವಿಲ್ಲದಿದ್ದರೆ ಹಳ್ಳಿಗಳಲ್ಲಿ ಜಾಗ್ರತಿಯನ್ನುಂಟುಮಾಡುವದು ಅಸಾಧ್ಯವಾಗುತ್ತಿತ್ತೆಂದು ತಾವು ಎದೆತಟ್ಟಿ ಹೇಳುವದಾಗಿ ಗಾಂಧೀಜಿ ನುಡಿದರು. ತಾವು ಸೆರೆಮನೆಯಲ್ಲಿದ್ದಾಗ ದಿವಂಗತ ಜಮನಲಾಲ ಬಜಾಜರ ಪ್ರೇರಣೆಯಿಂದ ಅಖಿಲ ಭಾರತ ಖಾದಿ ಮಂಡಲವೊಂದು ಸ್ಥಾಪಿಸಲ್ಪಟ್ಟದ್ದು, ಆ ಮೇಲೆ ಅದು ಕಾಂಗ್ರೆಸ್ಸಿನಿಂದ ಸ್ವಾಯತ್ತಾಧಿಕಾರ ಪಡೆದು ಅಖಿಲ ಭಾರತ ಚರಖಾ ಸಂಘವಾಗಿ ಮಾರ್ಪಟ್ಟದ್ದು, ಅನೇಕಾನೇಕ ಹಳ್ಳಿಗಳಲ್ಲಿ ಅದು ಕೋಟ್ಯಂತರ ರೂಪಾಯಿಗಳನ್ನು ಸ್ತ್ರೀಪುರುಷರಲ್ಲಿ ಹಂಚಿದ್ದು ಇವೆಲ್ಲವನ್ನು ಗಾಂಧೀಜಿ ಪ್ರೇಕ್ಷಕರಿಗೆ ನೆನಪುಮಾಡಿಕೊಟ್ಟರು. ಖಾದಿಯೆಂಬುದು ಸಹಜವಾಗಿ ಅಹಿಂಸೆಯ ಪ್ರತೀಕವಾಗಿ ಬಿಟ್ಟಿತು. ತ್ರಿವರ್ಣಧ್ವಜದಲ್ಲಿ ಚರಖಾದ ಚಿತ್ರಕ್ಕೆ ಸ್ಥಾನ ದೊರೆತದ್ದರಿಂದ ಖಾದಿಯ ಸತ್ವ ಎಲ್ಲರ ಮನಸ್ಸಿನಲ್ಲಿ ಅಚ್ಚೊತ್ತಿದೆ. ಖಾದಿಯನ್ನು ಹಿಂದೀ ಸ್ವಾತಂತ್ರ್ಯದ ಸನ್ನೆಕೋಲೆಂದು ಪಂಡಿತ ಜವಾಹರಲಾಲರು ಔಚಿತ್ಯಪೂರ್ಣವಾಗಿ ವರ್ಣಿಸಿದ್ದಾರೆ. ಅರಿವೆಯ ರೂಪದಲ್ಲಿ ಅದು ಪತಿವ್ರತೆಗೆಂತೋ ಅಂತೆಯೆ ಸೂಳೆಗೂ ಲಭ್ಯವಾಗಿದ್ದರೂ ರಾಷ್ಟ್ರಕ್ಕೆ ಅದು ಪರಿಶುದ್ಧತೆಯ ಮತ್ತು ಅಹಿಂಸೆಯ ಸಂಕೇತವಾಗಿದೆ. ಆದುದರಿಂದ ಖಾದಿಗೆ ಎಲ್ಲ ಹಳ್ಳಿಗಳಲ್ಲಿಯೂ ಇನ್ನೂ ಸ್ಥಿರವಾದ ಸ್ಥಾನ ದೊರೆತಿರದ್ದರೆ, ಅದರ ತಪ್ಪನ್ನು ಸಂಘದ ಅಧ್ಯಕ್ಷರಾದ ತಾವು ತಮ್ಮ ಮತ್ತು ತಮ್ಮ ಜತೆ ಧರ್ಮದರ್ಶಿಗಳ ಪರವಾಗಿ ತಮ್ಮ ತಲೆಯ ಮೇಲೆ ಹೊರಿಸಿಕೊಳ್ಳಲು ಸಿದ್ಧರಿದ್ದೇವೆಂದು ಗಾಂಧೀಜಿ ಹೇಳಿದರು. ನಮ್ಮ ಧ್ಯೇಯನಿಷ್ಠೆ ಇರಬೇಕಾದಷ್ಟು ಗಾಢವಾಗಿಲ್ಲ; ಖಾದಿಶಾಸ್ತ್ರದ ಮತ್ತು ತಂತ್ರದ ಅಭಿಜ್ಞಾನ ಸಮರ್ಪಕವಾಗಿಲ್ಲ, ಮತ್ತು ಅವಶ್ಯವಾದಷ್ಟು ತಪಶ್ಚರ್ಯೆ ಮತ್ತು ಬಲಿದಾನವೂ ಆಗಿಲ್ಲ ಎಂಬುದೇ ಇದಕ್ಕೆ ಕಾರಣ. ಆದುದರಿಂದ ಈಗಾಗಲೇ ಬಹಳ ಕೆಲಸವಾಗಿದ್ದರೂ ಭಾವೀ ರಾಜ್ಯದ ತಳಹದಿಯಲ್ಲಿ ಖಾದಿಗೆ ಪರಮ ಶ್ರೇಷ್ಠ ಸ್ಥಾನ ದೊರೆಯಬೇಕಾದರೆ ಆಗಬೇಕಾದುದು ಇನ್ನೂ ಎಷ್ಟೋ ಇದೆ.

೨೦-೪-೧೯೪೭

ಪ್ರಾರ್ಥನೆಯಾದ ನಂತರ ಗಾಂಧೀಜಿ ಪುನಃ ಖಾದಿಯ ಪ್ರಶ್ನೆಯನ್ನೆ ಎತ್ತಿಕೊಂಡರು. ಶ್ರೀ ಲಕ್ಷ್ಮೀಬಾಬು ಅವರ ಸೂಚನೆಯ ಮೇರೆಗೆ ಅವುಗಳನ್ನು ಸಂಘದ ಧನಸಹಾಯದಿಂದ ಪೂರ್ಣ ಮುಕ್ತಮಾಡಿ ಕೇವಲ ನೈತಿಕ ಅಧಿಕಾರವನ್ನಷ್ಟೆ ಸಂಘದವರು ನಡೆಸಬೇಕೆಂಬ ಪಕ್ಷಕ್ಕೆ ಚರಖಾಸಂಘ ಒಪ್ಪಿದೆಯೆಂದು ಅವರು ತಿಳಿಸಿದರು. "ನಾನು ಬಿಹಾರದ ಮುಖ್ಯ ಮಂತ್ರಿಯಾಗಿದ್ದರೆ, ಮತ್ತು ಸರಕಾರದ ಮಂತ್ರಿಗಳನ್ನು ಆರಿಸುವವನಾಗಿದ್ದರೆ, ಅವರು ಖಂಡಿತವಾಗಿಯೂ ಎಲ್ಲ ಹೊಸ ಜವಳಿ ಗಿರಣಿಗಳನ್ನೂ ನಿಲ್ಲಿಸಿ, ಈಗಾಗಲೆ ಇರುವವುಗಳ ತಮ್ಮ ಹುಟ್ಟುವಳಿಯನ್ನು ಹಿಂದುಸ್ತಾನದ ಹೊರಗೇ ಮಾರಬೇಕೆಂದು ವಿಧಿಸುತಿದ್ದೆ. ಆಗ ಬಿಹಾರದ ಔದಾರ್ಯಕ್ಕೆ ಜಗತ್ತಿನ ಮೆಚ್ಚಿಕೆ ದೊರೆಯುತ್ತಿತ್ತು. ಏಕೆಂದರೆ ಜಗತ್ತಿನಲ್ಲೆಲ್ಲ ಬಟ್ಟೆಯ ಕೊರತೆಯಿದೆ. ಜನರ ಒಪ್ಪಿಗೆ ಪಡೆದು ಬಿಹಾರದಲ್ಲಿ ಗಿರಣಿ ಬಟ್ಟೆಯನ್ನು ಪಹರದಂತೆ ಪ್ರತಿಬಂಧಿಸುತಿದ್ದೆ. ಬಿಹಾರದ ಸುದೈವದಿಂದಲೋ ದುರ್ದೈವದಿಂದಲೋ ನಾನು ಅದರ ಮುಖ್ಯ ಮಂತ್ರಿಯಾಗಿಲ್ಲ. ಆದರೂ ಲಕ್ಷ್ಮೀಬಾಬುವಿನ ಸೂಚನೆಯನ್ನು ಸ್ವೀಕರಿಸುವಾಗ ಚರಖಾಸಂಘ ಇಟ್ಟುಕೊಂಡ ಮಹತ್ವಾಕಾಂಕ್ಷೆಯಿದು. ಸಂಘದ ಬಂಧನದಿಂದ ವಿಮುಕ್ತರಾದ ಲಕ್ಷ್ಮೀಬಾಬುಗಳೂ ಅವರ ಸಹಕಾರ್ಯಕರ್ತರೂ ಖಾದಿ ಕಾರ್ಯಕ್ರಮವನ್ನು ಬಲವಾಗಿ ಮುಂದೊತ್ತಿ ಬಿಹಾರವನ್ನು ಗಿರಣಿ ಬಟ್ಟೆಯಿಂದ ಪೂರ್ಣ ವಿಮೋಚನೆ ಗೊಳಿಸುವಷ್ಟು ಮಟ್ಟಿಗೆ ಖಾದಿಯನ್ನು ಜನಪ್ರಿಯವಾಗಿ ಮಾಡಬಹುದೆಂದು ಅಪೇಕ್ಷಿಸಲಾಗಿದೆ. ಬಿಹಾರದ ಜನರು ಹೃತ್ಪೂರ್ವಕ ಸಹಕಾರ ನೀಡಿದರೆ ಅದು ಅಸಾಧ್ಯವೇನಲ್ಲವೆಂದು ನನಗೆ ಭರವಸೆಯಿದೆ. ಆಗ ಬಿಹಾರದ ಹಳ್ಳಿಗಳು ಚೇತೋಹಾರಿಯಾದ ಚರಖಾ ಸಂಗೀತದಿಂದ ಗುಂಜಾರಿಸುವವು. ಅವು ಬಿಹಾರದ ಹಳ್ಳಿಗಳಿಗೆ ಸಾಮರ್ಥ್ಯವನ್ನು ತಂದು ಕೊಡಬಹುದು. ಆಗ ಖಾದಿ ವ್ಯಾಪಾರದ ಸರಕಾಗಿ ಉಳಿಯುವದಿಲ್ಲ. ಪಾಟಣಾದಂಥ ನಗರಗಳೂ ತಮಗೆ ಬೇಕಾದ ಖಾದಿಯನ್ನು ತಯಾರಿಸಿಕೊಳ್ಳುವವು. ಶಾಲೆಯ ಮಕ್ಕಳೂ ಕಾಲೇಜಿನ ವಿದ್ಯಾರ್ಥಿಗಳೂ ಸಂತೋಷದಿಂದಲೂ ಧರ್ಮಭಾವದಿಂದಲೂ ಈ ಅತ್ಯವಶ್ಯಕ ವಿಧಾಯಕ ಕಾರ್ಯಕ್ಕಾಗಿ ತಮ್ಮ ಸಮಯದ ಒಂದಂಶವನ್ನು ಮೀಸಲಾಗಿಡುವರು. ನಗರ ನಾರಿಯರಿಂದಲೂ ಇದಕ್ಕಿಂತ ಕಡಿಮೆ ನಿರೀಕ್ಷೆಯಿಲ್ಲ. ಹಾಗರೂಕತೆಯಿಂದಲೂ ಇಚ್ಛಾಪೂರ್ವಕವಾಗಿಯೂ ಅವರು ಖಾದಿಯ ವಿಷಯದಲ್ಲಿ ಸ್ವಾವಲಂಬಿಗಳಾಗದಿರರು. ಆಗ ಮಾತ್ರ ಖಾದಿ ರಾಷ್ಟ್ರೀಯ ಅರ್ಥಪ್ರಣಾಲಿಯಲ್ಲಿ ತನಗುಚಿತವಾದ ಸ್ಥಾನವನ್ನು ಪಡೆಯುವದು. ಗಿರಣಿಗಳ ಚೇಪರಿಕೆಯ ಬದಲು ತಂತಮ್ಮ ಮನೆ ಮಠಗಳಲ್ಲಿ ಸೃಷ್ಟಿಕರ್ಮದ ಆನಂದವನ್ನು ಉಂಟುಮಾಡಬಹುದು," ಎಂದು ಗಾಂಧೀಜಿ ತಮ್ಮ ಕಲ್ಪನೆಯನ್ನು ವಿಸ್ತರಿಸಿದರು. ಗಿರಣಿಗಳಿಗೆ ಯಂತ್ರಗಳನ್ನೂ ಕೆಲಮಟ್ಟಿಗೆ ತಜ್ಞರನ್ನೂ ಹೊರಗಿನಿಂದ ತರಿಸಬೇಕಾದರೆ, ಚರಖಾಕ್ಕೆ ಬೇಕಾದ ಉಪಕರಣಗಳೂ ಕೆಲಸಗಾರರೂ ಎಲ್ಲವೂ ಹಳ್ಳಿಗಳಲ್ಲೆ ದೊರೆಯುವವೆಂಬಾತವನ್ನು ಗಾಂಧೀಜಿ ಜನರ ಲಕ್ಷ್ಯಕ್ಕೆ ತರಬಯಸಿದರು. ಆದುದರಿಂದ ಈ ಹೊಸ ಪ್ರಯೋಗಕ್ಕೆ ಬಿಹಾರದ ಜನರ ಬೆಂಬಲ ದೊರೆತೀತೆಂದು ಅವರು ಆಶಿಸಿದರು. ಆ ಆಶೆಯಿಂದಲೇ ಲಕ್ಷ್ಮೀಬಾಬುಗಳೂ ಅವರ ಜೊತೆಗಾರರೂ ಈ ಪ್ರಿಯ ಕರ್ಮವನ್ನು ಕೈಕೊಂಡಿದ್ದಾರೆ.

ಹಡಗದ ತೂತ ತಪ್ಪಿಸದಿರಿ

(೭ನೇ ಪುಟದಿಂದ)

ಬಿಟ್ಟುಕೊಡಲಾಗಿದೆ. ಇವುಗಳು ಭಿನ್ನತಯವಾಗಿ ಹಿನ್ನಡೆಯುವೆಂದು ನಮಗೆನಿಸುತ್ತದೆ. ವಿಶಿಷ್ಟ ಹಿತಸಂಬಂಧವುಳ್ಳವರು ತಮ್ಮ ಕೈವಾಡವನ್ನು ನಡೆಸುತಿರುವರೆಂದು ತೋರುತ್ತದೆ. ವಾಚಾಳಿಗಳ ಮುಂದೆ ನಿಲ್ಲಲಾರದೆ ಹಿಂದೆ ಸರಿಯುವದರ ಹೊರತು ಮದ್ರಾಸ ಮಂತ್ರಿಮಂಡಳಕ್ಕೆ ಸಾಮಾಜಿಕ ಉದ್ದೇಶ ಸಾಧನೆಯಾವುದೂ ಇಲ್ಲವೆ?

ಈ ಬಗೆಯ ವಿವಿಧೋದ್ದೇಶ ಸಂಘಗಳನ್ನು ಏಕೆ ಬಿಟ್ಟುಗೊಡಬೇಕಾಯಿತೆಂಬಬಗ್ಗೆ ಮದ್ರಾಸ ಮಂತ್ರಿಮಂಡಳದವರು ಕಾರಣಗಳನ್ನು ಕೊಡುತಿರುವಾಗಲೆ ಸಂಯುಕ್ತ ಪ್ರಾಂತ ಸರಕಾರದ ಅವರ ಸಹಕಾರಿಗಳಾದ ಡಾಕ್ಟರ ಎನ್. ಕೆ. ಕಟಜು ಇವರು ಪ್ರತಿಯೊಂದು ಹಳ್ಳಿಯಲ್ಲಿಯ ಒಕ್ಕಲತನ, ಹಾಲು ಬೆಣ್ಣೆ, ನೂಲುವದು, ವಸ್ತುಗಳನ್ನೆಲ್ಲ ಮಾರಾಟ ಮಾಡುವದು ಮೊದಲಾದವುಗಳತ್ತ ಹೆಚ್ಚು ಗಮನವನ್ನು ಕೊಡುವದಕ್ಕಾಗಿ ದೊಡ್ಡ ಪ್ರಮಾಣದಲ್ಲಿ ಅದೇ ಯೋಜನೆಯನ್ನು ಮುಂದರಿಸುವದಕ್ಕೆ ಬಲವತ್ತರ ಕಾರಣಗಳನ್ನು ಕೊಡುತಿರುವರು. ಬೇರೆ ಬೇರೆ ಪ್ರಾಂತಗಳಲ್ಲಿಯ ಕಾಂಗ್ರೆಸ್ ಸರಕಾರಗಳು ಭಿನ್ನ ಭಿನ್ನ ದಿಶೆಗಳಲ್ಲಿ ಈರೀತಿ ಪ್ರವರ್ತಿಸುತಿರುವುದು ನಿಜವಾಗಿಯೂ ಆಶ್ಚರ್ಯಕರವಾಗಿದೆ. ಒಂದೇ ದೊಡ್ಡೆಯ ತಾಪೆಗಳಿಗೆಲ್ಲ ಸತ್ವವನ್ನು ಪೂರಯಿಸುವದಿಲ್ಲೆಂದೂ ಆಯಾ ಜನರ ವಿಚಾರ ಒಲವುಗಳು ಮತ್ತು ಸ್ಥಳೀಯ ವರ್ಚಸ್ಸು ಮೊದಲಾದವುಗಳೇ ನಿರ್ಣಾಯಕ ಸಂಗತಿಗಳೆಂದೂ ಅಭಿಪ್ರಾಯಪಡುವದು ನ್ಯಾಯ್ಯವಾಗಿದೆ.

ಜನಸಾಮಾನ್ಯರ ಸೇವೆಯನ್ನು ಮಾಡುವದಿದ್ದರೆ ಇಂಥ ಸೇವೆ ಒಂದೇ ದಿಶೆಯಿಂದ ಸಾಗಬಲ್ಲುದು ಮತ್ತು ಸಂಬಂಧಿಸಿದವರೆಲ್ಲರ ಸಹಕಾರ ಪ್ರಯತ್ನಗಳು ಅವಶ್ಯ. ಆದುದರಿಂದ ಹೊಸದಾಗಿ ಸ್ಥಾಪಿತವಾದ ಅ. ಭಾ. ಕಾಂ. ಸಮಿತಿಯ ವಿಧಾಯಕ ಕಾರ್ಯಸಮಿತಿಯು 'ಬೇರೆ ಬೇರೆ ಪ್ರಾಂತಿಕ ಮಂತ್ರಿಮಂಡಲಗಳಿಗೆಲ್ಲ ಅವಶ್ಯವಿದ್ದ ಸಮಾನದರ್ಜೆಯ ಘಟಕವಾಗಿ ಪರಿಣಮಿಸುವದೆಂದು ಆಶಿಸಲಾಗಿದೆ. ಅಪಾರವಾದ ಸಮುದ್ರ ನಮ್ಮ ಮುಂದೆ ಬಿದ್ದಿದೆ. ಪ್ರಚಂಡ ಬಿರುಗಾಳಿಯನ್ನೂ ಎದುರಿಸಬೇಕಾಗಿದೆ. ಎಲ್ಲ ದಿಕ್ಕುಗಳಿಂದಲೂ ನಮ್ಮನ್ನಾವರಿಸುತಿರುವ ಗಾಳಿಯನ್ನು ಎದುರಿಸುವ ಇಚ್ಛೆ ನಮ್ಮದಾಗಿದ್ದರೆ ಕಾಂಗ್ರೆಸ್ಸಿನಕೈಯಲ್ಲಿನ ಸರಕಾರಹಡಗವು ಚಾಲನೆಯ ಪ್ರಾರಂಭದಲ್ಲಿಯೇ ತನ್ನ ಸ್ಥೈರ್ಯವನ್ನು ಕಳೆದುಕೊಳ್ಳಲಾರದು. ಆದುದರಿಂದ ಕಾಲ ಪ್ರವಾಹವನ್ನರಿತುಕೊಂಡು ನಾವೆಲ್ಲ ದೇಶದ ಜನತೆಗಾಗಿ ಕಾರ್ಯಮಾಡಲು ಒಂದೇ ಗುಂಪಿನವರಂತೆ ಅಣಿಯಾಗುವಾ. ಇಂಥ ಕಾರ್ಯಕ್ರಮದಲ್ಲಿಯೆ ಕಾಂಗ್ರೆಸ್ಸಿನ ಸುರಕ್ಷಿತತೆ ಮತ್ತು ಶಕ್ತಿಯಿರುವದು.

—ಜೆ. ಸಿ. ಕುಮಾರಪ್ಪ

ರಡ್ಡಿಯರ ಮಂತ್ರಿಮಂಡಳ ಮತ್ತು ಖಾದಿ

ರೆಡ್ಡಿಯಾರ ಮಂತ್ರಿಮಂಡಳವು ರಾಟೆಯ ಸುಧಾರಣೆಗಾಗಿ ಕೆಲವೊಂದು ಹಣವನ್ನು ಪ್ರತ್ಯೇಕವಾಗಿರಿಸಿದೆಂದು ಇತ್ತೀಚೆಗೆ ಮದ್ರಾಸದಿಂದ ಬಂದ ಸುದ್ದಿ ಪತ್ರಿಕೆಗಳಲ್ಲಿ ಪ್ರಸಿದ್ಧವಾಗಿದೆ. ಸ್ಪಷ್ಟವಾಗಿ ಹೇಳಬೇಕಾದರೆ ಈ ಘೋಷಣೆ ಸ್ವಲ್ಪವೂ ಪ್ರೋತ್ಸಾಹಕರವಾಗಿಲ್ಲ. ಪ್ರಕಾಶಂ ಮಂತ್ರಿಮಂಡಳದ ಉಳಿದ ದೋಷಗಳೇನೇ ಇದ್ದರೂ ಅದು ಗಾಂಧಿ ಮಾದರಿಯ ಆರ್ಥಿಕ ಯೋಜನೆಯಲ್ಲಿ ಇಡೀ ದೇಶಕ್ಕೆ ಮಾರ್ಗ ಹಾಕಿಕೊಡುವ ಸಾಹಸ ಮಾಡಿದ್ದಿತು. ಪ್ರಕಾಶಂರ ಜವಳಿ ಧೋರಣದ ವಿವರಗಳಲ್ಲಿಯೂ ಅಲ್ಪಸ್ವಲ್ಪ ದೋಷಗಳಿದ್ದವು. ಆದರೆ ಖಾದಿಯ ಶಕ್ತಿ ಸಾಮರ್ಥ್ಯದಲ್ಲಿ ಅವರಿಗೆ ಪರಮ ವಿಶ್ವಾಸವಿದ್ದಿತು. ಖಾದಿ ಪ್ರತಿಪಾದಿಸುತಿರುವ ಸಾಮಾಜಿಕ ಆರ್ಥಿಕ ಸಂಸ್ಥೆಯ ಮಾದರಿಯಲ್ಲಿಯೂ ಅವರಿಗೆ ಪರಮ ವಿಶ್ವಾಸ. ಬಂಡವಲುಗಾರರ ನಿಯಂತ್ರಣದಲ್ಲಿದ್ದ ಇಡೀ ಪತ್ರಿಕಾ ಪ್ರಪಂಚವೆ ಒಂದೇ ಸವನೆ ಅವರ ಜವಳಿ ಧೋರಣದ ವಿರುದ್ಧ ಬೊಬ್ಬೆಯಿಟ್ಟಿತು. ಆದರೆ ಅವರು ಬಂಡೆಗಲ್ಲಿನಂತೆ ನಿಶ್ಚಲರಾಗಿ ನಿಂತರು. ಮದ್ರಾಸ ಮಂತ್ರಿಮಂಡಳಕ್ಕೆ ಬಂದಿದ್ದ ರಾಜಕೀಯ ಸ್ವರೂಪದ ಕುತ್ತಿನ ಬಗ್ಗೆ ನಾನೀಗ ವಿಚಾರಿಸುವದಿಲ್ಲ. ಪ್ರಕಾಶಂರ ಖಾದಿ ಯೋಜನೆಯೇ ರಾಜಕೀಯ ಸ್ವರೂಪವನ್ನು ತಾಳಿತೆಂದು ದಕ್ಷಿಣದಲ್ಲಿಯ ಅನೇಕ ಗೆಳೆಯರು ಹೇಳುತಿದ್ದರೂ ಅವರ ಜವಳಿ ಧೋರಣದಿಂದಲೆ ಪ್ರಕಾಶಂ ಮಂತ್ರಿಮಂಡಳ ಉರುಳಲಿಲ್ಲೆಂಬುದಾಗಿ ಆಶಿಸುತ್ತೇನೆ. ಅದೇನೇ ಇರಲಿ ರೆಡ್ಡಿಯಾರರು ವಿಶಿಷ್ಟ ಹಿತ ಸಂಬಂಧಗಳಿಗೊಳಗಾಗಿ ಖಾದಿಗೆ ವಂಚನೆ ಮಾಡಲಾರರೆಂದು ಅಪೇಕ್ಷಿಸಲಾಗಿದೆ. ರಾಟೆಗಳ ಸುಧಾರಣೆಗಾಗಿ ಹಣವನ್ನು ಪ್ರತ್ಯೇಕವಾಗಿರಿಸುವ ಮತ್ತು ಬಹುಮಾನಗಳನ್ನು ಸಾರುವ ದಿನಗಳೀಗ ಸಂದಿ ಹೋಗಿವೆ. ರೆಡ್ಡಿಯಾರ ಮಂತ್ರಿಮಂಡಳಕ್ಕೆ ನಿಜವಾಗಿ ಖಾದಿಯಲ್ಲಿ ಮತ್ತು ವಿಕೇಂದ್ರೀಕೃತ ಆರ್ಥಿಕ ಅಭಿವೃದ್ಧಿಯಲ್ಲಿ ವಿಶ್ವಾಸವಿದ್ದರೆ ಅದು ಗ್ರಾಮೋದ್ಯೋಗಗಳ ಅಭಿವೃದ್ಧಿಯ ಸಂಬಂಧದಲ್ಲಿ ಒಪ್ಪೈಕ್ಯದ ಮುನ್ನಡೆಯನ್ನಿಡಬೇಕು. ತದ್ವಿರುದ್ಧವಾಗಿ ಹೊಸ ಮಂತ್ರಿಮಂಡಳಕ್ಕೆ ಗಾಂಧೀ ಅರ್ಥಶಾಸ್ತ್ರದಲ್ಲಿ ವಿಶ್ವಾಸವಿಲ್ಲದಿದ್ದರೆ ರಾಟೆಗಾಗಿ ಅದು ಒಂದು ಪೈ ಕೂಡ ವೆಚ್ಚ ಮಾಡಬಾರದು. ಮಹಾತ್ಮರನ್ನು ಸಂತೋಷಪಡಿಸುವದಕ್ಕಾಗಿ ಖಾದಿಗೆ ಶಾಬ್ದಿಕ ಸಹಾನುಭೂತಿಯನ್ನು ತೋರುವದು ನಿಜವಾಗಿ ಸಾರ್ವಜನಿಕ ಅಪ್ರಾಮಾಣಿಕತೆಗೆಳೆಸುತ್ತದೆ. ಈ ಸಂಬಧದಲ್ಲಿ ನಡುಗಾಲ ಸರಕಾರದ ಧೋರಣವೂ ಅಸಹಾಯಕವಾಗಿದ್ದುದು ಅತ್ಯಂತ ವಿಷಾದಕರ ಸಂಗತಿಯಾಗಿದೆ. ಕೇಂದ್ರ ಸರಕಾರದವರು ಕೊಡಮಾಡಿದ ಕದಿರುಗಳನ್ನು ನಿರಾಕರಿಸಿರೆಂದು ಗಾಂಧೀಜಿಯವರು ಕೆಲ ತಿಂಗಳ ಹಿಂದೆ ಪ್ರಾಂತಿಕ ಮಂತ್ರಿಗಳಿಗೆ ಸ್ಪಷ್ಟವಾಗಿ ಸಲಹೆಯಿತ್ತಿದ್ದರು. ಆದರೆ ಮದ್ರಾಸ ಪ್ರಾಂತಕ್ಕೆ ಕೊಡಮಾಡಿದ ಕದಿರು ಸೀದಾವನ್ನು ನಿರಾಕರಿಸಲು ಮದ್ರಾಸ ಸರಕಾರಕ್ಕೆ ಅಧಿಕಾರವಿಲ್ಲೆಂದು ನಡುಗಾಲ ಸರಕಾರ ಘೋಷಿಸಿತು. ಈ ಪ್ರಶ್ನೆಯಲ್ಲಿ ಅಡಕವಾಗಿರುವ ಘಟನಾತ್ಮಕ ತೊಡಕುಗಳೇನೇ ಇದ್ದರೂ ನಡುಗಾಲ ಸರಕಾರದವರು ಕೊಟ್ಟ ಆಳಸರ ಮಾದರಿಯ ಉತ್ತರಗಳು ನಿಜವಾಗಿ ಆಶ್ಚರ್ಯಕರವಾಗಿವೆ. ಇಷ್ಟೇ ಅಲ್ಲ ಅಸಹ್ಯಕರವಾಗಿವೆ. ಕಾಂಗ್ರೆಸ್ಸು ರಾಷ್ಟ್ರೀಯ ಯೋಜನೆಯ ಸಂಬಂಧದಲ್ಲಿ ಅನಿಶ್ಚಿತ ಧೋರಣವನ್ನು ಇನ್ನು ಮುಂದೆ ತಾಳಬಾರದು. ಹಿಂದುಸ್ತಾನದ ಆರ್ಥಿಕ ಅಭಿವೃದ್ಧಿಗಾಗಿ ಅದು ನಿಶ್ಚಿತ ಧೋರಣವನ್ನು ಸಾರಲಿಕ್ಕಬೇಕು. ಕಾಂಗ್ರೆಸ ಕಾರ್ಯ ಸಮಿತಿಯು ಪ್ರಾಂತಿಕ ಕಾಂಗ್ರೆಸ ಮಂತ್ರಿಮಂಡಳಗಳಿಗೆ ನಿಶ್ಚಿತ ಕಾರ್ಯಕ್ರಮವನು ಹಾಕಿಕೊಡಲಿಕ್ಕಬೇಕು. ಉದ್ಯೋಗಿಕ ಅಭಿವೃದ್ಧಿ ಖಾತೆಯಲ್ಲಿರುವ ಮಂತ್ರಿಗಳ ವೈಯಕ್ತಿಕ ವಿಚಾರ ಒಲವುಗಳನ್ವಯ ಆಯಾ ಪ್ರಾಂತಗಳು ನಡೆಯಲಿಕ್ಕೆ ಅವಕಾಶ ಕೊಡಬಾರದು.

ಗಾಂಧೀಜಿಯವರು ಎಲ್ಲ ದೊಡ್ಡ ಉದ್ಯೋಗಗಳ ವಿರುದ್ಧ ಇರುವರಿಲ್ಲೆಂಬುವದನ್ನು ನಾನು ಮತ್ತೊಮ್ಮೆ ಹೇಳಬಯಸುತ್ತೇನೆ. ದೊಡ್ಡ ಪ್ರಮಾಣದ ಮುಖ್ಯ ಮುಖ್ಯ ಉದ್ಯೋಗಗಳ ರಾಷ್ಟ್ರೀಕರಣವಾಗಬೇಕೆಂದು ಅವರು ಬಯಸುತ್ತಾರೆ. ಬಳಕೆಗಾರರ ಸರಕುಗಳೆಲ್ಲ ದೊಡ್ಡ ಪ್ರಮಾಣದಲ್ಲಿ ವಿಕೇಂದ್ರೀಕೃತವಾಗಬೇಕು. ಸಾಧ್ಯವಾದ ರೀತಿಯಲ್ಲಿ ಪ್ರಚಂಡ ಪ್ರಮಾಣದಲ್ಲಿ ಕೋಟ್ಯವಧಿ ಜನರಿಂದ ಉತ್ಪಾದನೆ ಸಾಗಬೇಕು. ವಿವರಗಳಲ್ಲಿ ನಾನು ಈಗ ಪ್ರವೇಶಿಸುವದಿಲ್ಲ. ವಿವರಗಳನ್ನು ತಿಳಿಯ ಬಯಸುವವರು ನಾನು ಬರೆದ 'ಗಾಂಧಿಯನ್ ಪ್ಲ್ಯಾನ್ ಆಫ್ ಎಕಾನಮಿಕ್ ಡೆವಲಪ್‌ಮೆಂಟ್' ಎಂಬ ಪುಸ್ತಿಕೆಯನ್ನು ಓದಬೇಕು. ಆರ್ಥಿಕ ಅಭಿವೃದ್ಧಿಯ ಯೋಜನೆಗಳಿಗೆ ಕೊನೆಯ ರೂಪವನ್ನು ಕೊಡುವ ಮೊದಲು ರಾಷ್ಟ್ರೀಯ ಧುರೀಣರಿಲ್ಲ ಗಾಂಧೀ ಆರ್ಥಿಕ ಯೋಜನೆಯ ಪ್ರಯೋಗಕ್ಕೆ ಸಮಯ ಕೊಡಬೇಕೆಂದು ನಾನು ಕಳಕಳಿಯಿಂದ ವಿನಂತಿಸುತ್ತೇನೆ. ಆಧುನಿಕ ಜಗತ್ತಿನ ಕಲಹಗಳನ್ನು ತರುವ ಅನೇಕ ಆರ್ಥಿಕ ರೋಗಗಳಿಗೆ ಪ್ರಮುಖ ಉದ್ಯೋಗಗಳನ್ನೆಲ್ಲ ರಾಷ್ಟ್ರೀಕರಿಸುವದು ಮತ್ತು ಬಳಕೆಗಾರರ ಉದ್ಯೋಗಗಳನ್ನೆಲ್ಲ ವಿಕೇಂದ್ರೀಕರಿಸುವದು ರಾಮಬಾಣ ಉಪಾಯವೆಂಬುದರಲ್ಲಿ ನನಗೆ ಎಳ್ಳಷ್ಟೂ ಸಂಶಯವಿಲ್ಲ.

— ಎಸ್. ಎನ್. ಅಗರ

ಉದಾತ್ತ ಮಾರ್ಗದರ್ಶನ

ಮೋರವಿ ಸಂಸ್ಥಾನದ ೬ ಹಳ್ಳಿಗಳು ವ್ಯಾಪಿಸಿ ವಿಸ್ತಾರದಿರುವ ಶಿಂದೀ ವನದಲ್ಲಿ ಅಖಿಲಭಾರತ ಗ್ರಾಮೋದ್ಯೋಗ ಸಂಘದವರು ಶಿಂದೀ ರಸದಿಂದ ಬೆಲ್ಲ ಮಾಡುವ ಪ್ರಾತ್ಯಕ್ಷಿಕೆಯನ್ನು ನಡೆಸಿರುವರು. ಶಿಂದೀ ವನದಿಂದ ಸಕ್ಕರೆಯನ್ನು ಸಿದ್ಧಪಡಿಸಿದ್ದಾದರೆ ಉಳಿದ ಮುಖ್ಯ ಆಹಾರ ಪದಾರ್ಥಗಳಿಗೆ ವಿಶೇಷತಃ ದವಸ ಧಾನ್ಯಗಳಿಗಾಗಿ ಫಲವತ್ತಾದ ಭೂಮಿ ಸಿಕ್ಕಂತಾಗುವದು. ಪಡಭೂಮಿಗಳಿಂದ ಧನ ಸಂಪಾದಿಸಿಕೊಳ್ಳುವ ಈ ಕಾರ್ಯಕ್ರಮಕ್ಕೆ ಮೋರವಿ ಮಹಾರಾಜರ ಮನವರಿಕೆ ಮಾಡಿಕೊಡುವಷ್ಟರ ವರೆಗೆ ನಮ್ಮ ಪ್ರಯೋಗಗಳು ಯಶಸ್ವಿಯಾಗಿವೆ. ಮೋರವಿ ಮಹಾರಾಜಾ ಸಾಹೇಬರೀಗ ತಮ್ಮ ಸಂಸ್ಥಾನದಲ್ಲಿ ಶಿಂದೀ ಗಿಡಗಳನ್ನು ಬೆಳಸುವ ಕಾರ್ಯಕ್ರಮವನ್ನು ಕೈಕೊಂಡಿರುವರೆಂದು ಸುದ್ದಿ ಬಂದಿದೆ. [illegible] ಶಿಂದಿ ಗಿಡಹಚ್ಚುವ ಕಾರ್ಯಕ್ರಮದ ಪ್ರಾರಂಭೋತ್ಸವವನ್ನು ಜರುಗಿಸಿದರು. ಮಹಾರಾಜಾ ಸಾಹೇಬರ ಈ ಸಾಹಸಕ್ಕಾಗಿ ನಾವವರನ್ನಭಿನಂದಿಸುವೆವಲ್ಲದೆ ಅವರೀ ಮಾರ್ಗದರ್ಶನದ ಪ್ರಯೋಜನ ಪಡೆಯಲು ಇನ್ನು ಅನೇಕ ಮಹನೀಯರು ಮುಂದೆ ಬರಬೇಕೆಂದು ಬಿನ್ನವಿಸುತ್ತೇವೆ.

ಶಿಂದೀ ರಸದ ಉಪಯೋಗ ಮಾಡಿಕೊಂಡು ಪ್ರತಿಯೊಂದು ಹಳ್ಳಿಯವನು ತನಗೆ ಬೇಕಾಗುವ ಬೆಲ್ಲ ಮತ್ತು ಸಕ್ಕರೆ ವಿಷಯದಲ್ಲಿ ಸ್ವಾವಲಂಬಿಯಾಗಬೇಕೆಂದು ಮಹಾರಾಜಾ ಸಾಹೇಬರು ಆಸ್ಥೆವಹಿಸುವರೆಂದು ತಿಳಿಯುತ್ತದೆ. ಪಡಭೂಮಿಗಳಿಂದ ಈ ಶಿಂದೀ ಗಿಡಗಳು ಉತ್ತೇಜಕ ಪೌಷ್ಟಿಕ ಪದಾರ್ಥಗಳನ್ನು ಪೂರಯಿಸುವವಲ್ಲದೆ ಈ ಶಿಂದೀ ಗಿಡಗಳು ಹಳ್ಳಿಗರ ಉಳಿದ ಅವಶ್ಯಕತೆಗಳನ್ನು ಪೂರೈಸುವ ಉಪಪದಾರ್ಥಗಳನ್ನೂ ಒದಗಿಸುತ್ತವೆ. ಕಟ್ಟಿಗೆ, ಎಳೆ ಹೊರಡುವ ಪದಾರ್ಥ, ಚಾಪೆಗಾಗಿ ಎಲೆಗಳು, ಹಗ್ಗ ಮಾಡುವ ಸಾಮುಗ್ರಿಗಳು ಅಲ್ಲದೆ ಬೇರೆ ಬೇರೆ ಅನೇಕ ಉಪಯುಕ್ತ ಸಾಮಗ್ರಿಗಳನ್ನು ಈ ಶಿಂದಿ ಗಿಡದಿಂದ ಪಡೆಯಬಹುದು. ಹಿಂದುಸ್ತಾನದ ಒಂದು ಮೂಲೆಯಲ್ಲಾದರೂ ಈ ದಿಸೆಯಲ್ಲಿ ಕಾರ್ಯ ಪ್ರಾರಂಭವಾದುದು ಸಂತೋಷಪ್ರದ. ತಮ್ಮ ಮುಖ್ಯ ಅವಶ್ಯಕತೆಗಳನ್ನು ಪೂರಯಿಸಿಕೊಳ್ಳುವದಲ್ಲಿ ಸಾಕಷ್ಟು ಸ್ವಾವಲಂಬಿಗಳಾಗಬೇಕೆಂಬ ಪಾಠವನ್ನು ಇದು ಬೋಧಿಸುತ್ತದೆ.

ದನಗಳ ಪೋಷಣೆಯಲ್ಲಿಯೂ ಮಹಾರಾಜಾ ಸಾಹೇಬರು ಬೇರೆ ಎಲ್ಲ ಜನರಿಗೆ ಮಾರ್ಗದರ್ಶನ ಮಾಡಿಕೊಡುತಿರುವರೆಂಬವನ್ನು ನಾವಿಲ್ಲಿ ಉಲ್ಲೇಖಿಸಬಯಸುತ್ತೇವೆ. ಹಿಂದುಸ್ತಾನದಿಂದು ಹಾಲಿನ ಕೊರತೆಯಿಂದ ಬಳಲುತಿದೆ. ಬೀಜದ ಹೋರಿಗಳ ಸಂಖ್ಯೆಯೂ ದಿನದಿನಕ್ಕೆ ಕಡಮೆಯಾಗುತ್ತ ನಡೆದಿದೆ. ಬೀಜದ ಹೋರಿಗಳನ್ನಾಯುವಲ್ಲಿ ಯೋಗ್ಯ ದಕ್ಷತೆ ವಹಿಸದ್ದರಿಂದ ಪೀಳಿಗೆಯೂ ಕೆಡುತ್ತ ನಡೆದಿದೆ. ಆದುದರಿಂದ ಗ್ರಾಮ ಜೀವನದ ಪುನರುಜ್ಜೀವನ ಮಾಡಬೇಕಾದರೆ ದೇಶದಲ್ಲೆಲ್ಲ ಕ್ರಮಬದ್ಧ ಮತ್ತು ಶಾಸ್ತ್ರೀಯ ದೃಷ್ಟಿಯಿಂದ ದನಗಳನ್ನು ಸಾಕುವ ಕೊಟ್ಟಿಗೆಗಳನ್ನು ಸಿದ್ಧಪಡಿಸುವದು ಅತ್ಯವಶ್ಯವಾಗಿದೆ. ಸಾಮಾನ್ಯ ನಾಗರಿಕನ ಶಕ್ತಿಯ ಆಚೆಗಿದೆ ಈ ಕಾರ್ಯ. ಏಕೆಂದರೆ ಅಷ್ಟು ಹಣ ಮತ್ತು ವೇಳೆ ಅವನಿಗೆ ಸಿಕ್ಕುವುದಿಲ್ಲ. ಆದುದರಿಂದ ಶ್ರೀಮಂತ ಮತ್ತು ವರ್ಚಸ್ಸುಳ್ಳ ಜನರು ಈ ಉದಾತ್ತ ಉದ್ಯೋಗವನ್ನು ಕೈಕೊಂಡು ದೇಶದ ಜನತೆಯ ಆರೋಗ್ಯ ಮತ್ತು ಕಲ್ಯಾಣವನ್ನು ಸಾಧಿಸುವರೆಂದು ಆಶಿಸಲಾಗಿದೆ.

— ಜೆ. ಸಿ. ಕುಮಾರಪ್ಪ

ಘಟನಾಸಮಿತಿ ಮುಂದರಿಯಿತು

ಘಟನಾಸಮಿತಿಯು ಶುಕ್ರವಾರ ೨ನೇ ತಾರೀಖಿನ ದಿನ ಮುಂದರಿಯಿತು. ಅಧ್ಯಕ್ಷರು ಜಾಹೀರ ಪಡಿಸುವ ತಾರೀಖಿಗೆ ಮತ್ತೆ ಅದರ ಸಭೆ ಸೇರುವದು.

ಒಂದೇ ಜಗತ್ತು ಒಂದೇ ಸಮಸ್ಯೆ

ವಿಜ್ಞಾನದಿಂದ ಜಗತ್ತು ಅದ್ಭುತಕರ ರೀತಿಯಲ್ಲಿ ಸಂಘಟಿತವಾಗುತಿದೆ. ಒಂದೇ ಕುಂಚಿನಿಂದ ಅನೇಕ ಸಲ ಇಡೀ ಜಗತ್ತನ್ನು ಬಳಿಯುತ್ತದೆ. ಈ ತತ್ವಕ್ಕೆ ಕುಷ್ಠರೋಗ ನಿವಾರಣೆಯ ಪ್ರಯತ್ನಗಳೇ ಸಾಕ್ಷಿ. ಜಗತ್ತಿನಲ್ಲೆಲ್ಲ ಕುಷ್ಠರೋಗಿಗಳ ಮಾನವೀಯ ಅವಶ್ಯಕತೆಗಳೆಲ್ಲ ಅಲಕ್ಷಿತವಾಗುತ್ತವೆ. ಮತ್ತು ಆ ಬೇನೆಯ ಬಗ್ಗೆ ಇರುವ ಅಂಧ ಶ್ರದ್ಧೆಯಲ್ಲಿ ಭೀತಿ ಎಲ್ಲೆಲ್ಲಿಯೂ ಅವರ ಬಗ್ಗೆ ಜಾಗ್ರತ ಮತ್ತು ಪ್ರಗತಿಪರವೆಂದು ಹೇಳಿಕೊಳ್ಳುವ ಜಗತ್ತಿನಲ್ಲಿ ಸಾವಿರಾರು ವರುಷಗಳ ಹಿಂದೆ ಹಳ್ಳಿಯ ಕೆಲಸಿಗನೊಬ್ಬನು ಪ್ರಸಿದ್ಧ ಶಸ್ತ್ರವೈದ್ಯನಾಗಿರುವಾಗ ಯಾವ ದೃಷ್ಟಿಯಿಂದ ಕುಷ್ಠರೋಗವನ್ನು ನೋಡುತಿದ್ದರೊ ಅದೇ ದೃಷ್ಟಿಯಿಂದ ಈಗಲೂ ನೋಡುತಿರುವದು ವಿಚಾರ ಮಾಡತಕ್ಕ ವಿಷಯವಾಗಿದೆ. ಅಜ್ಞಾನ ಮತ್ತು ಪೂರ್ವಗ್ರಹ ಪರಿಸ್ಥಿತಿ ಬಹಳಮಟ್ಟಿಗೆ ಕಾರಣವಾಗಿರಬಹುದು. ಆದರೆ ಇದಕ್ಕಿಂತ ಹೆಚ್ಚಿನ ಕಾರಣವೊಂದಿದೆ. ಅದೆಂದರೆ ಮಾನವನು ಬಾಂಧವ್ಯ ಭಾವನೆಯನ್ನು ಬಿಟ್ಟುಗೊಟ್ಟದ್ದು— ಕುಷ್ಠರೋಗಿಯ ಸಂದೇಶವೆಂದರೆ ಮಾನವನ ಸಹಸದ್ಭಾವನೆ ಬುದ್ಧಿಯ ಸಂದೇಶವೆಂದೇ ಹೇಳಬಹುದಾಗಿದೆ.

ಕುಷ್ಠರೋಗವು ಬಹಳ ಜಟಿಲ ಸಮಸ್ಯೆಯಾಗಿರುವ ದೇಶಗಳಲ್ಲಿ ವಾಸಿಸುವ ಸುದ್ದಿಗಾರರಿಂದ ಬಂದ ಪತ್ರಗಳಲ್ಲಿಯ ಅವತರಣಿಕೆಗಳನ್ನು ಕೆಳಗೆ ಕೊಟ್ಟಿದೆ. ಫಿಲಿಪಾಯಿನಾದಲ್ಲಿಯ ರಾಣಿ ನಿಂದ ಜೊಸೆಫಾಯಿನ್ ಗರೀರ, ಸ್ವತಃ ಕುಷ್ಠರೋಗಿಯಾಗಿದ್ದು ನೊವಾಲಿಚೆಸ್ ಲೆಪ್ರೊಸೇರಿಯಂದಲ್ಲಿರುವಳು. ಅತ್ಯಂತಿಕ ಶ್ರದ್ಧೆ ಅನುಪಮ ಧೈರ್ಯ ಮತ್ತು ಅತ್ಯುಚ್ಚ ದೇಶಾಭಿಮಾನ ಈ ಮೂವ್ವರಿ ಉತ್ಸಾಹದಲ್ಲಿ ಅವಳು ತನ್ನ ಜೀವನ ಮಾನವನ್ನು ಸಾಗಿಸುತಿದ್ದು ತನಗಿಂತಲೂ ಕಡಿಮೆ ಧೈರ್ಯಶಾಲಿಗಳಾದವರಲ್ಲಿ ಉತ್ಸಾಹವನ್ನು ಹುಟ್ಟಿಸುತಿರುವಳು.

ಬಹ ಮತ್ತು ದುರ್ದೈವೀ ಶಕ್ತಿ ಕುಷ್ಠರೋಗಿಗಳ ವಸಾಹತಿನಲ್ಲಿಯ ಜೀವನದ ಒಳನೋಟವು ಹೃದಯದ್ರಾವಕ ... ಮತ್ತು ... ಶಕ್ತಿಯಾಗಿದೆ. ಪರಮಾತ್ಮನ ಪ್ರೇಮದಲ್ಲಿ ಕಷ್ಟ ಸಹಿಸಲು ನನಗೆ ಸಂತೋಷ. ಬೇರೆ ಇದಕ್ಕಿಂತ ಹೆಚ್ಚಿನ ಸಂತೋಷ ಮೊದಲನೆಯದಾಗಿ ಯಾವುದಿದೆಂಬುದನ್ನು ನೀವು ತಿಳಿಯಬೇಕು. ನಾನು ಎಂದೂ ಹಾಗಿಲ್ಲೆಂದು ಹೇಳುವದು ಮನನೀಯವಾಗಲಾರದು, ಸತ್ಯವೂ ಆಗಲಾರದು. ಹೇಳಲಿಕ್ಕೆ ಬಾರದಂಥ ಏಕಾಂತವಾದ ಕ್ಷಣಗಳು, ವಿವರಿಸಲು ಸಾಧ್ಯವಾದ ವೇದಿಕೆಗಳ ಕ್ಷಣಗಳೂ ಇದ್ದೇ ದುಂಟು. ಈ ಕ್ಷಣಗಳಲ್ಲಿ ಯಾವನೊಬ್ಬನ ಎದೆಯೊಡೆದು ಹೋಗುವ ಸಂಭವವುಂಟು. ಅವನು ನನ್ನನ್ನು ತನ್ನೆಡೆಗೆ ಕರೆದುಕೊಂಡು ಹೋಗುವ ವರೆಗೆ ತಿಳಿಯಲಾರದಂಥ ಕಾರಣಗಳಿಗಾಗಿ ಪರಮಾತ್ಮ ನಮಗೆ ಇಂಥ ವಿಚಿತ್ರ ರಹಸ್ಯ ಜೀವನವನ್ನು ಕೊಟ್ಟಿದ್ದಾನೆಂದು ನಾನು ಭಾವಿಸುತ್ತೇನೆ. ಆದುದರಿಂದ ನಾನೇನೂ ಯಾವದೇ ಬಗೆಯ ಪೂಜೆಯನ್ನು ಮಾಡುವದಿಲ್ಲ. ಅವನ ಸಂಕಲ್ಪದಂತೆ ನಡೆದುಕೊಳ್ಳುವ ಶಕ್ತಿ ಮತ್ತು ಧೈರ್ಯವನ್ನು ಕರುಣಿಸಲೆಂದಷ್ಟೇ ಅವನನ್ನು ಬೇಡಿಕೊಳ್ಳುತ್ತೇನೆ. ಆದರೆ ನನ್ನ ಸಂಗಾತಿಗಳ ಮಟ್ಟಿಗಂತೆ ಇಷ್ಟು ಸುಲಭವಾಗಿ ಅರ್ಥವಿಸಲ್ಪಡಲಾರದು. ಅನೇಕರು ಅತ್ಯಂತ ದುಃಖಿತರು, ಅಸಹಾಯರು ಮತ್ತು ಹೊಟ್ಟೆಕಿಚ್ಚಿನವರು ಆಗಿರುವರೆಂದು ನನಗೆ ಭೀತಿ. ಉಳಿದವರು ಅಸಹಾಯಕರು ಮತ್ತು ಇದ್ದರೂ ನಿರಾಶೆಯಿಂದ ಅದನ್ನು ಸುಭೂತಿಯುಳ್ಳವರು ಇಲ್ಲವೆನಿರಾಶೆಯಿಂದ ಅದನ್ನೂ ಆಗಿರುವರು ಮನನೀಯ. ಈ ಸಂಕಷ್ಟಗಳನ್ನೆಲ್ಲ ದೂರ ಮಾಡಲು ನನಗೆ ಪ್ರಬಲವಾದ ಇಚ್ಛೆ, ಆಸೆಯ ಕಿರಣಗಳನ್ನಾದರೂ ಅವರಲ್ಲಿ ಹುಟ್ಟಿಸಲು ಸಮರ್ಥಳಾಗಬೇಕೆಂದು ನನ್ನ ಇಚ್ಛೆ. ಮತ್ತೊಮ್ಮೆ ಅವರ ಜೀವಮಾನವನ್ನು ನಿರೋಗಿ ಮತ್ತು ಉಜ್ವಲ ಜೀವನವನ್ನಾಗಿ ಮಾಡಲು ಬಯಸುವೆ.

ವಸಾಹತುಗಳಲ್ಲಿರುವ ಬೇಕುಗಳ ದುರಂತ ಚಿತ್ರವನ್ನು ವರ್ಣಿಸುತ್ತ ಈ ವೀರ ಸ್ತ್ರೀಯು ಹೀಗೆ ಬರೆಯುತ್ತಾಳೆ "ಔಷಧ ಅದಾದರೂ ಸಾಕಷ್ಟಿಲ್ಲ, ಇಲ್ಲಿ ನಮಗೆ ಪ್ರಯೋಗಶಾಲೆಗಳೇನೂ ಇರುವದಿಲ್ಲ. ವೈದ್ಯಕೀಯ ಸಹಾಯವೂ ಸಾಕಷ್ಟಿಲ್ಲ. ಒಟ್ಟಾರೆ ಹೇಳುವದಾದರೆ ಇದೇನು ಆಸ್ಪತ್ರೆಯೇ ಅಲ್ಲವೆಂದು ಸೇರಿಸಲೆ, ಕೈದಿಗಳಿಗಿಂತ ಹೆಚ್ಚಿನ ಅನುಕೂಲ್ಯಗಳೇನೂ ಇವರಿಗೆ ದೊರೆಯುವದಿಲ್ಲ. ಸರಕಾರ ಬಡವರುವದೆಂದು ಹೇಳಲಾಗುತ್ತದೆ. ಆದರೆ ಉಳಿದೆಲ್ಲಕ್ಕೂ ಅವರ ಹತ್ತಿರ ಹಣವಿದೆಯಲ್ಲ? ಕುಷ್ಠರೋಗಿಗಳ ವಿರುದ್ಧ ಇದೇ ಜಗತ್ತಿನ ಒಳಸಂಚು ಮಾಡಿದೆಯೊಂದೆ? ... ಬಗೆಯ ಒಳಸಂಚು ...

ನಿಷ್ಠಾರೆಜವಾಗಿರಾದರೂ ನಾನು ರೊಟ್ಟಿಗೆದ್ದಿರುವೆನು. ಕುಷ್ಠರೋಗಿಯ ಹಕ್ಕುಬದ್ಧವೇ ಹೀಗೆಂದು ನಾನು ತಿಳಿಯುವೆ, ಹೀಗಿದೆಯೆ? ಅಥವಾ ಹಾಗಿರಬೇಕೆ? ಅದಕ್ಕಾಗಿ ಏನಾದರೂ ಮಾಡಬೇಕೆಂದು ನಾನು ಬಯಸುವೆ. ಕುಷ್ಠರೋಗಿಗಳು ಶಾಪಗ್ರಸ್ತ ಮತ್ತು ಅಸಹಾಯರೆಂದು ಸರಕಾರ ಭಾವಿಸುತ್ತದೆ. ಕುಷ್ಠರೋಗಿಯು ಕಾಯದೆಯನ್ನು ತನ್ನ ಕೈಯಲ್ಲಿಯೆ ತೆಗೆದುಕೊಂಡ ಬಂಡುಗಾರನು ಅಸಹ್ಯ, ಅಸ್ಪೃಶ್ಯ ಕಿವುಡುವರು ಅಥವಾ ಅವನೇ ಅದಕ್ಕೆಲ್ಲ ನಿಂದ್ಯನೊ? ಈ ಬೋಧನೆಲ್ಲ ಪೂರ್ಣವಾಗಿ ಕುಷ್ಠರೋಗಿಯದೇ ಅಲ್ಲೆಂದು ಇಲ್ಲಿದ್ದ ಅನುಭವದಿಂದ ನಾನು ಹೇಳಬಲ್ಲೆ. ನಮ್ಮಲ್ಲಿ ನೇಕರನ್ನು ನಮ್ಮ ಕುಟುಂಬದವರು ಕೂಡ ಪರಿತ್ಯಜಿಸಿರುವರು. ಉಳಿದವರಿಗೆ ಕುಟುಂಬವೇ ಇಲ್ಲ. ಬೆರಿಲ್ ಕ್ರಾರ್ಕ ರು ವರ್ಜಿನ್ ದ್ವೀಪಗಳಿಂದ (ಯು. ಎಸ್. ಎ) ಹೇಗೆ ಬರೆಯುತ್ತಾರೆ. ಆದರೆ ಅಲ್ಲಿ ಕುಷ್ಠರೋಗವು ಅನಿವಾರ್ಯವೆಂದೇ ಭಾವಿಸಲಾಗುತ್ತದೆ. ಕೆಲವರನ್ನ ವಸಾಹತಿನಲ್ಲಿಡಲಾಗುತ್ತದೆ. ಆದರೆ ಅವರ ಬಗ್ಗೆ ಬಹಳ ಉಪೇಕ್ಷೆಯನ್ನೇ ತೆಗೆದುಕೊಳ್ಳುವದಿಲ್ಲ. ಆದುದರಿಂದ ಇಲ್ಲಿ ನಡೆವ ಕಾರ್ಯಕಲಾಪಗಳ ಹೆಚ್ಚಿನ ವರದಿಯನ್ನೇನೂ ನಾನು ಕಳಿಸಲಾರೆ.

ಕ್ಯೂಬಾದಿಂದ ಲುಯಿಸ್ ನೊರಿನಾರವರು ಹೀಗೆ ಬರೆಯುತ್ತಾರೆ. ಇತ್ತೀಚೆ ಮಾತ್ರ ನಮ್ಮ ಸಮಸ್ಯೆಯನ್ನು ಗಂಭೀರ ರೀತಿಯಿಂದ ವಿಚಾರಿಸಲಾಗುತ್ತಿದೆ. ಇದೀಗ ಸರಕಾರ ಉಳಿದವುಗಳಲ್ಲಿ ಅಕ್ರಗಣ್ಯವಾಗಿದೆ. ಹೊಸ ಆಸ್ಪತ್ರೆಗಳನ್ನು ಕಟ್ಟಿಸುವ ಯೋಜನೆಗಳು ಇವೆ. ದ್ವೀಪದ ಮಧ್ಯಸ್ಥಳದಲ್ಲಿ ವಸಾಹತೊಂದನ್ನು ನಿರ್ಮಿಸುವ ಯೋಜನೆಗಳೂ ಇರುವವು. ನಮ್ಮ ಕಾಂಗ್ರೆಸ್ಸು ಪ್ರತ್ಯೇಕ ಹಣವನ್ನು ಕೊಡುವದನ್ನೇ ಇದೆಲ್ಲ ಅವಲಂಬಿಸುತ್ತದೆ.

× × ×

ಡಾ. ಬಿನೊರು ಸರ್ ಹಿ. ಬಿ. ಇನ್ನರ ರಾಜಕೀಯ... ಕುರಿತು ಬರೆಯುತ್ತ ದಕ್ಷಿಣ ರೊಡೆಶಿಯಾದ (ಅಫ್ರಿಕಾ) ಎ. ಎಚ್ ಪೈಪರು ಹೇಳುವದೇನು: "ಹದಿನೇಳು ವರ್ಷ ಕಾಲ ಏಕಾಕಿ ವೈದ್ಯಕೀಯಾಧಿಕಾರಿಯಾಗಿ ಸೇವೆ ಮಾಡಿದ ನಂತರ ಕಳೆದ ಎಪ್ರಿಲದಲ್ಲಿ ಅವರು ನಮ್ಮನ್ನು ಬಿಟ್ಟು ಹೋದರು. ಅಷ್ಟು ಕಾಲವು ಅವರಿಗೆ ಒಬ್ಬಳೇ ಒಬ್ಬಳು ಯುರೋಪಿಯನ್ ದಾದಿಯ ಅಥವಾ ಬೇರೆ ಸಹಾಯಕರ ಸಹಾಯವಿದ್ದಿಲ್ಲ. ಅವರ ಸೇವೆಯ ಕೊನೆಯ ವರ್ಷದಲ್ಲಿ ಮಾತ್ರ ತರಬೇತಿಹೊಂದಿದ ದಾದಿಯ ಮತ್ತು ಹಿತೈಷಿಯ ಸಹಾಯ ದೊರಕಿತ್ತು. ಹೀಗೆ ಸಿಬ್ಬಂದಿಯ ಕೊರತೆಯಿಂದ ಮತ್ತು ಸಹಾಯ ಮತ್ತು ಹೆಚ್ಚು ಸ್ಥಳ ಸೌಕರ್ಯ ಮತ್ತು ಸಲಕರಣೆಯ ಸೌಕರ್ಯ ಬೇಕೆಂಬ ಕೋರಿಕೆಗೆ ಯಾರೂ ಕಿವಿಗೊಡದ್ದರಿಂದಲೇ ಅವರು ರಾಜೀನಾಮೆ ಕೊಟ್ಟರು." "ಡಾ. ನೊಯಸರರು ಸ್ವೇಚ್ಛಾಪೇರಿತ ಚಿಕಿತ್ಸೆಯ ಪ್ರತಿಪಾದಕರಾಗಿದ್ದರು. ಅವರು ಸಾಧ್ಯವಾದಷ್ಟು ಸ್ವಾತಂತ್ರ್ಯ ಕೊಡಬೇಕೆನ್ನುವರು. ಯಾವುದೇ ಬಗೆಯ ಒತ್ತಾಯವನ್ನು ಅವರು ವಿರೋಧಿಸುತ್ತಿದ್ದರು. ಒತ್ತಾಯದ ಪರಿಣಾಮವಾಗಿ ರೋಗವನ್ನು ಮುಚ್ಚಿಡುವ ಪ್ರವೃತ್ತಿ ಹಬ್ಬುವದೆಂದು ಅವರ ಸಂದೇಶವಾಗಿತ್ತು. ಒತ್ತಾಯದ ಚಿಕಿತ್ಸಾ ಪದ್ಧತಿಯಿಂದ ಜಗತ್ತಿನಲ್ಲಿ ಎಲ್ಲಿಯೂ ಈ ರೋಗವನ್ನು ನಿರ್ನಾಮ ಮಾಡುವದು, ಏಕೆ, ಹೇಳಿಕೊಳ್ಳುವಷ್ಟು ಅದರ ಹಬ್ಬುಗೆಯನ್ನು ತಡೆಯುವದು ಕೂಡ ಸಾಧ್ಯವಿಲ್ಲ. ಆದರೆ ಒಪ್ಪಿಗೆಯಿಂದ ರೋಗಿಯನ್ನು ಪ್ರತ್ಯೇಕಿಸಿಟ್ಟು ಚಿಕಿತ್ಸೆಮಾಡಿದರೆ, ಹೆಚ್ಚು ರೋಗಿಗಳು ಮುಂದೆ ಬರಲು ಧೈರ್ಯವಾಡಬಹುದೆಂದು ಅವರು ವಾದಿಸುತ್ತಾರೆ. ಇಲ್ಲಿ ಅವರು ವೈದ್ಯವೃತ್ತಿ ನಡೆಸುತ್ತಿದ್ದಾಗ, ತಮ್ಮ ನೇತೃತ್ವವಾಗುವ ಮೊದಲೇ ವೈದ್ಯಕೀಯ ನಿರ್ದೇಶಕರ ಒಪ್ಪಿಗೆ ಪಡೆದ ಮೇರೆಗೆ ಕಾಯದೆಯನ್ನು ಮೂಲೆಗುಂಪು ಮಾಡಿದ್ದರು. ನಿಜವಾಗಿ ದಕ್ಷಿಣ ರೊಡೇಶಿಯಾದ ಶಾಸನ ಸಭೆಯಲ್ಲಿ "ಕುಷ್ಠನಿಗ್ರಹ" ದ ಕಾಯದೆಯೊಂದಿದೆ. ಮತ್ತು ಡಾ. ಮೊಯಸರರು ಇಲ್ಲಿ ವೈದ್ಯಕೀಯ ವೃತ್ತಿ ನಡೆಸುತ್ತಿದ್ದ ಅವಧಿಯ ಉದ್ದಕ್ಕೂ ಅದು ಜಾರಿಯಲ್ಲಿತ್ತು. ಬೇರೆ ಅನೇಕ ದೇಶಗಳ ಅನೇಕ ಕಾಯದೆಗಳ ಹಾಗೆ ಅದನ್ನು "ಔದಾರ್ಯದಿಂದ" ಪ್ರಯೋಗಿಸಲಾಗುತ್ತದೆ. ಅಂದರೆ ಅಪೂರ್ವ ಪ್ರಸಂಗಗಳಲ್ಲಿ ಅವಶ್ಯಬಿದ್ದರೆ ಮಾತ್ರ ಅವುಗಳನ್ನು ಉಪಯೋಗಿಸಲಾಗುವದು. ಆದರೆ ಜಾಬ್ಸೆಸ್ ದಿದದ ಡಾಕ್ಟರರು ... ಹೊರಟುಹೋದನಂತರ, ದಕ್ಷಿಣ ರೊಡೇಶಿಯಾಕ್ಕೆ ಒತ್ತಾಯದ ಬೇಡಿಕೆಯ ತತ್ವಗಳನ್ನು ಅನ್ವಯಿಸುವ ನಿರ್ಧಾರವಾದಂತಿದೆ. ... ವಸಾಹತಿನಲ್ಲಿ ವಾಸಿಸು...

ಅಂಟಿದ್ದರೆ ಅವರನ್ನು ಇಲ್ಲಿಗೆ ಬರಮಾಡಿ ಇಲ್ಲೇ ಇರುವಂತೆ ನಿರ್ಬಂಧಿಸಲಾಗುತಿದೆ. ಈ ವಿಷಯದಲ್ಲಿ ನೆರೆಯ ಯೂನಿಯನ್ನಿನಲ್ಲಿರುವ ರೂಢಿಯನ್ನೆ ಇಲ್ಲಿಯೂ ಬಳಕೆಗೆ ತರಲಾಗಿದೆಯೆನ್ನಬಹುದು.

"ಆದರೆ ಇಲ್ಲಿನ ಜೀವನ ಪರಿಸ್ಥಿತಿ ಪ್ರಿಟೋರಿಯಾದ ಸಮೀಪ ಇರುವ ವೆಸ್ಟಫೋರ್ಟ ಸಂಸ್ಥೆಯಲ್ಲಿರುವದಕ್ಕಿಂತ ತುಸು ಉತ್ತಮವಾಗಿದೆಯೆನ್ನಬಹುದು. ಇನ್ನೂ ಇಲ್ಲಿ ಉಳಿದಿರುವ ಅಲ್ಪ ಸ್ವಲ್ಪ ಯುರೋಪಿಯನ್ನರಿಗೆ ಪ್ರತಿಯೊಬ್ಬನಿಗೊಂದು ಬೇರೆ ಮನೆಯಿದೆ. ಒಂದೊಂದು ಮನೆಗೂ ಹೂದೋಟವಿದ್ದು ಅದು ಸ್ವಯಂಪೂರ್ಣವಾಗಿದೆ. ಆದರೆ ಇಲ್ಲಿರುವ ೬೦೦ ರಷ್ಟು ಆಫ್ರಿಕನ್ ಮೂಲ ನಿವಾಸಿ ರೋಗಿಗಳನ್ನು ಪ್ರಿಟೋರಿಯಾದಲ್ಲಿ ಮಾಡಿದಂತೆ ಒಂದೇ ವಠಾರದಲ್ಲಿ ಮುಳ್ಳು ಬೇಲಿಯ ಆವರಣದ ನಡುವೆ, ದನಗಳಂತೆ ಹಿಂಡುಗೂಡಿಸಿಲ್ಲ. ಮೂಲ ನಿವಾಸಿಗಳ ವಠಾರಗಳು ಹಳೆಯವಾಗಿದ್ದು ತಮ್ಮ ಆಯುಷ್ಯವನ್ನು ಮುಗಿಸಿದಂತೆಯೆಂಬುದೇನೋ ನಿಜ. ಅವುಗಳನ್ನು ಆಧುನಿಕ ವಸತಿಗೃಹಗಳಾಗಿ ಪುನರ್ನಿರ್ಮಾಣ ಮಾಡಬೇಕಾಗಿದೆ. ಆದರೆ ಈ ಪ್ರಶ್ನೆ ದೀರ್ಘಾವಧಿಯ ಧೋರಣೆಯಲ್ಲಿ ಆರೋಗ್ಯಶಾಖೆಯವರು ಕೈಕೊಳ್ಳಬೇಕಾಗಿದ್ದು ಅವಶ್ಯಕ ಸಾಮಗ್ರಿಗಳೂ ಕೂಲಿಕಾರರೂ ದೊರೆಯುವಂತಾದ ಮೇಲಿನ ವಿಚಾರವದು. ಈಗಿರುವ ಮೂಲ ನಿವಾಸಿಗಳ ವಸತಿಗಳು ೩ ಪ್ರಕಾರ ಅಥವಾ ದೊಡ್ಡ ಹಳ್ಳಿಗಳಲ್ಲ ವಿಂಗಡಿಸಲ್ಪಟ್ಟಿವೆ. ಚಪ್ಪರ ಹುಲ್ಲಿನದಿರುವದು. ಪ್ರತಿ ಗುಡಿಸಲಲ್ಲಿ ಇಪ್ಪತ್ತರನ್ನು ಇರಿಸಬೇಕೆಂದು ನಿಯಮ. ಆದರೆ ಸ್ಥಳಾಭಾವದಿಂದ ನಾಲ್ಕು ರೋಗಿಗಳನ್ನು ಅಪವಾದ ಪ್ರಸಂಗಗಳಲ್ಲಿ ಐವರನ್ನು ಇರಿಸುವದೂ ಉಂಟು."

ವಿದೇಶಗಳಿಂದ ಬಂದ ವರದಿಗಳನ್ನಯ ಹೊಸ ಸಲ್ಫೋನ್ ಔಷಧಗಳಿಂದ ಚಾಮುಗ್ರಾ ಎಣ್ಣೆಗಿಂತ ಹೆಚ್ಚು ಗುಣಸಿಗುವ ಆಶೆ ಮೂಡಿದೆ. "ನಿರಾಶರಿಗೆ ಆಶೆ", "ಆಶೆಯ ಪುನರುದಯ" ಎಂದು ... ಹೊರೆಸಿ ಬರೆಯುತ್ತಾರೆ. ಆದರೆ ಅಜ್ಞಾನ ಮೂಲಕವಾದ ಭಯವನ್ನು ಪರಿಹರಿಸಿದ ಹೊರತು, ಮತ್ತೂ ಕುಷ್ಠರೋಗಿಯ ಉಪೇಕ್ಷೆಯ ಸ್ಥಾನದಲ್ಲಿ ತಿಳವಳಿಕೆಯುಳ್ಳ ಶುಶ್ರೂಷೆಯ ವ್ಯವಸ್ಥೆ ಆದಲ್ಲದೆ ಕುಷ್ಠದಿಂದ ಉಂಟಾದ ಮಾನವೀ ಯಾತನೆಯನ್ನು ಯಾವ ದಿವ್ಯೌಷಧವೂ

ಪರಿಹರಿಸಲಾರದು. ಸದ್ಯಕ್ಕೆ ಜಗತ್ತಿನ ಕುಷ್ಠರೋಗಿಗಳಲ್ಲಿ ನೂರಕ್ಕೆ ೫ ಜನರಿಗಷ್ಟೇ ತಿಳವಳಿಯಿಂದ ಕೂಡಿದ ಶುಶ್ರೂಷೆ ದೊರೆಯುತಿದೆಯೆಂದು ತಿಳಿಯುತ್ತದೆ. ನೂರಕ್ಕೆ ೯೫ ರೋಗಿಗಳಿಗೆ ಚಾಲಮೂಗ್ರಾ ಎಣ್ಣೆ ಕೂಡ ಲಭಿಸದಿರುವಾಗ, ನಿಯಂತ್ರಿತ ಸ್ಥಿತಿಯಲ್ಲಿ ಪ್ರಯೋಗಿಸಬೇಕಾದ ತುಟ್ಟಿಯಾದ ವಿದೇಶಿ ಔಷಧಗಳಿಂದಾಗುವ ಪ್ರಯೋಜನ— ಅದೂ ಹಿಂದುಸ್ತಾನದಂಥ ಮೂಕ ಕೋಟಿಗೆ ... ವೈದ್ಯಕೀಯ ಅರ್ಕೆಯೂ ಸಿಗದ ದೇಶದಲ್ಲಿ,— ಹೆಸರಿಗಷ್ಟೇ ಸರಿ. ಬಡವನಿಗೆ ಲಭ್ಯವಾಗದ ಮೇಲೆ ಅಂಥ ಔಷಧಿ ಚಿಕಿತ್ಸೆಗಳ ಮಹತಿಯೇನು? ಅಮೇರಿಕನ್ ಕುಷ್ಠ ಪ್ರತಿಷ್ಠಾಪನದ ಅಧ್ಯಕ್ಷರಾದ ಪೆರೀ ಬರ್ಗೆಸರು ಕೇಳುವಂತೆ, "ಗುಣವಾದ ಮೇಲೂ ಅಜ್ಞಾನ ಮೂಲಕವಾದ ಸಾರ್ವಜನಿಕ ಸೆರೆಮನೆಯಿಂದ ಹೊರಬರಲು ರೋಗಿಗೆ ಅವಕಾಶವಿಲ್ಲದ ಮೇಲೆ ಅವನ ರೋಗವನ್ನು ಗುಣಪಡಿಸಿದ್ದರೇನು? "ರುಗ್ಣವಿಜ್ಞಾನಿ ಚಿಕಿತ್ಸಾಪದ್ಧತಿಯನ್ನು ಕಂಡು ಹಿಡಿಯಲಿ ಕೈಮಿಶಾಸ್ತ್ರಜ್ಞನು ಕುಷ್ಠದ ಕ್ರಿಮಿಯ ಸ್ವರೂಪ ಸಂಧಾನ ಮಾಡಲಿ. ಶೋಧಕನೂ ಕ್ಷೇತ್ರಕಾರ್ಯಕರ್ತನೂ ಕುಷ್ಠವನ್ನೂ ಅದರ ವಾತಾವರಣವನ್ನೂ ಅಭ್ಯಸಿಸಲಿ ಹಿತೈಷಿ ಕಾರ್ಯಕರ್ತನು ರೋಗಿಯ ಭಾರಭೀರು ಮನೋವೃತ್ತಿಯನ್ನು ಹಗುರುಗೊಳಿಸಿ ಅವನ ದೇಹಕ್ಕೂ ಆತ್ಮಕ್ಕೂ ಆದ ಧಕ್ಕೆಯನ್ನು ಗುಣಪಡಿಸಿ ಅವನನ್ನು ಬಾಳುವಯೋಗ್ಯನಿಸಿಕೊಳ್ಳಲರ್ಹನಾದ ಬಾಳುವೆಯಲ್ಲಿ ತೊಡಗಿಸಲಿ. ಆದರೆ ಪ್ರತಿಯೊಬ್ಬ ಕಾರ್ಯಕರ್ತನೂ ಅವನ ಕ್ಷೇತ್ರ ಯಾವದೇ ಇರಲಿ ಸತ್ಯದ ಸಕ್ರಿಯ ಬೆಂಬಲಿಗನಾಗಲಿ. ಏಕೆಂದರೆ ಕುಷ್ಠರೋಗದ ವಿಷಯದಲ್ಲಿ ಸತ್ಯದ, ವಸ್ತುಸ್ಥಿತಿಯ, ಪ್ರಚಾರವೊಂದರಿಂದಲೇ ಲಕ್ಷಾಂತರ ಜನರನ್ನು ಹಳೆಯ ಅಜ್ಞಾನ, ಭೀತಿ, ಪೂರ್ವಗ್ರಹಗಳ ಪಿಡಿಯಿಂದ ಮುಕ್ತಮಾಡಬಹುದಲ್ಲದೆ ಬೇರೆ ಹಾದಿಯಲ್ಲ. ಏಕೆಂದರೆ ಪ್ರಾಚೀನ ಅನ್ಯಾಯಗಳ ಪರಿಮಾರ್ಜನೆಯನ್ನು ಇಂದು ತಿಳವಳಿಕೆಯಿಂದ ಮಾಡಬೇಕೆಂದು ಕುಷ್ಠರೋಗಿ ... ಕೂಗುತಿದೆ.

ಕಸ್ತೂರಬಾ ಕುಷ್ಠರೋಗ ಕೇಂದ್ರ
ಟಿ. ಎನ್. ಜಗದೀಶನ್
ಕಂಡಾಚಿಪುರಂ ೧೩—೪—೪೭

ಅಮೇರಿಕೆಯಲ್ಲಿ ಮಗನಲಾಲ ಶಹಾರ ಕಾರ್ಯ

(೬ ನೇ ಪುಟದಿಂದ ಬಂದುದು)

ಇಪ್ಪಗಳನ್ನು ಅವರು. ಮನಸಾ ದ್ವೇಷಿಸುವರು. ಅದುದರಿಂದಲೆ ಅವರಿಗೆ ಲೀಗಿನ ಧೋರಣೆ ಹಾಗೂ ಜಿನ್ನಾ ಇವರ ಕಾರ್ಯಪದ್ಧತಿ ಸರಿದೋರುವದಿಲ್ಲ. ನಾನು ಅವರಿಗೆ ಮುಖ್ಯವಾಗಿ ಹೇಳಿದ ಮಾತುಗಳೆಂದರೆ.–

ಜಾತಿಗಳು ಊಟ ಉಡಿಗೆ ಲಗ್ನ ಮುಂತಾದವುಗಳಮಟ್ಟಿಗೆ ಇರುವವು ಹೊರತು,ಉಳಿದ ಎಲ್ಲ ವ್ಯವಹಾರಗಳಿಗೆ ಅವು ಅಡ್ಡಿ ಮಾಡುವದಿಲ್ಲ. ಎಲ್ಲ ಶಾಲೆಗಳಲ್ಲಿ ಎಲ್ಲಬಗೆಯ ವಿದ್ಯಾರ್ಥಿಗಳು ಬರುವರು. ಬ್ರಿಟಿಶರು ತಮ್ಮ ಉದ್ಯೋಗಗಳಿಗೆ ಧಕ್ಕೆ ತಗಲಬಾರದೆಂದು ನಮ್ಮಲ್ಲಿ ಉದ್ಯೋಗಗಳನ್ನು ಬೆಳೆಯಗೊಟ್ಟಿಲ್ಲ. ಹೊರತು ಗಾಂಧೀಜಿಯವರು ಅಡ್ಡಿ ಮಾಡಿಲ್ಲ. ಈಗ ೨೦ ವರ್ಷಗಳ ಹಿಂದೆ ಗಾಂಧಿಯವರೇ ಇದ್ದರೋ? ಆಗೇಕೆ ಉದ್ಯೋಗಗಳು ಬೆಳೆಯಲಿಲ್ಲ? ಹಿಂದೂ ಮುಸ್ಲಿಮರ ಪ್ರಶ್ನೆಯನ್ನು ಕೂಡ ಕಡ್ಡಿ ಇದ್ದುದನ್ನ ಗುಡ್ಡ ಮಾಡಿದವರು ಬ್ರಿಟಿಶರೇ ಹೊರತು ಮತ್ತಾರಲ್ಲ. ಸಂಸ್ಥಾನಗಳಲ್ಲಿ ಆ ಪ್ರಶ್ನೆಗೆ ಈ ಸ್ವರೂಪವು ಬಂದಿಲ್ಲ. ರೋಮನ್ ಕಾಥೊಲಿಕ್ ಪ್ರೊಟೆಸ್ಟಂಟ ಮುಂತಾದ ಧಾರ್ಮಿಕ ಬೇಧಗಳಿರುವಂತೆ ಅದೂ ಒಂದು ಧರ್ಮಭೇದ. ಅದುದರಿಂದ ರಾಜಕೀಯ ವ್ಯವಹಾರ ಕಟ್ಟಾಗಲು ಕಾರಣವಿಲ್ಲ. ಆದರೆ ಬ್ರಿಟಿಶರು ಅದರ ದುರ್ಲಾಭಪಡೆದು ಹೊಡೆದಾಟವನ್ನು ಹಚ್ಚಿರುವರು. ಅಸ್ಪೃಶ್ಯತೆ ಈಗ ಬಹು ವೇಗದಿಂದ ಮಾಯವಾಗುತಿದೆ. ೧೦-೨೦ ವರ್ಷಗಳಲ್ಲಿ ಪೂರ್ಣ ಹೋಗಿಬಿಡುವದು. ನೀವು ನಿಮ್ಮ ನಿಗ್ರೋ ಪ್ರಶ್ನೆಯನ್ನು ಮಾತ್ರ ಹಾಗೆಯೆ ಇಟ್ಟುಕೊಂಡು ನಮಗೆ ಹೆಸರು ಇಡಲು ಬರಬೇಡಿರಿ. ಈಗಾಗಲೆ ನಮ್ಮ ಪ್ರಾಂತಿಕ ಹಾಗೂ ಮಧ್ಯವರ್ತಿ ಮಂತ್ರಿಮಂಡಲಗಳಲ್ಲಿ ಅಸ್ಪೃಶ್ಯಮಂತ್ರಿಗಳಿಗೆ ನಾವು ಸ್ಥಾನಗಳನ್ನು ಕೊಟ್ಟುಬಿಟ್ಟಿದ್ದೇವೆ. ನೀವು ಒಬ್ಬ ನಿಗ್ರೋನಿಗಾದರೂ ಮಂತ್ರಿಪದವನ್ನು ಕೊಟ್ಟಿರುವಿರೋ? ಅಂದಬಳಿಕ ನೀವು ಸುಧಾರಿಸಿದವರೆಂದು ಜಂಭಕೊಚ್ಚುವದೇಕೆ?

ಈ ರೀತಿ ನಾನು ಅನೇಕಮಾತುಗಳನ್ನು ಆಗಿಂದಾಗಲೆ ಹೇಳಿ ಬಿಡುವುದರಿಂದ ಅವರು ತಲೆದೂಗಬೇಕಾಗುತಿತ್ತು.

ಪ್ರಶ್ನೆ — ಒಟ್ಟಿಗೆ ಅಲ್ಲಿಯ ಜೀವನ ಮುಂತಾದವುಗಳು ಸದ್ಯಕ್ಕೆ ಹೇಗೆ ಇವೆ?

ಉತ್ತರ — ಅಲ್ಲಿ ಒಬ್ಬ ಮುಸುರೆ ತಿಕ್ಕುವವಳು ಸಹ ದಿನಕ್ಕೆ ಮೂವತ್ತು ರೂಪಾಯಿ ಗಳಿಸುವಳು; ಗಡಿಯಾರ ಹಚ್ಚಿ ಕೆಲಸಕ್ಕೆ ಬಂದು ಮತ್ತೆ ಮುಂದಿನ ಮನೆಗೆ ಹೋಗುವಳು. ಎಲ್ಲಿಯೂ ಅತಿಶಯ ಉದ್ಯೋಗ ಶೀಲರು. ಅವರಷ್ಟು ನಾವು ದುಡಿಯುವದಿಲ್ಲ ಎಂದು ಹೇಳುವದಕ್ಕಿಂತ ಅವರ ಮುಂದೆ ನಮ್ಮ ದುಡಿತ ಏನೂ ಅಲ್ಲ ಎಂದು ಹೇಳುವದೇ ಲೇಸು. ಯೋಗ್ಯರೀತಿ ಸಂಸಾರ ಮಾಡುವ ಆರ್ಥಿಕ ಶಕ್ತಿ ಇಲ್ಲದೆ ಅವರು ಲಗ್ನ ಮಾಡಿಕೊಳ್ಳುವದಿಲ್ಲ. ಮಕ್ಕಳನ್ನು ಪರಿಪಾಲಿಸುವ ಸಾಮರ್ಥ್ಯ ಬಾರದೆ ಅವರು ಮಕ್ಕಳನ್ನು ಹಡೆಯುವದಿಲ್ಲ. ವಯಸ್ಸಿಗೆ ಬಂದೊಡನೆ ಮಕ್ಕಳು ಸ್ವತಃ ಗಳಿಸಲು ಪ್ರಾರಂಭಮಾಡುವರು. ಹೀಗಾಗಿ ಅಲ್ಲಿ ನಿರುದ್ಯೋಗಿಗಳು, ಒಬ್ಬರ ಮೇಲೊಬ್ಬರು ಅವಲಂಬಿಸುವವರು, ಹರಟೇ ಕೊಚ್ಚಿ ಸಮಯವನ್ನು ಹಾಳು ಮಾಡುವವರು ದೊರೆಯುವದಿಲ್ಲ!

ಪ್ರಶ್ನೆ — ಅಲ್ಲಿ ಎಲ್ಲಕ್ಕೂ ಮಹತ್ವದ ಮಾತು ಯಾವುದು?

ಉತ್ತರ — ಹಿಂದುಸ್ತಾನದ ದೃಷ್ಟಿಯಿಂದ, ವಿಶೇಷತಃ ಕರ್ನಾಟಕದ ದೃಷ್ಟಿಯಿಂದ ಅಲ್ಲಿಯ ಟೀ. ವ್ಹಿ. ಏ. ಅಂದರೆ ಟೆನೆಸ್ಸಿ ವ್ಯಾಲಿಯ ಕೆಲಸವು ಅದ್ಭುತವಾಗುವದು. ನದಿಯ ನೀರನ್ನು ಅಲ್ಲಲ್ಲಿ ಕಟ್ಟಿ ವಿದ್ಯುತ್ತು ಹಾಗೂ ನೀರನ್ನು ಎಲ್ಲೆಲ್ಲಿಯು ಸುತ್ತಿಸಿ ಅದರೊಂದು ನಂದನವನವನ್ನು ನಿರ್ಮಿಸಿರುವರು. ಕರ್ನಾಟಕದಲ್ಲಿಯೂ ಹಾಗೆ ಮಾಡುವದು ದುಃಸಾಧ್ಯವಿಲ್ಲ. ಆದರೆ ಒಳಜಗಳ ಸುಗ್ಗಿ, ಕ್ಷುದ್ರದೃಷ್ಟಿ, ಸಂಕುಚಿತ ಭಾವನೆಗಳು ಇರುವವರೆಗೆ, ಹಳೇ ದೃಷ್ಟಿಯಿಂದಲೆ ಎಲ್ಲವನ್ನು ನೋಡುವ ಪದ್ಧತಿ ಜೀವಂತವಿರುವವರೆಗೆ ಇಂಥ ಯಾವದೆ ಯೋಜನೆ ಯಶಸ್ವಿಯಾಗುವದು ಕಠಿಣ.

ಆದರೆ ಈ ಹೊತ್ತಿಲ್ಲ ನಾಳೆ ಪರಿಸ್ಥಿತಿ ಸುಧಾರಿಸಬಹುದು ಎಂಬ ಆಶೆಯಿಂದಲೆ ನಾವು ಮುಂದೆ ಹೆಜ್ಜೆ ಇಡುತ್ತ ಹೋಗಬೇಕು.

ಡಾ. ಎಂ. ಆರ್. ಜಯಕರರು ಘಟನಾ ಸಮಿತಿಯ ಸದಸ್ಯತ್ವಕ್ಕೆ ರಾಜೀನಾಮೆ ಕೊಟ್ಟಿದ್ದಾರೆ. ಇದು ನಿಜವೆಂದು ಪ್ರಸಿದ್ಧಿಸಲಾಗಿದೆ.

ಕರ್ನಾಟಕ

ಧಾರವಾಡ

ಜಿಲ್ಹೆಯಲ್ಲಿಯ ಚಹಾ ಫಳಾರದ ಅಂಗಡಿಗಳಲ್ಲಿ ಹರಿಜನರಿಗೆ ಪ್ರವೇಶ ಕೊಡದಿದ್ದವರಿಗೆ ಸಕ್ಕರೆ ಪರಮಿಟ್ಟು ಕೊಡಬಾರದೆಂದು ಎಲ್ಲ ತಾಲೂಕ ಮಾಮಲೇದಾರ ಮತ್ತೂ ಮಹಾಲಕರಿಯವರಿಗೆ ತಿಳಿಸಲಾಗಿದೆಂದು ಧಾರವಾಡ ಜಿಲ್ಹಾ ಕಲೆಕ್ಟರರಾದ ಶ್ರೀ ಎ. ಈ. ಶೀಲ್ಡ್ಸ ಸಾಹೇಬರು ಪ್ರಕಟಿಸುತ್ತಾರೆ.

ಗದಗ ಮುನಿಸಿಪಾಲಿಟಿಯ ಅಧ್ಯಕ್ಷರ ಆಯ್ಕೆ ೫ ನೇ ತಾರೀಕಿಗೆ ಜರಗುವುದಿದ್ದು ಅದಕ್ಕೆ ಸಿ. ಎಫ್. ಅಂಗಡಿ ಮತ್ತು ಸಿ. ಬಿ. ಹೊನಗುಡ್ಡಿಯವರು ಸ್ಪರ್ಧಿಸುವರು.

ಹಾನಗಲ್ಲ ತಾಲೂಕಿನ ಮಳಧಳ್ಳಿಯಲ್ಲಿ ಅಕಸ್ಮಾತ್ ಬೆಂಕಿಹತ್ತಿ ಎಂಟು ಮನೆಗಳು ಸುಟ್ಟು ಹತ್ತಾರುಸಾವಿರರೂಪಾಯಿ ಹಾನಿಯಾಗಿದೆ. ಬೆಂಕಿಯಲ್ಲಿ ಸುಟ್ಟು ಒಂದು ಮಗವೂ ಸತ್ತಿತು. ತಾಲೂಕ ಶಿರಸ್ತೆದಾರು ಪರಿಸ್ಥಿತಿ ಪರಿಶೀಲಿಸಿ ನಾಗರಿಕರಿಂದ ಕಾಳು ಬಟ್ಟೆಗಳನ್ನು ಕೂಡಿಸಿ ನೆರವಾಗಲಿರುವರು.

ಧಾರವಾಡದಲ್ಲಿ ಅಕ್ಷಯ್ಯ ತೃತೀಯೆಯ ದಿನ ಶ್ರೀ ಮಧ್ವವಿದ್ಯಾಪೀಠ ಎಂಬ ಸಂಸ್ಥೆ ಶ್ರೀ ಕೊರ್ಲಹಳ್ಳಿ ಆಚಾರ್ಯರ ಹಸ್ತದಿಂದ ಆರಂಭವಾಯಿತು.

ಮುಮ್ಮಿಗಟ್ಟಿಯ ಕಾಂಗ್ರೆಸ ಕೆಲಸಗಾರರಾದ ಮರಿತಮ್ಮನವರ ಕೊಲೆಯಾದ ಸಂಬಂಧದಲ್ಲಿ ಪೋಲೀಸರು ಮೂವರನ್ನು ಸೆರೆಹಿಡಿದಿರುವರು.

ಹರಪನಹಳ್ಳಿಯಲ್ಲಿ ಕೂಡಲಿರುವ ಕನ್ನಡ ಸಾಹಿತ್ಯ ಸಮ್ಮೇಲನದ ಅಂಗವಾಗಿ ನಡೆಯುವ ವಿಜ್ಞಾನ ಗೋಷ್ಠಿಯನ್ನು ಶ್ರೀ ಜಿನರಾಜ ಹೆಗಡೆಯವರು ಉದ್ಘಾಟಿಸುವರು.

ಧಾರವಾಡ ಶ್ರೀ ವಿಠ್ಠಲ ಮಂದಿರದಲ್ಲಿ ಈಗ ಮೂರು ತಿಂಗಳಿಂದ ಸಮಸ್ತ ಭಾರತ ಪ್ರವಚನ ಸಾಗಿಸಿದ ಶ್ರೀ ಹುಚ್ಚಾಚಾರ್ಯ ಕಿತ್ತೂರ ಇವರಿನ್ನು ಸನ್ಮಾನ ಮಾಡಲು ಶ್ರೀ ಕೃಷ್ಣರಾವ ಮುದವೀಡು ಇವರ ಅಧ್ಯಕ್ಷತೆಯಲ್ಲಿ ಸಭೆ ಸೇರಿತ್ತು. ಅನೇಕರು ಭಾಷಣ ಮಾಡಿ ಆಚಾರ್ಯರ ಪ್ರವಚನ ಸಾಮರ್ಥ್ಯವನ್ನು ಹೊಗಳಿದರು. ಬಳಿಕ ಪ್ರವಚನಪಟು ಎಂಬ ಬಿರುದನ್ನು ಅವರಿಗೆ ದಯಪಾಲಿಸಲಾಯಿತು. ರಜತ ಪದಕವೊಂದು ಅವರಿಗೆ ಕೊಡಲಾಯಿತು.

ಬೆಳಗಾವಿ

ಬೆಳಗಾವಿಯ ಪ್ರಸಿದ್ಧ ವ್ಯಾಪಾರಿಗಳಾದ ಶ್ರೀ. ಎಸ್. ಪಿ. ಶೆಟ್ಟಿ ಇವರು ತಮ್ಮ ಮಾರಾಟದ ಮಾಸಿಕ ಪತ್ರಿಕೆಗಳನ್ನು ಸರಿಯಾಗಿ ಕಲೆಕ್ಟರರ ಕಡೆಗೆ ಕಳಿಸಲಿಲ್ಲೆಂದು ಅವರ ಮೇಲೆ ಖಟ್ಲೆ ಹಾಕಲಾಗಿತ್ತಷ್ಟೆ. ಆದರೆ ಅವರು ನಿರ್ದೋಷಿಗಳೆಂದು ಕೋರ್ಟಿನವರು ತೀರ್ಪು ಕೊಟ್ಟಿರುವರು.

ಕಿತ್ತೂರಿನ ಆಸ್ಪತ್ರೆಗೆ ಸ್ವತಂತ್ರ ಕಟ್ಟಡ ಕಟ್ಟಲು ಊರಜನರಿಂದ ೫೦೦೦ ರೂ.ವಂತಿಗೆ ಕೂಡಿಸಿ ಡಾಕ್ಟರರು ಕಟ್ಟಡ ಕೆಲಸ ಪ್ರಾರಂಭಿಸಿದ್ದಾರೆ. ಶ್ರೀ ಶಿವಪುತ್ರಪ್ಪಾ ಮುತ್ತೂರರು ೧೮ ಎಕರೆ ಹೊಲ ಕೊಟ್ಟಿದ್ದಾರೆ. ಹಳ್ಳಿಗರು ಸುಮಾರು ೩೦೦೦ ರೂಪಾಯಿಗಳ ಕೆಲಸ ಮಾಡಿದ್ದಾರೆ. ಕಟ್ಟಡ ಮುಕ್ಕಾಲು ಪಾಲು ಮುಗಿದಿದೆ.

ಕನ್ನಡ ಸಂಸ್ಥಾನ

ಚಿತ್ರದುರ್ಗ ಜಿಲ್ಹಾ ಬೋರ್ಡ ಚುನಾವಣೆಯಲ್ಲಿ ಕಾಂಗ್ರೆಸ್ಸಿಗೆ ಪ್ರಚಂಡ ವಿಜಯ ದೊರೆತಿದೆ. ಸ್ಪರ್ಧಿಸಿದ ೧೦ ಸ್ಥಳಗಳಲ್ಲಿ ಕಾಂಗ್ರೆಸ್ಸು ೯ ಸ್ಥಳಗಳನ್ನು ಪಡೆದಿದೆ.

ಮಿರಜಿಯಲ್ಲಿ ೨೩ ನೇ ತಾರೀಕಿನ ಹಿಂದೂ ಮುಸಲ್ಮಾನ ದೊಂಬಿ ಸಂಭವಿಸಿತು. ಇದರ ನಿಮಿತ್ತ ವನಶಿಗ್ಲಿಯಲ್ಲಿ ೨೯ ನೇ ತಾರೀಕು ಸಂಪೂರ್ಣ ಹರತಾಳ ಆಚರಿಸಲ್ಪಟ್ಟಿತು. ಗಾಂಧೀಜಿ ಮತ್ತು ಜಿನ್ನಾರವರು ಜಾತೀಯ ಶಾಂತಿ ಸೌಹಾರ್ದದ ಬಗ್ಗೆ ಹೊರಡಿಸಿದ ಪ್ರಕಟನೆಯನ್ನು ಸ್ವಾಗತಿಸಲಾಯಿತಲ್ಲದೆ ಅದರಂತೆ ಎಲ್ಲರೂ ಶಾಂತಿಯನ್ನು ಪ್ರಸ್ಥಾಪಿಸಬೇಕೆಂದು ಕೇಳಿಕೊಳ್ಳಲಾಯಿತು.

ದಾವಣಗೆರೆ ತಾಲೂಕು ವಾಳಲ್ಕೇರೆ ಗ್ರಾಮದ ಹರಿಜನಕೇರಿಗೆ ಹತ್ತು ದಿನಗಳ ಹಿಂದೆ ಬೆಂಕಿ ತಗಲಿ ಎಲ್ಲ ಮನೆಗಳು ಸುಟ್ಟು ತುಂಬ ನಷ್ಟವಾಗಿರುತ್ತದೆ. ಸುಮಾರು ೧೫೦ ಜನರು ವಾಸಕೆ ಮನೆಗಳಿಲ್ಲದೆ ಬಹಳ ಪರಿತಪಿಸುತಿದ್ದಾರೆ. ಹರಿಜನ ಬಾಂಧವರಿಗೆ ಎಲ್ಲ ರೀತಿಯಿಂದ ಸಹಾಯ ಸಲ್ಲಿಸುವದು ಅವಶ್ಯವಾಗಿದೆ.

ಸಾಂಗಲಿಯಲ್ಲಿ ೨೩ ನೇ ತಾರೀಕು ರಾತ್ರಿ ಇರಿತದ ಪ್ರಯೋಗವೊಂದು ನಡೆಯಿತು. ಅದಕ್ಕಾಗಿ ಜಿಲ್ಹಾ ಮ್ಯಾಜಿಸ್ಟ್ರೇಟರು ೧೪೪ ನೇ ಕಲಮ್ಮು ಪ್ರಯೋಗಿಸಿ ಮೆರವಣಿಗೆಗಳನ್ನು ಪ್ರತಿಬಂಧಿಸಿರುವರು. ಆಯುಧಗಳನ್ನು ಹಿಡಿದುಕೊಂಡು ಯಾರೂ ಅಡ್ಡಾಡಬಾರದೆಂದೂ ವಿಧಿಸಲಾಗಿದೆ.

ತುಮಕೂರ ಜಿಲ್ಹಾ ಕಾಂಗ್ರೆಸ ಸಮಿತಿಯ ಕಾರ್ಯದರ್ಶಿ ಶ್ರೀ ಆರ್. ಎನ್. ಆರಾಧ್ಯ ಇವರ ವಿವಾಹ ಬಾಗಲಕೋಟೆಯ ಕುಮಾರಿ ಸುಲೋಚನಾದೇವಿಯೊಡನೆ ಜರಗಿತು. ವಧುವು ತಾನು ಸತ್ಯಾಗ್ರಹದಲ್ಲಿ ಭಾಗ ವಹಿಸುವದಾಗಿ ಲಗ್ನ ಮಂಟಪದಲ್ಲಿಯೇ ಸಾರಿ ಪ್ರತಿಜ್ಞಾ ಪತ್ರಿಕೆಗೆ ಸಹಿ ಮಾಡಿದಳು.

ನಿಜಾಮ ಸರಕಾರದವರು ಯುದ್ಧೋತ್ತರ ಯೋಜನೆಯೆಂದು ೬೦೦ ಮೈಲು ರೇಲ್ವೆಯನ್ನು ಹೊಸದಾಗಿ ಹಾಕುವವರಿದ್ದಾರೆ. ೫ ವರ್ಷಗಳ ಯೋಜನೆ ಇದಾಗಿದ್ದು ೮ ಕೋಟಿ ರೂಪಾಯಿ ವೆಚ್ಚದ ಅಂದಾಜಿದೆ.

ಅಥಣಿ ನಗರ ಸಭೆಯ ಸಭೆ ಸೇರಿ ಒಂದು ವರುಷದ ಮಟ್ಟಿಗೆ ಶ್ರೀ ಎನ್. ಎ. ವಸ್ತ್ರದ ಮ್ಯಾನೇಜಿಂಗ ಕಮೀಟಿ, ಪಿ. ಬಿ. ಭೋಸಲೆ ಜಕಾತ್ಕಮೀಟಿ, ಎಸ್. ಆರ್. ಶಹರೆ ಸ್ಯಾನಿಟರಿ ಕಮೀಟಿ, ಮೀರಾಸಾ ದ್ರಾಕ್ಷಿ ಡಿಸ್ಪೆನ್ಸರಿ ಕಮೀಟ್ಯ ಚೇರಮನ್‌ರನ್ನಾಗಿ ಆರಿಸಲಾಯಿತು.

ಹಿಂದುಸ್ತಾನದಲ್ಲಿರುವ ಪಾಂಡಿಚೇರಿ, ಮಾಹೆ ಮೊದಲಾದ ಚಿಕ್ಕ ಫ್ರೆಂಚ ಭಾಗಗಳನ್ನು ಪಾಂಡಿಚೇರಿಯಲ್ಲಿ ಪ್ರಾರಂಭಿಸಲ್ಪಡುವ ಫ್ರೆಂಚ ವಿಶ್ವ ವಿಶ್ವವಿದ್ಯಾಲಯದ ಖಾಸಗಿ ಆಸ್ತಿಯನ್ನಾಗಿ ಮಾಡಿ ಫ್ರೆಂಚ ಭಾರತದ ಸಮಸ್ಯೆಯನ್ನು ಬಿಡಿಸುವ ಹೊಸ ಯೋಜನೆಯೊಂದು ಫ್ರೆಂಚ ಸರಕಾರದ ತಲೆಯಲ್ಲಿದೆಯಂತೆ.

ವಿಜಾಪುರ

[illegible] ಅನಗವಾಡಿ [illegible] ಹಳ್ಳಿಗಳು ಆ ಹಳ್ಳಿಗಳಿಗೆ ಬಸ್ಸು [illegible] ನಾದ ಮೇಲೆ ಬಂದೇ ಇಲ್ಲ. [illegible] ಹಳ್ಳಿಗಳಿಗೆ ಕೊಟ್ಟಿಲ್ಲ. ಈ ಬಗ್ಗೆ [illegible] ಗಳು ವಿಚಾರ ಮಾಡಬೇಕಾಗಿ [illegible] ಕೇಳಿಕೊಳ್ಳುತ್ತಾರೆ.

ಬಾಗಲಕೋಟೆಯ ಗುಜರಾಥಿ ಶಾಲೆಯ ಕಟ್ಟಡದ ಅನಾವರಣ ಸಮಾರಂಭ [illegible] ನೇ [illegible] ಮಾನ್ಯಮಂತ್ರಿವರ್ಯ ಶ್ರೀ ಕುಂಕಲಾಲ [illegible] ಇವರ ಹಸ್ತದಿಂದ ಜರಗುವದು.

ವಿಜಾಪೂರ ಮುನಸಿಪಾಲಟಿ [illegible] ನಾಮಪತ್ರ ಕೊಡುವ ಕಾಂಗ್ರೆಸ್ಸಿನ [illegible] ಚುನಾವಣೆಯನ್ನು ಹೋರಾಡಲು [illegible] ಅರ್ಜಿಗಳು ಬಾರದ್ದರಿಂದ ಕಾಂಗ್ರೆಸ್ಸಿನವರು ಚುನಾವಣೆ ಹೋರಾಡದಾರದೆಂದು ನಿರ್ಧರಿಸಿದ್ದಾರೆ.

ಅಹಮದಾಬಾದ ಗುಜರಾಥ ಕಾಲೇಜಿನ ಗಣಿತ ಪ್ರಾಧ್ಯಾಪಕರಾದ ಪ್ರೊ. ರಾಘವೇಂದ್ರ ರಾಮಾಚಾರ್ಯ ಉಮರ್ಜಿ ಇವರು ಕೇಂದ್ರ ಸರಕಾರದಿಂದ ಸಂಖ್ಯಾ ಶಾಸ್ತ್ರದ ಅಭ್ಯಾಸದ ಸಲುವಾಗಿ ಕೋಲಂಬಿಯಾ ವಿಶ್ವವಿದ್ಯಾಲಯಕ್ಕೆ ಹೋಗುವವರಿದ್ದಾರೆ. ಇವರಿಗೆ ಕೇಂದ್ರ ಸರಕಾರದಿಂದ ಶಿಷ್ಯವೃತ್ತಿ ದೊರೆತಿದೆ. ಅವರು ಅಪ್ಪ ಕನ್ನಡಿಗರಿದ್ದು ಬಾಗಲಕೋಟೆಯವರಿರುವರು.

ಹರಪನಹಳ್ಳಿ ಸಾಹಿತ್ಯ ಸಮ್ಮೇಲನದ ಕಾರ್ಯಕ್ರಮ

ಹರಪನಹಳ್ಳಿಯ ಸಮ್ಮೇಲನ ಸ್ವಾಗತ ಸಮಿತಿಯ ಕಾರ್ಯದರ್ಶಿಗಳು ಕೆಳಗಿನ ಪ್ರಕಟನೆ ಹೊರಡಿಸಿದ್ದಾರೆ.

೬—೫—೪೭ ಮಂಗಳವಾರ ಸಾಯಂಕಾಲ ೬—೩೦ ಕ್ಕೆ ಸಮ್ಮೇಳನಾಧ್ಯಕ್ಷರ ಮೆರವಣಿಗೆ.

೭–೫–೪೭ ಬುಧವಾರ ಉದಯ ೮–೦ ಧ್ವಜಾರೋಹಣ ೮–೩೦ ವಸ್ತು ಪ್ರದರ್ಶನ ತೆರೆಯುವುದು ೮–೪೫ ಅಧಿವೇಶನ ಪ್ರಾರಂಭ ೧೦—೧೫ ವಿಷಯ ನಿಯಾಮಕ ಸಮಿತಿಯ ಆಯ್ಕೆ

ಮಧ್ಯಾಹ್ನ ೩—೩೦ ಸಾಹಿತ್ಯಗೋಷ್ಠಿ ಪ್ರಬಂಧ ವಾಚನ ಸ್ಪರ್ಧೆಗಳು. ರಾತ್ರಿ ೯—೩೦ ವಿನೋದಾವಳಿ.

೮—೫—೪೭ ಗುರುವಾರ ಉದಯ ೮—೦ ಧ್ವಜವಂದನೆ ೮-೧೫ ವಿಜ್ಞಾನ ಗೋಷ್ಠಿ ೯-೩೦ ಜನಪದ ಸಾಹಿತ್ಯ ಗೋಷ್ಠಿ.

ಮಧ್ಯಾಹ್ನ ೨—೦ ಲೇಖಕರ ಪರಸ್ಪರ ಪರಿಚಯ [ಪ್ರತ್ಯೇಕ ಸ್ಥಳದಲ್ಲಿ] ೩-೩೦ ಮಹಿಳಾ ಗೋಷ್ಠಿ ೩-೩೦ ಪರಿಷತ್ತಿನ ಸಕಲ ಸದಸ್ಯರ ವಿಶೇಷ ಅಧಿವೇಶನ ಮತ್ತು ವಾರ್ಷಿಕ ಅಧಿವೇಶನ [ಪ್ರತ್ಯೇಕ ಸ್ಥಳದಲ್ಲಿ] ೫.೩೦ ಸಾಹಿತ್ಯ ಗೋಷ್ಠಿ. ರಾತ್ರಿ ವಿನೋದಾವಳಿ.

೯—೫—೪೭ ಶುಕ್ರವಾರ ಉದಯ ೮—೩೦ ಧ್ವಜವಂದನೆ ೮–೧೫ ವಿಶ್ವವಿದ್ಯಾಲಯದ ವಿಷಯದ ಭಾಷಣಗಳು ೯—೪೫। "ಶ್ರೀ" ಯವರ ಸ್ಮಾರಕ ವಿಚಾರ (ಬಹಿರಂಗ ಅಧಿವೇಶನ)

ಮಧ್ಯಾಹ್ನ ೩-೩೦ ಲಿಪಿ ಸಂಸ್ಕರಣದ ವಿಚಾರ ಬಹಿರಂಗ ಅಧಿವೇಶನ ೭–೦ ಅಧ್ಯಕ್ಷರ ಸಮಾರೋಪದ ಭಾಷಣಗಳು ವಿವಿಧ ಪ್ರದರ್ಶನಗಳು.

ರಾತ್ರಿ ೯—೩೦ ವಿನೋದಾವಳಿ.

ಕಾಗದ ನಿಯಂತ್ರಣ ತೆಗೆಯಲ್ಪಡುವದಿಲ್ಲ
ಸರಕಾರದ ನಿರ್ಣಯ

ಕಾಗದದ ಕೊರತೆ ಇನ್ನೂ ಇರುವದರಿಂದ ಹಾಗೂ ಕೂಲಿಕಾರರ ಅಭಾವದಿಂದ ಕೆಲವು ಕಾಗದ ಗಿರಣಿಗಳ ಕೆಲಸಕ್ಕೆ ಅಡ್ಡಿಯಾಗಿರುವದರಿಂದ ವೃತ್ತ ಪತ್ರ ಕಾಗದದ ಹೊರ್ತು ಉಳಿದ ಕಾಗದದ ಮೇಲಿನ ನಿಯಂತ್ರಣವನ್ನು ಹಾಗೆಯೇ ಇಡಬೇಕೆಂದು ಹಿಂದುಸ್ತಾನ ಸರಕಾರದವರು ನಿರ್ಧರಿಸಿರುವರು.

ಪ್ರಸ್ತುತ ಪ್ರಸಂಗ

ವರ್ಹಾಡದ ಪ್ರಶ್ನೆ

ವರ್ಹಾಡದ ಮೇಲೆ ನಿಜಾಮರು ಪ್ರಭುತ್ವ ಬೇಕೆನ್ನುವ ಒಂದು ಹಳೆಯ ವಿವಾದವೊಂದು ತಲೆದೋರಿದೆ; ಇದು ಗಮನಕ್ಕೆ ಬರತಕ್ಕದು. [illegible]

ನಿಜಾಮರು ಒಂದುವರೆ ಶತಮಾನದ ಹಿಂದೆ ವರ್ಹಾಡ ಪ್ರಾಂತದ ಉತ್ಪನ್ನವನ್ನು, ವಿದೇಶಿ ಶತ್ರುಗಳನ್ನು ಎದುರಿಸಲು ಸೈನ್ಯವನ್ನಿಟ್ಟು ಬ್ರಿಟಿಷರಿಗೆ ಸಹಾಯ ಮಾಡುವ ಸಲುವಾಗಿ ಈಸ್ಟ್ ಇಂಡಿಯಾ ಕಂಪನಿಯವರಿಗೆ ಬಿಟ್ಟುಕೊಡಲಾಗಿತ್ತು. ಅಂತರಿಕ ಶಾಂತಿಯನ್ನು ಕಾಯುವದು ನಿಜಾಮರಿಗೆ ಸೇರಿತ್ತು. ಕಳೆದ ಶತಮಾನದ ಮಧ್ಯದಲ್ಲಿ ಬ್ರಿಟಿಷ ಸರಕಾರ ಆಡಳಿತೆ ವಹಿಸಿಕೊಂಡ ಮೇಲೆ ೧೯೦೩ ರಲ್ಲಿ ವರ್ಹಾಡವನ್ನು ನಿಜಾಮರಿಗೆ ತಿರುಗಿ ಕೊಡುವದು ಸಾಧ್ಯವಿಲ್ಲೆಂದು ಭಾರತ ಮಂತ್ರಿ ಲಾರ್ಡ ಸ್ಯಾಲಿಸಬರಿಯವರು ಹೇಳಿದರು. ಬ್ರಿಟಿಷರು ಅರ್ಧಶತಕಕ್ಕಿಂತ ಹೆಚ್ಚು ಕಾಲ ಆ ಪ್ರಾಂತವನ್ನು ಸರಿಯಾಗಿ ಆಳಿದ್ದರಿಂದ ಅವರಿಗೆ ಅದರ ಹಕ್ಕಿದೆ ಎಂದು ವಾದವಿತ್ತು. ಈ ಶತಮಾನದ ಆದಿಯಲ್ಲಿ ಲಾರ್ಡ ಕರ್ಝನ್ನರು ವರ್ಹಾಡದ ಆಡಳಿತೆಯ ಬಗ್ಗೆ ಮಾರಿಕೊಳ್ಳಲು ನಿಜಾಮರಿಗೆ ಕಾರಣವಿದೆಯೆಂದೊಪ್ಪಿಕೊಂಡು ಶಾಶ್ವತ ಲಾವಣಿಯಂತೆ ಅದನ್ನು ಬ್ರಿಟಿಷ ಸರಕಾರಕ್ಕೆ ಕೊಡಬೇಕೆಂದು ಸೂಚಿಸಿದರು. ಇದಕ್ಕೆ ನಿಜಾಮರು ಮೊದಲು ಒಪ್ಪದಿದ್ದರೂ ಮುಂದೆ ಕರ್ಝನ್ನರು ಸ್ವತಃ ಹೈದರಾಬಾದಿಗೆ ಬಂದಾಗ, ವರ್ಹಾಡ ತಮಗೆ ತಿರುಗಿ ಸಿಗುವ ಸಂಭವವೇ ಇಲ್ಲವೆಂದು ಬ್ರಿಟಿಷರು ಆಶ್ವಾಸನ ಕೊಟ್ಟರೆ ಶಾಶ್ವತ ಲಾವಣಿ ಬರೆಸಿಕೊಡಲು ಸಮ್ಮತಿಸಿದರು. ಹಾಗೆ ವಚನ ಕೊಟ್ಟ ಮೇಲೆ ಲಾವಣಿ ಬರೆಸಿ ಕೊಡಲಾಯಿತು. ನಿಜಾಮರು ಇದರಿಂದ ಸಂತುಷ್ಟರಾದರೆಂದು ಕರ್ಝನ್ನರು ಹೇಳಿದರೂ ಅದನ್ನು ತಿರುಗಿ ಪಡೆಯಲು ನಿಜಾಮರು ಹೆಣಗುತ್ತಲೆ ಇದ್ದರು. ಹತ್ತು ವರ್ಷಗಳಿಗೆ ವರ್ಹಾಡದ ಮೇಲೆ ನಿಜಾಮರ ಔಪಚಾರಿಕವಾಗಿ ಪ್ರಭುತ್ವವನ್ನೊಪ್ಪುವ ಒಪ್ಪಂದಕ್ಕೆ ಸಹಿಯಾಯಿತು. ಮತ್ತು ನಿಜಾಮರ ಉತ್ತರಾಧಿಕಾರಿಯನ್ನು ವರ್ಹಾಡದ ರಾಜಕುಮಾರನೆಂದು ಕರೆಯಲು ಮತ್ತು ವರ್ಹಾಡದ ಆಡಳಿತೆಯ ಬಗ್ಗೆ ಸಲಹೆ ಕೊಡಲು ಸಾರ್ವಭೌಮರಲ್ಲಿ ನಿಜಾಮರ ಪ್ರತಿನಿಧಿಯನ್ನಿಡಲು ಒಪ್ಪಲಾಯಿತು. ಇದೀಗ ನಿಜಾಮರ ಬೇಡಿಕೆಯ ಮೂಲ.

ಘಟನಾ ಸಮಿತಿಯಲ್ಲಿ ಸಂಸ್ಥಾನಗಳು

ಘಟನಾ ಸಮಿತಿಯಲ್ಲಿ ಸೇರಬೇಕೋ ಬಿಡಬೇಕೋ ಎಂಬ ನಿರ್ಣಯವನ್ನು ಅಧಿಕಾಂಶ ಸಂಸ್ಥಾನಗಳು ಇನ್ನೂ ಮಾಡಿಲ್ಲವಾದರೂ, ಅವರೆಲ್ಲರಿಗೆ ಸೇರಿದ ಒಟ್ಟು ೯೩ ಸ್ಥಾನಗಳನ್ನು ಈಗಾಗಲೆ ಹಂಚಿ ಹಾಕಲಾಗಿದೆ. ೯೩ ರಲ್ಲಿ ೬೦ ಸ್ಥಾನಗಳು ದೊಡ್ಡ ೨೦ ಸಂಸ್ಥಾನಗಳಿಗೆ ಸೇರಿ ಉಳಿದವು ಚಿಕ್ಕ ಸಂಸ್ಥಾನಗಳ ಪಾಲಿಗೆ ಬರುವವು. ಸ್ಥಾನಗಳ ಹಂಚುವಿಕೆ ಹೀಗಿದೆ:—

ಹೈದರಾಬಾದ	[illegible]
ಮೈಸೂರು	೭
ತಿರುವಾಂಕೂರು	೬
ಕಾಶ್ಮೀರ †	೪
ಗ್ವಾಲಿಯರ*	೪
ಬರೋಡಾ*	೩
ಜಯಪುರ*	೩
ಉದಯಪುರ*	೨
ಜೋಧಪುರ*	೨
ಪತಿಯಾಲಾ*	೨
ರೇವಾ*	೨
ಕೊಚ್ಚಿ*	೧
ಬಿಕಾನೇರ*	೧
ಅಲ್ವಾರ	೧
ಕೋಟಾ	೧
ಇಂದೂರ	೧
ಭೋಪಾಲ	೧
ಕೊಲ್ಹಾಪುರ	೧
ಭಾವನಗರ	೧
ಮಯೂರಭಂಜ	೧
	೬೦

ಉಳಿದ ೩೩ ಸ್ಥಾನಗಳನ್ನು ಚಿಕ್ಕ ಸಂಸ್ಥಾನಗಳು ಗುಂಪಾಗಿ ಈ ಕೆಳಗಿನಂತೆ ಆರಿಸುವವು:—

ಗಡಿನಾಡ ಗುಂಪು	೪
ದಖನ ಭೋರ ಮತ್ತು ಇತರ †	೧
ರಜಪುತಾನಾ ಸಂಸ್ಥಾನಗಳು	೩
ಮಧ್ಯ ಭಾರತ ಸಂಸ್ಥಾನಗಳು	೪
ಕಾಠೇವಾಡ ಸಂಸ್ಥಾನಗಳು	೨
ದಕ್ಷಿಣ ಸಂಸ್ಥಾನಗಳು	೨
ಪಂಜಾಬ ಸಂಸ್ಥಾನಗಳು	೩
ಪೂರ್ವ ಸಂಸ್ಥಾನಗಳು *	[illegible]
ಛತ್ತೀಸಗಡ ಸಂಸ್ಥಾನಗಳು	೩
ಉಳಿದವು	೪
	೩೦

* ಈ ಸಂಸ್ಥಾನಗಳು ಈಗಾಗಲೆ ಘಟನಾ ಸಮಿತಿಯಲ್ಲಿ ಸೇರಿವೆ ಇಲ್ಲವೆ ಸೇರಲು ನಿಶ್ಚಯಿಸಿವೆ.

† ಇವು ಸೇರಬಹುದೆಂದು ತೋರುತ್ತದೆ.

ಪತಿಯಾಲಾ ಮಹಾರಾಜರು ೪ ಕೋಟಿ ಜನಸಂಖ್ಯೆಯುಳ್ಳಷ್ಟು ಸಂಸ್ಥಾನಗಳು ಘಟನಾ ಸಮಿತಿಯಲ್ಲಿ ಸೇರಲು ಸಿದ್ಧವಾಗಿವೆಯೆಂದು ಹೇಳಿದ್ದಾರೆ. ಇನ್ನೂ ಅನೇಕ ಸೇರಲಿವೆಯಂತೆ. ಆದರೆ ವಿವರವಿನ್ನೂ ಗೊತ್ತಾಗಿಲ್ಲ. ಘಟನಾ ಸಮಿತಿಯ ಹೊಸ್ತಿನ ಅಧಿವೇಶನಕ್ಕೆ ಒಟ್ಟು [illegible] ಸಂಸ್ಥಾನಿ ಪ್ರತಿನಿಧಿಗಳು ಹಾಜರಾಗಿದ್ದರು.



ಮುಂಬಯಿ

ಸೋಶಾಲಿಸ್ಟ ಪಕ್ಷದ ಧುರೀಣರಾದ ಅಚ್ಯುತ ಪಟವರ್ಧನರು ಇನ್ನು ಎರಡು ವಾರಗಳಲ್ಲಿ ಹಾಲಂಡಕ್ಕೆ ಹೋಗಲಿದ್ದಾರೆಂದು ತಿಳಿಯುತ್ತದೆ. ತಮ್ಮ ತಂಗಿ ವಿಜಯಾ ಇವರ ಲಗ್ನದ ಉಪಚಾರಕ್ಕಾಗಿ ಅವರು ಹಾಲಂಡಿಗೆ ಹೋಗುವವರಿದ್ದು ಎರಡು ತಿಂಗಳ ಅಲ್ಲಿ ಉಳಿಯುವರು.

ವಿವಾಹಗಳಲ್ಲಿ ವರದಕ್ಷಿಣೆಯನ್ನು ಕೊಡುವ ಅಥವಾ ತೆಗೆದುಕೊಳ್ಳುವ ಪದ್ಧತಿಯನ್ನು ಪ್ರತಿಬಂಧಿಸಲು ಮುಂಬಯಿ ಸರಕಾರದವರು ಯೋಜಿಸಿದ ಮಸೂದೆಯು ಎಪ್ರಿಲ ೨೧ ನೇ ತಾರೀಕಿನ ಮುಂಬಯಿ ಸರಕಾರದ ಗ್ಯಾಜಿಟನಲ್ಲಿ ಪ್ರಸಿದ್ಧವಾಗಿದೆ. ಅಭಿಪ್ರಾಯಾರ್ಥವಾಗಿ ಇದನ್ನು ಪ್ರಸಿದ್ಧಿಸಲಾಗಿದೆ. ೧೯೪೮ ನೇ ಜಾನೇವಾರಿ ೧ ರೊಳಗಾಗಿ ಸೆಕ್ರೆಟರಿ ಲೆಜಿಸ್ಲೇಟಿವ್ಹ ಅಸೆಂಬ್ಲಿ ಕೌನ್ಸಿಲ್ ಹಾಲ ಮುಂಬಯಿ ಇವರಿಗೆ ಅದನ್ನು ಕಳಿಸಬೇಕು.

ಮುಂಬಯಿ ನಗರ ಮತ್ತು ಉಪನಗರಗಳಲ್ಲಿ ಇದುವರೆಗೆ ತಲಾ ಕೊಡಲಾಗುತ್ತಿದ್ದ ೨೪ ಗಜ ಬಟ್ಟೆಯ ಪ್ರಮಾಣವನ್ನು ಇದೇ ಜನವರಿಯಿಂದ ೧೦ ಗಜಕ್ಕೆ ಇಳಿಸಿರುವರು. ಇದರಲ್ಲಿ ಅರ್ಧಕ್ಕಿಂತ ಹೆಚ್ಚು ಜನಗಳ ಬಟ್ಟೆ ಇರಬಹುದು. ಅನಿವಾರ್ಯವಾಗಿ ಈ ಕಡಿತವನ್ನು ಮಾಡಲಾಗಿದ್ದು ಪರಿಸ್ಥಿತಿಯನ್ನು ಮುಂದೆಯೂ ಪರಿಶೀಲಿಸಲಾಗುವದೆಂದು ಮುಂತಾಗಿ ಪ್ರಕಟನೆ ಹೊರಟಿದೆ.

ಅರಳೆಯ ಕೇಣಿಮುಂದೀ ವ್ಯಾಪಾರವನ್ನು ನಿರ್ಬಂಧಿಸುವಂತೆ ಮುಂಬೈ ಪ್ರಾಂತದ ಅರಳೆಯ ವ್ಯಾಪಾರದ ಮೇಲೆ ನಿಯಂತ್ರಣವಿಡುವಂತೆ ಮುಂಬಯಿ ಸರಕಾರದವರು ಈ ಸಂಬಂಧದಲ್ಲಿ ನೇಮಿಸಿದ ಸಮಿತಿಯವರು ವರದಿ ಮಾಡಿರುತ್ತಾರೆ.

ಮುಂಬಯಿ ಸರಕಾರದವರು ಮುಂಬಯಿ ಸಮಾಚಾರ ಬದಲು ಹೊರಡಿಸಬೇಕೆಂದಿದ್ದ ಪ್ರಜಾರಾಜ್ಯ ಪತ್ರ ಕಳೆದವಾರದಿಂದ ಪ್ರಕಟವಾಗಿದೆ;

ಮದ್ರಾಸ

ತ್ರಿಚೂರಿಗೆ ಹೊರಟಿದ್ದ ಶ್ರೀ ವಿ. ಕೆ. ಮೆನನ್ನರು ಮದ್ರಾಸ ಗವರ್ನರರನ್ನು ಸಂದರ್ಶಿಸಿದರು

ಸರಕಾರಿ ಕಚೇರಿಗಳಲ್ಲಿಯ ಲಂಚಗುಳಿತನವನ್ನು ಹೋಗಲಾಡಿಸುವದಕ್ಕೆ ಯೋಗ್ಯ ಉಪಾಯಗಳನ್ನು ಸೂಚಿಸಲು ಮದ್ರಾಸ ಸರಕಾರದವರು ಹೈಕೋರ್ಟಿನ ನ್ಯಾ. ರಾಜಮನ್ನವರರ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನು ರಚಿಸಿರುವರು.

ಆಸಾಮ

ವಲಸೆಗಾರರ ಉಚ್ಚಾಟನೆ ಸಂಬಂಧದಲ್ಲಿ ಮುಖ್ಯ ಮಂತ್ರಿ ಬಾರ್ಡೋಲಾಯಿ ಮತ್ತು ಲೀಗ ಧುರೀಣ ಸಾದುಲ್ಲಾರವರಲ್ಲಿ ಒಡಂಬಡಿಕೆಯಾಗಿತ್ತಷ್ಟೆ. ಆ ಒಡಂಬಡಿಕೆ ಕರಾರುಗಳ ಸಂಬಂಧದಲ್ಲಿ ಮುಸ್ಲಿಂಲೀಗ ಕ್ರಿಯಾಸಮಿತಿಯವರು ವಿಚಾರಮಾಡಿ ಒಡಂಬಡಿಕೆಯನ್ನು ನಿರಾಕರಿಸಬೇಕೆಂದು ನಿರ್ಣಯಿಸಿದರು. ಈ ನಿರ್ಣಯವನ್ನು ಆಸಾಮ ಸರಕಾರಕ್ಕೆ ತಿಳಿಸಲಾಗುವದು.

ಸರಹದ್ದ

ಗಡಿನಾಡಿನಲ್ಲಿ ಮುಸ್ಲಿಂ ಲೀಗಿನ ಚಳವಳಿಯಲ್ಲಿ ಪ್ರಾಂತದಲ್ಲಿ ೪೦೦ ಜನರ ಕೊಲೆಯಾಗಿದ್ದು ೧೫೦ ಜನರು ಇರಿಯಲ್ಪಟ್ಟಿರುವರು. ೩೦೦ ಜನರು ಧರ್ಮಾಂತರಗೊಳಿಸಲ್ಪಟ್ಟರು. ೫೦ ಜನರನ್ನು ಓಡಿಸಿಕೊಂಡು ಹೋಗಲಾಗಿದೆಂದು ಅಲ್ಲಿನ ಅರ್ಥ ಸಚಿವರು ಸುದ್ದಿಗಾರರ ಸಭೆಯಲ್ಲಿ ಹೇಳಿದರು. ಇದರ ಹೊರತಾಗಿ ೧೩೦೦ ಮನೆಗಳು ಅಂಗಡಿಗಳು ೫೦ ಪೂಜಾಸ್ಥಾನಗಳು ಸುಡಲ್ಪಟ್ಟವೆಂದೂ ಹೇಳಿದರು.

ವೈಸರಾಯ ಲಾರ್ಡ ಲುಯಿ ಮೌಂಟಬ್ಯಾಟನ್ನರು ಸರಹದ್ದ ಸಂಚಾರವನ್ನು ಕೈಕೊಂಡಿದ್ದಾರೆ. ಪೇಶಾವರದಲ್ಲಿ ಅವರು ೨೮ ಕ್ಕೆ ಲೀಗ ಧುರೀಣರೊಡನೆ ವಿಚಾರವಿನಿಮಯ ಮಾಡಿದರು. ತಮ್ಮನ್ನೆಲ್ಲ ಒಂದೇ ಜೇಲಿನಲ್ಲಿಟ್ಟರೆ ವಿಚಾರವಿನಿಮಯಕ್ಕೆ ಅನುಕೂಲವಾಗುವದೆಂದು ಅವರು ಬಿನ್ನವಿಸಿಕೊಂಡರು. ಕೆಲವರನ್ನು ಪೆರೋಲ ಮೇಲೆ ಬಿಡುಗಡೆ ಮಾಡಿದರೆ ಜಿನ್ನಾರವರ ಹತ್ತರ ಹೋಗಿ ವಿಚಾರವಿನಿಮಯ ಮಾಡಲು ಅನುಕೂಲಾಗುವದೆಂದೂ ತಿಳಿಸಿದರಂತೆ. ವೈಸರಾಯರು ಅವರ ವಿನಂತಿಯನ್ನು ಮಾನ್ಯಮಾಡಿ ಅದರಂತೆ ಗವರ್ನರರಿಗೆ ತಿಳಿಸಿದರೆಂದು ಮುಂತಾಗಿ ಸರಕಾರಿ ಭವನದಿಂದ ಹೊರಟ ಪ್ರಕಟನೆಯಲ್ಲಿ ಹೇಳಲಾಗಿದೆ.

ಗಡಿನಾಡಿನಲ್ಲಿ ಇನ್ನು ಹತ್ತು ವರುಷಗಳಲ್ಲಿ ಎಲ್ಲರನ್ನು ಸಾಕ್ಷರರನ್ನಾಗಿ ಮಾಡುವ ಯೋಜನೆಯೊಂದನ್ನು ಗಡಿನಾಡ ಸರಕಾರ ರಚಿಸಿದೆ. ನೂರಕ್ಕೆ ೧೩ ರಷ್ಟೇ ಜನ ಈಗ ಅಲ್ಲಿ ಸಾಕ್ಷರರಾಗಿರುವರು. ಈ ಯೋಜನೆಯು ಪ್ರಾರಂಭಕ ವೆಚ್ಚವೆಂದು ೨ ಕೋಟಿ ರೂಪಾಯಿ ಅಂದಾಜ ಮಾಡಲಾಗಿದೆ.

ಉತ್ತರ ಕನ್ನಡ ಜಿಲ್ಲಾ ಸಾಹಿತ್ಯ ಸಮ್ಮೇಲನ

ಕಾರವಾರದಲ್ಲಿ ೨೫ ನೇ ತಾರೀಕು ಸಾಯಂಕಾಲ ೪॥ ಗಂಟೆಗೆ ಜಿ. ಲೋ. ಬೋ. ಅಟ್ಟದ ಮೇಲೆ ಉತ್ತರ ಕನ್ನಡ ಜಿಲ್ಲಾ ಸಾಹಿತ್ಯ ಸಮ್ಮೇಳನ ಮತ್ತು ಕರ್ನಾಟಕ ಸಂಘದ ವಸಂತ ಸಾಹಿತ್ಯೋತ್ಸವ ಶ್ರೀ ವ್ಹಿ. ದಿ. ನಾಯಕರ ಅಧ್ಯಕ್ಷತೆಯಲ್ಲಿ ನಡೆದವು.

ಶ್ರೀ ಗಾಂವಕರರು ಉದ್ಘಾಟನೆ ಮಾಡುತ್ತ ಉತ್ತರ ಕನ್ನಡ ಜಿಲ್ಹೆಯ ಸಾಹಿತ್ಯವು ಉಳಿದ ಯಾವಭಾಗದ ಸಾಹಿತ್ಯಕ್ಕೂ ಕಡಿಮೆ ಇಲ್ಲವೆಂದೂ ಆದರೆ ಸರಿಯಾದ ಯೋಜಕರು ತಮ್ಮ ಜಿಲ್ಹೆಗೆ ಇಲ್ಲದ್ದರಿಂದ ತಮ್ಮ ಜಿಲ್ಹೆಯ ಪ್ರಗತಿಗೆ ತಡೆಯಾಗಿದೆಂದೂ ನುಡಿದರು.

ನಂತರ ಅಧ್ಯಕ್ಷರಾದ ನಾಯಕ ವೆಂಕಟರಾಯರು ಉತ್ತರ ಕನ್ನಡ ಜಿಲ್ಹೆಯ ಬಗ್ಗೆ ಅಭಿಮಾನ ವ್ಯಕ್ತಮಾಡಿ ಇಲ್ಲಿಯ ಸೃಷ್ಟಿ ಸೌಂದರ್ಯವು ಶ್ರೇಷ್ಠ ಸಾಹಿತಿಗಳನ್ನು ಕೊಡುತ್ತಿರುವದರಲ್ಲಿ ಯಾವ ಆಶ್ಚರ್ಯವೂ ಇಲ್ಲ. ಯೋಜಕರ ಅಭಾವವು ಕಾರವಾರ ಜಿಲ್ಹೆಗಷ್ಟೇ ಇರದೆ ಹಿಂದುಸ್ತಾನಕ್ಕೂ ಇದೆ ಎಂದರು. ನಮ್ಮ ಪೂರ್ವಜರ ಕೃತಿಗಳನ್ನು ಒಳ್ಳೆ ಅರ್ಥಪೂರ್ಣವಾಗಿ ಅಭ್ಯಾಸ ಮಾಡಬೇಕಾಗಿ ಸೂಚಿಸಿದರು. ಸಾಹಿತಿಯು ಜನಜಾಗ್ರತಿಯನ್ನು ಮಾಡಬೇಕು. ಒಳ್ಳೆ ಸಾಹಿತಿಯು ಬ್ರಹ್ಮಋಷಿಗಳಿಗಿಂತ ಹೆಚ್ಚಿನವನು ಎಂಬುದನ್ನು ಸರಸ್ವತಿಯು ಹೇಳಿದ ಯಂ ಕಾಮಯೇ ತಂ ತಮುಗ್ರಂ ಕೃಣೋಮಿ ತಂ ಋಷಿಂ ತಂ ಸುಮೇಧಾಂ ಕೃಣೋಮಿ ಎಂಬ ಉಕ್ತಿಯಿಂದ ತೋರಿಸಿಕೊಟ್ಟು ತಮ್ಮ ಭಾಷಣವನ್ನು ಮುಗಿಸಿದರು.

ನಂತರ ಹುಬ್ಬಳ್ಳಿಯ ಶ್ರೀ ಕರಗುದರಿಯವರು ತಮ್ಮ ಹಾಸ್ಯಭರಿತ ಶೈಲಿಯಲ್ಲಿ ಭಗವದ್ಭಕ್ತನಾದ "ಸೇನಾ" ಎಂಬ ನಾವಿಕನ 'ಚರಿತ್ರೆಯನ್ನು ಹೇಳಿದರು.

ಕೊನೆಗೆ ಕರ್ನಾಟಕ ಸಂಘದ ಕಾರ್ಯದರ್ಶಿಗಳು ಆಭಾರ ಮನ್ನಿಸಿದ ನಂತರ ವಂದೇ ಮಾತರಂ ಗೀತೆಯೊಡನೆ ಕಾರ್ಯಕ್ರಮ ಕೊನೆಗೊಂಡಿತು.

ಹೊಸದಿಲ್ಲಿ

ಸಂಬಳ ಸಮಿತಿಯವರು ತಮ್ಮ ಕಾರ್ಯವನ್ನು ಮುಗಿಸಿ ತಮ್ಮ ವರದಿಯನ್ನು ಹಿಂದುಸ್ತಾನ ಸರಕಾರಕ್ಕೆ ಒಪ್ಪಿಸಿರುವರೆಂದು ತಿಳಿಯುತ್ತದೆ. ವರದಿಯಲ್ಲಿ ಭಿನ್ನ ಮತ ಪತ್ರಿಕೆಗಳು ಜೋಡಿಸಲ್ಪಡದಿದ್ದರೂ ಬೇರೆ ಬೇರೆ ಸೂಚನೆಗಳನ್ನು ಸದಸ್ಯರು ಮಾಡಿರುವರೆಂದು ತಿಳಿಯುತ್ತದೆ. ಸಮಿತಿಯವರ ಸೂಚನೆಗಳನ್ನೆಲ್ಲ ಸರಕಾರ ಮಾನ್ಯಮಾಡಿದರೆ ಮುಂಗಡ ಪತ್ರಿಕೆಯಲ್ಲಿಯ ಕೊರತೆಯು ೩೦ ಕೋಟಿ ರೂಪಾಯಿಗಳಿಂದ ಹೆಚ್ಚಾಗುವದೆಂದು ಹೇಳಲಾಗುತ್ತದೆ.

ಪ್ರಾಂತಗಳ ಮತ್ತು ಸಂಸ್ಥಾನಗಳ ಆಹಾರಾಧಿಕಾರಿಗಳ ಸಭೆ ೨೬ ಕ್ಕೆ ದಿಲ್ಲಿಯಲ್ಲಿ ಜರುಗಿತು. ಈಗ ಕೊಡುತ್ತಿರುವ ೩೦ ತೊಲಿಯ ಸೀದಾ ಪ್ರಮಾಣವನ್ನಾಗಲಿ ಅಥವಾ ಗೋದಿಯ ಪ್ರಮಾಣವನ್ನಾಗಲಿ ಸದ್ಯಕ್ಕೆ ಹೆಚ್ಚಿಸುವದು ಶಕ್ಯವಿಲ್ಲೆಂದು ಅಲ್ಲಿ ನಡೆದ ಚರ್ಚೆಯಿಂದ ಗೊತ್ತಾಯಿತು. ಗೋದೀ ಬೀಜದ ಪೂರೈಕೆಯ ವಿಷಯವೂ ಚರ್ಚಿಸಲಾಯಿತು.

ಘಟನಾಸಮಿತಿಯ ಸಭೆಗೆ ಹೊರಟಿದ್ದ ಬಡೋದೆಯ ಪ್ರತಿನಿಧಿಯಾದ ಶ್ರೀ ಕನ್ಹಯ್ಯಾಲಾಲ ಮುಜುಮದಾರರು ಗಾಡಿಯಲ್ಲಿ ಸಿಗರೇಟು ಸೇದುತ್ತಿರುವಾಗ ಬೆಂಕಿ ಹತ್ತಿತು. ಇಡೀ ಡಬ್ಬಿಗೇ ಬೆಂಕಿ ವ್ಯಾಪಿಸಿ ಅವರು ಅದರಲ್ಲಿ ಸುಟ್ಟು ಹೋದರು. ಪ್ರಜಾ ಪರಿಷತ್ತಿನ ಅನೇಕ ಜನ ಪ್ರತಿನಿಧಿಗಳು ಅವರ ಸ್ಮಶಾನ ಯಾತ್ರೆಯಲ್ಲಿ ಭಾಗವಹಿಸಿದ್ದರು.

ಸಾಮ್ಯವಾದಿ ಪಕ್ಷಕ್ಕಾಗಿ ಇಲ್ಲವೆ ಸಾಮ್ಯವಾದಿಗಳಿಗೆ ನಿಧಿ ಅರ್ಪಿಸಲು ಹಣ ಸಂಗ್ರಹಿಸುವ ಕಾರ್ಯದಲ್ಲಿ ಕಾಂಗ್ರೆಸ್ಸಿಗರು ಭಾಗವಹಿಸಬಾರದೆಂದು ಕಾಂಗ್ರೆಸ್ ಕಾರ್ಯದರ್ಶಿಗಳು ಪ್ರಾಂತಿಕ ಸಮಿತಿಗಳಿಗೆ ಪರಿಪತ್ರ ಕಳಿಸಿರುವರು.

ಕಾಂಗ್ರೆಸ್ ವಿಧಾಯಕ ಕಾರ್ಯಸಮಿತಿಯ ಸಭೆ ೨೬ ನೇ ತಾರೀಕಿಗೆ ದಿಲ್ಲಿಯಲ್ಲಿ ಕೂಡಿ ಮಹತ್ವದ ನಿರ್ಣಯಗಳಾಗಿರುತ್ತವೆ. ವಿಧಾಯಕ ಕಾರ್ಯವನ್ನು ಪ್ರತ್ಯಕ್ಷ ಕೃತಿಗೆ ತರಲು ಒಂದು ಪ್ರತ್ಯೇಕ ಕೇಂದ್ರ ಕಚೇರಿಯನ್ನು ಸ್ಥಾಪಿಸಬೇಕೆಂದು ನಿರ್ಣಯವಾಗಿರುವದಲ್ಲದೆ ಕೆಲಸವನ್ನು ಕೆಳಗಿನ ಮಹನೀಯರಿಗೆ ಹಂಚಿ ಕೊಡಲಾಗಿದೆ. ಶ್ರೀ ಜಯರಾಮದಾಸ ದೌಲತರಾಮ (ಹರಿಜನ) ಶ್ರೀ ಪ್ರಫುಲ್ ಚಂದ್ರಘೋಷ (ಗ್ರಾಮೋದ್ಯೋಗ) ಶ್ರೀ ಶಂಕರರಾವ ದೇವ. (ಖಾದಿ) ಶ್ರೀ ರಂಗರಾವ ದಿವಾಕರ (ಹಿಂದುಸ್ತಾನಿ) ಮತ್ತು ಶ್ರೀಮತಿ ಸುಚೇತಾ ಕೃಪಲಾನಿ (ಮಹಿಳಾ ಶಿಕ್ಷಣ) ಈ ಕೆಲಸಕ್ಕಾಗಿ ಪ್ರಾಂತಗಳಲ್ಲಿಯೂ ಪ್ರತ್ಯೇಕ ಕಚೇರಿಗಳನ್ನು ತೆರೆಯಲು ಸೂಚಿಸಲಾಗುವದು.

ಹಿಂದುಸ್ತಾನದಲ್ಲಿರುವ ಆಯ. ಸಿ. ಎಸ್. ನೋಕರರ ಸಂಬಂಧದಲ್ಲಿ ಮತ್ತು ಆಯ. ಪಿ. ಎಸ್. ನೋಕರರ ಬಗ್ಗೆ ಬ್ರಿಟಿಶ ಸರಕಾರದ ಪ್ರಕಟನೆ ಮುಂದಿನ ವಾರ ಹೊರಬೀಳುವದೆಂದು ತಿಳಿಯುತ್ತದೆ.

ಬ್ರಹ್ಮದೇಶದವರೊಡನೆ ಪಾಕಿಸ್ತಾನ ಸ್ನೇಹದಿಂದಿರುವದೆಂದು ಬ್ಯಾ ಜಿನ್ನಾರು ಬ್ರಹ್ಮದೇಶದ ಘಟನಾತ್ಮಕ ಸಲಹೆಗಾರರಾದ ಯು [illegible] ಮಾನರಿಗೆ ಆಶ್ವಾಸನ ಕೊಟ್ಟಿರುವರು.

ಡಾ. ರಾಜೇಂದ್ರ ಪ್ರಸಾದರು ಮೈಸೂರ ಸಂಸ್ಥಾನದ ಆಹಾರ ಪರಿಸ್ಥಿತಿಯನ್ನು ಪರಿಶೀಲಿಸಲು ಮುಂದಿನ ತಿಂಗಳು ಅಲ್ಲಿಗೆ ಹೋಗುವವರಿದ್ದಾರೆ.

ಘಟನಾ ಸಮಿತಿಯ ಪ್ರಾಸ್ತಾವಿಕ ಅಧಿವೇಶನ

ಭಾರತದ ವಿಭಜನೆಗೆ ಸಿದ್ಧರಾಗಲು

ಅಧ್ಯಕ್ಷರ ಬಿನ್ನಹ

ನಾಗರಿಕ ಮೂಲಭೂತ ಹಕ್ಕುಗಳ ಬಗ್ಗೆ ಚರ್ಚೆ

ಸ್ವತಂತ್ರ ಹಿಂದುಸ್ಥಾನ ಬಿರುದುಬಾವಲಿಗಳನ್ನು ಸ್ವೀಕರಿಸದು

ಮೂರನೆಯ ಅಧಿವೇಶನ

ಏಪ್ರಿಲ ೨೮ ನೇ ತಾರೀಕು ಡಾ. ಬಾಬು ರಾಜೇಂದ್ರಪ್ರಸಾದರ ಅಧ್ಯಕ್ಷತೆಯಲ್ಲಿ ಘಟನಾ ಸಮಿತಿಯ ಪ್ರಾಸ್ತಾವಿಕ ೩ನೇ ಅಧಿವೇಶನವು ಪ್ರಾರಂಭವಾಗಿದೆ. ಈ ಸಲ ಘಟನಾ ಸಮಿತಿಗೆ ಸಂಸ್ಥಾನಗಳ ೧೧ ಪ್ರತಿನಿಧಿಗಳೂ ಬಂದಿರುವರು. ಮುಸ್ಲಿಂ ಲೀಗಿನವರು ಮತ್ತು ಅವರ ಒಲವಿನಂತೆ ನಡೆಯುವ ಹಿಂದಿ ಸಂಸ್ಥಾನಗಳ ಪ್ರತಿನಿಧಿಗಳು ಕಾರ್ಯಕಲಾಪಗಳಲ್ಲಿ ಭಾಗವಹಿಸಿರುವುದಿಲ್ಲ. ಇನ್ನು ಮುಂದೆಯೂ ಅವರು ಬರುವರೋ ಇಲ್ಲವೋ ತಿಳಿಯದು. ಡಾ. ರಾಜೇಂದ್ರ ಪ್ರಸಾದರು ಪ್ರಾಸ್ತಾವಿಕ ಭಾಷಣ ಮಾಡುತ್ತ ಕೆಲ ಮಹತ್ವದ ಮಾತುಗಳನ್ನು ಹೇಳಿದರು. ಭಾರತದ ವಿಭಜನೆಯನ್ನು ಅದೇಕೆ ಕೆಲವು ಪ್ರಾಂತಗಳ ವಿಭಜನೆಯನ್ನು ಕೂಡ ಒಪ್ಪಲು ಈ ಸಭೆಯು ಸಿದ್ಧವಾಗಬೇಕು. ಈ ವಿಭಜನೆಯ ದೃಷ್ಟಿಯನ್ನಿಟ್ಟುಕೊಂಡೇ ಘಟನಾ ಸಮಿತಿಯು ರಾಜ್ಯಘಟನೆಯನ್ನು ರಚಿಸಬೇಕಾಗಬಹುದು. ಅಖಂಡ ಭಾರತಕ್ಕಾಗಿ ಇಲ್ಲವೆ ವಿಭಕ್ತ ಭಾರತಕ್ಕಾಗಿ ನಾವು ನಮ್ಮ ರಾಜ್ಯಘಟನೆಯನ್ನು ರಚಿಸಬೇಕಾಗುವ ಸಮಯ ಬರಬಹುದು. ಎಂಥ ರಾಜ್ಯಘಟನೆಯನ್ನು ರಚಿಸಬೇಕಾಗಿ ಬಂದರೂ ಅದರಲ್ಲಿ ಸೇರುವವರಿಗೆಲ್ಲ ನ್ಯಾಯ ದೊರೆಯುಂತೆ ದಕ್ಷತೆ ವಹಿಸಲಾಗುವದು.

೧೯೪೮ ಜೂನದಲ್ಲಿ ಅಧಿಕಾರದಾನ ಮಾಡಲಾಗುವದು ಎಂದು ಬ್ರಿಟಿಶ್ ಸರಕಾರ ಸಾರಿದ್ದರಿಂದ ಅದನ್ನನುಲಕ್ಷಿಸಿ ಘಟನಾ ಸಮಿತಿಯ ಕಾರ್ಯ ಭರದಿಂದ ಸಾಗಬೇಕಾಗಿದೆ. ಅಕ್ಟೋಬರದೊಳಗಾಗಿ ರಾಜ್ಯಘಟನೆಯ ಕಾರ್ಯವನ್ನು ಮುಗಿಸಬೇಕೆಂದು ಸದ್ಯಕ್ಕೆ ನಿರ್ಣಯಿಸಲಾಗಿದೆ.

ಈ ರೀತಿ ಹೇಳಿ ಬಾಬು ರಾಜೇಂದ್ರ ಪ್ರಸಾದರು ಸಭೆಗೆ ದಯಮಾಡಿಸಿದ ಸಂಸ್ಥಾನ ಪ್ರತಿನಿಧಿಗಳನ್ನು ಸ್ವಾಗತಿಸಿದರು.

ಸಂಸ್ಥಾನ ಸಂಧಾನ ಸಮಿತಿ

ಬಾಬು ರಾಜೇಂದ್ರ ಪ್ರಸಾದರ ಭಾಷಣವಾದ ನಂತರ ಪಂಡಿತ ಜವಾಹರಲಾಲ ನೆಹರು ಇವರು ಸಂಸ್ಥಾನಗಳ ಸಂಧಾನ ಸಮಿತಿಯ ವರದಿಯನ್ನು ಘಟನಾಸಮಿತಿಯು ಉಲ್ಲೇಖಿಸಿಕೊಳ್ಳಬೇಕೆಂಬ ಸೂಚನೆಯನ್ನು ಮಂಡಿಸಿದರು.

ಪ್ರಜಾರಾಜ್ಯವೆ ಇಡೀ ಹಿಂದುಸ್ತಾನದ ಗುರಿಯಾಗಿದೆಂದು ಈ ಸಭೆ ನಿರ್ಣಯಿಸಿದರೂ ಹಿಂದೀ ಸಂಸ್ಥಾನಗಳಲ್ಲಿ ಅರಸೊತ್ತಿಗೆ ಇರಲು ಯಾವದೆ ಅಡ್ಡಿಯಿಲ್ಲವೆಂದು ಕಳೆದ ಸಭೆಯಲ್ಲಿ ನಾನು ಹೇಳಿದ್ದೆ. ನರೇಂದ್ರರ ಸಂಧಾನ ಸಮಿತಿಯವರಿಗೂ ಇದನ್ನು ಸ್ಪಷ್ಟ ಮಾಡಲಾಗಿದೆ. ಘಟನಾ ಸಮಿತಿಯಲ್ಲಿ ಸೇರುವದು ಅಥವಾ ಬಿಡುವದು ಸಂಪೂರ್ಣವಾಗಿ ಐಚ್ಛಿಕವಾಗಿರುವದು. ಈ ಬಗ್ಗೆ ಯಾರಿಗೂ ಒತ್ತಾಯ ಮಾಡಲಾಗುವದಿಲ್ಲ. ಘಟನೆಗಳ ಒತ್ತಾಯದ ಹೊರತಾಗಿ ಉಳಿದ ಒತ್ತಾಯವೇನೂ ಬರಲಾರದು. ಆದರೆ ಘಟನೆಗಳ ಒತ್ತಾಯವನ್ನು ಅಲಕ್ಷಿಸುವಂತಿಲ್ಲ.

ಇನ್ನು ಮುಂದೆ ಪ್ರಾಂತಗಳ ವಿಭಜನೆ ಪ್ರಶ್ನೆಯೂ ಉಪಸ್ಥಿತವಾಗುವದೆಂದು ಈಗಾಗಲೆ ಕೆಲವು ಕಾರಣಗಳಿಗಾಗಿ ಪಂಜಾಬ ಹಾಗು ಬಂಗಾಲಗಳ ವಿಭಜನೆಯ ಚರ್ಚೆ ನಡೆದಿದೆಂದು ಮುಂತಾಗಿ ತಿಳಿಸಿ ಹಿಂದೀ ಸಂಸ್ಥಾನಗಳಿಗೆ ಸಮಿತಿಯ ಕಾರ್ಯದಲ್ಲಿ ಭಾಗವಹಿಸಲು ಪಂಡಿತ ಜವಾಹರಲಾಲರು ಹೇಳಿದರು. ಡಾ. ಪಟ್ಟಾಭಿಯವರು ಅದಕ್ಕೆ ಬೆಂಬಲ ಕೊಟ್ಟ ನಂತರ ಸಭೆ ಅದನ್ನು ಸ್ವೀಕರಿಸಿತು.

ಒಕ್ಕೂಟ ಸಭೆಯ ವರದಿ

ಅನಂತರ ಸರ್. ಎನ್. ಗೋಪಾಲಸ್ವಾಮಿ ಅಯ್ಯಂಗಾರರು ಒಕ್ಕೂಟ ಅಧಿಕಾರ ಸಮಿತಿಯ ವರದಿಯನ್ನು ಒಪ್ಪಿಸಿದರು. ಈ ವರದಿಯ ಆಶಯವಿಂತಿದೆ. ಕೇಂದ್ರ ಸರಕಾರಕ್ಕೆ ಸಂರಕ್ಷಣ, ವಿದೇಶ ವ್ಯವಹಾರ ಮತ್ತು ಸಾರಿಗೆ ಸುದ್ದಿ ವಾಹನ ಈ ಮೂರು ಖಾತೆಗಳನ್ನು ಒಪ್ಪಿಸಲಾಗಿದ್ದು ಈ ವ್ಯಾಪ್ತಿಯನ್ನನುಲಕ್ಷಿಸಿ ಈ ವರದಿಯನ್ನು ಬರೆದದ್ದಾಗಿದೆಂದು ಹೇಳಲಾಗುತ್ತದೆ.

ಸಂರಕ್ಷಣ— ಒಕ್ಕೂಟ ಸರಕಾರದಲ್ಲಿ ಸೇರಿದ ಎಲ್ಲ ಪ್ರಾಂತ ಮತ್ತು ಸಂಸ್ಥಾನಗಳ ಸಂರಕ್ಷಣೆ ಹಾಗು ಸಂಘಟಿತ ಸಿದ್ಧತೆ ಯುದ್ಧ ಕಾಲದ ಸಂರಕ್ಷಣೆಗಾಗಿ ಕೈಕೊಳ್ಳುವ ಇತರ ಉಪಾಯಗಳು ಮತ್ತು ಅನಂತರ ಕೈಕೊಳ್ಳಬೇಕಾದ ಸೈನ್ಯವಿಸರ್ಜನೆ ಭೂ-ಜಲ-ವಾಯು ಸೈನ್ಯವನ್ನು ಸಂಗ್ರಹಿಸಿ ತರಬೇತುಗೊಳಿಸುವದು ಅಥವಾ ಸುಸಜ್ಜಿತವಿಡುವದು ಸಂಸ್ಥಾನಗಳಲ್ಲಿ ಸೈನ್ಯವನ್ನು ನಿಯಂತ್ರಿಸುವದು ಸೈನ್ಯಗಳಿಗೆ ಬೇಕಾಗುವ ಉದ್ಯೋಗಗಳು ಶಸ್ತ್ರಾಸ್ತ್ರ ಸ್ಫೋಟಕ ದ್ರವ್ಯಗಳು ಅಟಂ ಶಕ್ತಿ ಮೊದಲಾದವುಗಳ ಉತ್ಪಾದನೆ ಮತ್ತು ಅವಶ್ಯವಿರುವ ಲೋಹಗಳು ಮತ್ತು ಅವಶ್ಯವಿರುವ ಅಧಿಕಾರಗಳೂ ಒಕ್ಕೂಟ ಸರಕಾರಕ್ಕಿರಬೇಕು.

ವಿದೇಶ ವ್ಯವಹಾರ— ಪರದೇಶಗಳೊಡನೆ ಸಂಬಂಧ ಬರುವ ಒಕ್ಕೂಟದ ಎಲ್ಲ ವ್ಯವಹಾರ ರಾಯಭಾರಿ, ವಾಣಿಜ್ಯ ಹಾಗು ಇತರ ಪ್ರತಿನಿಧಿಗಳನ್ನು ನೇಮಿಸುವದು ಸಂಯುಕ್ತ ರಾಷ್ಟ್ರ ಸಂಘ ಮೊದಲಾದವುಗಳಲ್ಲಿ ಭಾಗವಹಿಸುವದು ಯುದ್ಧ ಶಾಂತಿ ಪರದೇಶಗಳೊಡನೆ ಒಪ್ಪಂದ ವ್ಯವಹಾರದ ವಿದೇಶೀಯರ ಸಂಬಂಧ ಮುಂತಾದ್ದು. ಆಯಾತ-ನಿರ್ಯಾತ ಮೀನ ಹಿಡಿಯುವದು ಮೊದಲಾದವುಗಳು.

ಸಾರಿಗೆ ಮತ್ತು ಸುದ್ದಿವಾಹನ— ಈ ಕ್ಷೇತ್ರವು ವಿಸ್ತೃತವಾಗಿ ವಿಮಾನ ಮಾರ್ಗಗಳು ಒಕ್ಕೂಟದ ಅಧಿಕಾರದಲ್ಲಿ ಉಳಿದ ರಸ್ತೆ ಹಾಗು ಜಲಮಾರ್ಗಗಳು ಹಡಗ ವ್ಯವಸಾಯ ಅಂಚೆ ತಂತಿ ಖಾತೆ ಸಂಸ್ಥಾನ ಅಂಚೆ ಮತ್ತು ತಂತಿ ಶಾಖೆಯನ್ನು ಒಕ್ಕೂಟ ಸರಕಾರ ನಿಯಂತ್ರಿಸಬಹುದು. ರೇಲ್ವೆಯನ್ನೂ ನಿಯಂತ್ರಿಸುವದು.

ಉತ್ಪನ್ನದ ಮಾರ್ಗಗಳು:— ಒಕ್ಕೂಟ ಸರಕಾರದ ಆಡಳಿತಕ್ಕೆ ಅವಶ್ಯವಿರುವ ಹಣವನ್ನು ಸಂಗ್ರಹಿಸಲು ಸಮಿತಿಯವರು ಕೆಳಗಿನ ಮಾರ್ಗಗಳನ್ನು ಸೂಚಿಸಿರುವರು. ಪರದೇಶ ವಸ್ತುಗಳ ಮೇಲಿನ ಜಕಾತಿ, ನಿರ್ಯಾತ ಜಕಾತಿಯ ಸಹಿತ ದೇಶೀ ವಸ್ತುಗಳ ಮೇಲಿನ ಜಕಾತಿ ಕಾರಪರೇಶನ್ ಟ್ಯಾಕ್ಸ ಉತ್ಪನ್ನಕರ ಒಕ್ಕಲತನ ಭೂಮಿ ಬಿಟ್ಟು ಇತರ ಆಸ್ತಿಗಳ ಮೇಲಿನಕರ ಒಕ್ಕಲತನ ಆಸ್ತಿಯ ಮೇಲಿನ ಕರವನ್ನು ಬಿಟ್ಟು ಉಳಿದೆಲ್ಲ ಆಸ್ತಿಯ ಮೇಲಿನ ಕರ ಮುಂತಾದವುಗಳು ಸೂಚಿಸಲಾಗಿದೆ. ಅನೇಕ ಸಂಸ್ಥಾನಗಳು ಆರ್ಥಿಕ ಪ್ರಗತಿಯ ದೃಷ್ಟಿಯಿಂದ ಬಹಳ ಹಿಂದುಳಿದಿರುವದರಿಂದ ಅವುಗಳ ಮೇಲೆ ಕೂಡಲೆ ಈ ಕರಗಳನ್ನು ಸರಿಸಮಾನವಾಗಿ ಹೇರದೆ ೧೫ ವರುಷಗಳ ಅವಧಿ ಕೊಟ್ಟು ಕ್ರಮಶಃ ಕೂಡ್ರಿಸಬೇಕು. ಒಕ್ಕೂಟ ಸರಕಾರಕ್ಕೆ ಈಗ ಕೊಡಮಾಡಿದ ಅಧಿಕಾರಗಳಿಂದ ಉದ್ಭೂತವಾಗುವಂಥ ಇತರ ಅಧಿಕಾರಗಳನ್ನು ವಿವರಿಸುವುದು ಕಠಿನವಾಗಿದೆಂದು ಸಮಿತಿಯು ಒಪ್ಪಿ ಕೆಲ ಅಧಿಕಾರಗಳ ನಾಮನಿರ್ದೇಶ ಮಾಡಿದೆ. ನ್ಯಾಯಖಾತೆ, ಆಸ್ತಿಯನ್ನು ಸ್ವಾಧೀನ ಪಡಿಸಿಕೊಳ್ಳುವುದು, ಸಂಶೋಧನ ಸಂಸ್ಥೆಗಳು ಜನಗಣತಿ, ಒಕ್ಕೂಟಕಾಯದೆ ಮುರಿದ ಅಪರಾಧ, ರಿಝರ್ವ ಬ್ಯಾಂಕು ಒಕ್ಕೂಟ ಸರಕಾರದ ಸಾಲ, ನಾಣ್ಯ ಮತ್ತು ನೋಟುಗಳು ಒಕ್ಕೂಟ ಪ್ರದೇಶದಲ್ಲಿಯ ಎಲ್ಲ ವ್ಯವಹಾರಗಳು.

ಇದಲ್ಲದೆ ಕೆಳಗಿನ ಅಧಿಕಾರಗಳು ಒಕ್ಕೂಟ ಸರಕಾರಕ್ಕಿರಬೇಕೆಂದು ಸಮಿತಿಯು ಸೂಚಿಸಬಯಸುತ್ತದೆ. ಇನ್ಸುರನ್ಸ, ಕಂಪನಿ ಕಾಯದೆ ಬ್ಯಾಂಕಿಂಗ, ನೆಗೋಶಿಯೇಬಲ್ ಇನ್ಸ್ಟ್ರುಮೆಂಟ್ಸ, ಪೇಟೆಂಟಗಳು ಟ್ರೇಡಮಾರ್ಕುಗಳು ಕಾಪೀರಾಯಿಟ, ಸುಧಾರಣೆಯ ಯೋಜನೆಗಳು ಐತಿಹಾಸಿಕ ಕಟ್ಟಡಗಳು ತೂಕ ಮತ್ತು ಅಳತೆ— ಎಂದು ಮುಂತಾಗಿ ಈ ವರದಿಯಲ್ಲಿ ಸೂಚಿಸಲಾಗಿದೆ.

ಮೂಲಭೂತ ಹಕ್ಕುಗಳ ವರದಿ

೨೯ ನೇ ತಾರೀಕಿನ ದಿನ ಕೂಡಿದ ಸಭೆಯಲ್ಲಿ ಸರದಾರ ಪಟೇಲರು ಅಲ್ಪಸಂಖ್ಯಾಕರ ಸಲಹೆ ಸಮಿತಿಯ ವರದಿಯನ್ನು ಒಪ್ಪಿಸುವ ಅವಧಿಯನ್ನು ಬೆಳೆಸಬೇಕೆಂದು ಕೇಳಿಕೊಂಡದ್ದಕ್ಕೆ ಸಭೆ ಅನುಮತಿಯನ್ನಿತ್ತಿತು.

ಅನಂತರ ಮೂಲಭೂತ ಹಕ್ಕುಗಳ ಸಂಬಂಧದ ತಾತ್ಪೂರ್ತಿಕ ವರದಿಯು ಮಂಡಿಸಲ್ಪಟ್ಟ ಕಲಮುಗಳ ಚರ್ಚೆ ನಡೆಯಿತು. —ಸರದಾರ ವಲ್ಲಭಭಾಯಿಯವರು ಮೂಲಭೂತ ಹಕ್ಕುಗಳ ಸಂಬಂಧದ ತಾತ್ಪೂರ್ತಿಕ ವರದಿಯನ್ನು ಸಭೆಯಲ್ಲಿ ಮಂಡಿಸಿದರು. ಮೂಲಭೂತ ಹಕ್ಕುಗಳ ಸಮಿತಿಯವರು ಹಕ್ಕುಗಳ ನ್ಯಾಯಸ್ಥಾನಗಮ್ಯ ಮತ್ತು ನ್ಯಾಯಸ್ಥಾನಾತೀತ ಹೀಗೆರಡು ಭೇದಗಳನ್ನು ಮಾಡಲಾಗಿದೆ. ಸದ್ಯಕ್ಕೆ ನ್ಯಾಯಸ್ಥಾನ ಗಮ್ಯ ವಿಷಯಗಳನ್ನು ಮಾತ್ರ ಈ ವರದಿಯಲ್ಲಿ ಚರ್ಚಿಸಲಾಗಿದ್ದು ನ್ಯಾಯಸ್ಥಾನಾತೀತ ಹಕ್ಕುಗಳನ್ನು ಸಮಿತಿಯು ಇನ್ನೂ ವಿಚಾರ ಮಾಡಿಲ್ಲ. ಈ ವರದಿಯ ಕಲಮುಗಳ ಚರ್ಚೆ ನಡೆದಿದೆ.

ಹಿಂದೀ ಒಕ್ಕೂಟವು ಯಾವುದೇ ಬಿರುದು ದಯಪಾಲಿಸಬಾರದು. ಒಕ್ಕೂಟದ ನಾಗರಿಕನಾವನೂ ಯಾವದೆ ಪರಕೀಯ ಸರಕಾರದ ಯಾವದೇ ಬಿರುದನ್ನು ಸ್ವೀಕರಿಸತಕ್ಕದ್ದಲ್ಲ. ಸರಕಾರದ ನೋಕರಿಯಲ್ಲಿ ಅಥವಾ ವಿಶ್ವಸ್ತತನದಲ್ಲಿ ಇದ್ದವರಾರೂ ಒಕ್ಕೂಟ ಸರಕಾರದ ಅಪ್ಪಣೆ ಪಡೆದುಕೊಳ್ಳದೆ ಯಾವದೇ ಪರಕೀಯ ಸರಕಾರದಿಂದ ಯಾವದೇ ತರಹದ ಬಹುಮಾನ ಪ್ರತಿಫಲ ಅಧಿಕಾರ ಅಥವಾ ಬಿರುದನ್ನು ಸ್ವೀಕರಿಸಬಾರದು ಎಂಬದಾಗಿ ಮೂಲಭೂತ ಹಕ್ಕುಗಳ ವರದಿಯಲ್ಲಿಯ ಕಲಮಿಗೆ ಒಪ್ಪಿಗೆ ದೊರೆಯಿತು. ಮೂಲ ಕಲಮಿಗೆ ಶ್ರೀ ಎಂ ಆರ್ ಮಸಾನಿಯವರು ಮಂಡಿಸಿದ ಉಪಸೂಚನೆಯೊಂದಿಗೆ ಅದು ಸ್ವೀಕೃತವಾಯಿತು.

ಮೂಲಭೂತ ಹಕ್ಕುಗಳು

ಒಕ್ಕೂಟದಲ್ಲಿ ಜನಿಸಿದ ಅಥವಾ ಒಕ್ಕೂಟ ರಾಷ್ಟ್ರೀಯತೆಯನ್ನು ಪಡೆದ ಪ್ರತಿಯೊಬ್ಬನು ಒಕ್ಕೂಟದ ನಾಗರಿಕನಾಗಬಲ್ಲನು.

ಸರಕಾರವು ತನ್ನ ಪ್ರಜರಲ್ಲಿ ಜಾತಿ, ಜನಾಂಗ ಧರ್ಮ ಮತ್ತು ಲಿಂಗಭೇದವನ್ನು ಮಾಡಲಾರದು.

ಫಲಾಹಾರದ ಅಂಗಡಿ, ಊಟದಮನೆ ಮೊದಲಾವುಗಳಲ್ಲಿಯ ಪ್ರವೇಶದ ಬಗ್ಗೆ ನಾಗರಿಕರಲ್ಲಿ ಯಾವದೇ ತರದ ಭೇದ ಮಾಡತಕ್ಕದ್ದಲ್ಲ. ಅದರಂತೆ ಬಾವಿ, ಕೆರೆ, ರಸ್ತೆ, ಮೊದಲಾದವುಗಳ ಉಪಯೋಗದಲ್ಲಿ ಭೇದವೆಣಿಸತಕ್ಕದ್ದಲ್ಲ.

ಮನಸಿಗೆ ಬಂದ ಉದ್ಯೋಗ ಕೈಕೊಳ್ಳಲು ವ್ಯಾಪಾರ ಪ್ರಾರಂಭಿಸಲು ಇಲ್ಲವೇ ಸಾರ್ವಜನಿಕ ನೌಕರಿಯಲ್ಲಿ ಸೇರಲು ಸಕಲ ನಾಗರಿಕರಿಗೂ ಅಷ್ಟೇ ಅವಕಾಶ ಕೊಡಲಾಗುವದು. ಆದರೆ ಸರಕಾರದ ಅಭಿಪ್ರಾಯದಲ್ಲಿ ಯಾವದೇ ಜಾತಿಯವರಿಗೆ ಪ್ರಾತಿನಿಧ್ಯ ಕಡಿಮೆಯಾದೆಯೆಂದೆನಿಸಿದರೆ, ಅವರಿಗಾಗಿ ಕೆಲವು ಸ್ಥಳಗಳನ್ನು ಕಾದಿಡಬಹುದು.

ಪ್ರತಿಯೊಬ್ಬ ನಾಗರಿಕನು ಒಕ್ಕೂಟ ಸರಕಾರದ ಅಧಿಕಾರ ಕ್ಷೇತ್ರದಲ್ಲಿ ಆಸ್ತಿ ಸಂಪಾದಿಸಬಹುದು. ಮತ್ತು ಯಾವದೇ ತರದ ಉದ್ಯೋಗವನ್ನು ಕೈಕೊಳ್ಳಬಹುದು.

ಅಸ್ಪೃಶ್ಯತೆಯನ್ನು ನಿರ್ನಾಮ ಮಾಡಲಾಗಿದೆ ಅದನ್ನು ಯಾವದೇ ರೀತಿಯಲ್ಲಿ ಆಚರಿಸುವದು ಅಪರಾಧವಾಗುವದು.

ಸರಕಾರವು ಯಾರಿಗೂ ಅನುವಂಶಿಕ ಬಿರುದನ್ನು ಕೊಡಲಾರದು.

ಒಕ್ಕೂಟದ ಯಾವದೇ ನಾಗರಿಕನು ಅಥವಾ ನೌಕರನು ಸರಕಾರದ ಪೂರ್ವ ಪರವಾನಿಗೆಯಿಲ್ಲ ಪರದೇಶಗಳಿಂದ ಕಾಣಿಕೆಗಳನ್ನಾಗಲೀ ಬಿರುದುಗಳನ್ನಾಗಲೀ ಸ್ವೀಕರಿಸತಕ್ಕದ್ದಲ್ಲ.

ಸಾರ್ವಜನಿಕ ಸುರಕ್ಷಿತತೆಗನುಸರಿಸಿ ಪ್ರತಿಯೊಬ್ಬ ನಾಗರಿಕನಿಗೆ ವಾಕ್; ಸಭಾ ಮತ್ತು ಸಂಘ ಸ್ವಾತಂತ್ರ್ಯವಿರುವದು.

ಪ್ರತಿಯೊಬ್ಬ ನಾಗರಿಕನು ಒಕ್ಕೂಟದಲ್ಲಿ ಬೇಕಾದಲ್ಲಿಗೆ ಪ್ರತಿಬಂಧವಿಲ್ಲದೆ ಸಂಚರಿಸಬಹುದು, ಬೇಕಾದಲ್ಲಿ ಮನೆ ಮಾಡಿಕೊಂಡಿದ್ದು ಆಸ್ತಿ ಸಂಪಾದಿಸಬಹುದು ಆದರೆ ಅಲ್ಪಸಂಖ್ಯಾಕರ ಹಿತ ಸಾಧನೆಯ ದೃಷ್ಟಿಯಿಂದ ಸರಕಾರವು ಕೆಲವು ಸೂಕ್ತ ನಿರ್ಬಂಧಗಳನ್ನು ಹಾಕಬಹುದು.

ನಾಗರಿಕನ ಪ್ರಾಣ ಮತ್ತು ಆಸ್ತಿಯನ್ನು, ಕಾಯಿದೆಯಿಂದಲ್ಲದೇ ಅನ್ಯ ಉಪಾಯಗಳಿಂದ ಯಾರೂ ಹರಣ ಮಾಡಲಾರದು.

ಕಾಯಿದೆಯು ಸಕಲರಿಗೂ ಸರಿಸಮಾನವಾಗಿ ಅನ್ವಯಿಸಲ್ಪಡುವದು.

ಮಾನವರ ಮಾರಾಟ ಮತ್ತು ಒತ್ತಾಯದ ಕೆಲಸಗಳನ್ನು ಪೂರ್ಣ ಪ್ರತಿಬಂಧಿಸಲಾಗಿದ್ದು, ಅವುಗಳಲ್ಲಿ ವ್ಯವಹಾರ ಮಾಡುವದು ಅಪರಾಧವಾಗುವದು.

೧೪ ವರ್ಷದ ಕೆಳಗಿನ ಬಾಲಬಾಲಿಕೆಯರನ್ನು ಕಾರಖಾನೆಗಳಲ್ಲಿ ಕೆಲಸಕ್ಕೆ ಹಚ್ಚತಕ್ಕದ್ದಲ್ಲ.

ಸಾರ್ವಜನಿಕ [illegible] ಮತ್ತು [illegible] ನಾಗರಿಕರೆಂಬ [illegible] ಧರ್ಮ [illegible] ಸ್ವಾತಂತ್ರ್ಯವಿರುವದು.

[illegible] ತೀಕರು [illegible] ಧರಿಸುವದು ಅವರ ಧರ್ಮಪದ್ಧತಿಯೆಂದು ಪರಿಗಣಿಸಲಾಗುವದು.

ಹೀಗೆ ಧರ್ಮಸ್ವಾತಂತ್ರ್ಯ ಕೊಟ್ಟದ್ದರೂ ಸಾಮಾಜಿಕ ಸುಧಾರಣೆಗಾಗಿ ಸರಕಾರವು ಕಾಯಿದೆಗಳನ್ನು ಮಾಡಬಲ್ಲದು.

ಧರ್ಮ ರಕ್ಷಣೆಗಾಗಿ ಕರ ಕೊಡತಕ್ಕದ್ದೆಂದು ಯಾರ ಮೇಲೆಯೂ ಒತ್ತಾಯ ಮಾಡತಕ್ಕದ್ದಲ್ಲ.

ಸರಕಾರದ ದ್ರವ್ಯ ಸಹಾಯ ಪಡೆಯುವ ಶಾಲೆಯ ವಿದ್ಯಾರ್ಥಿಗಳಿಗೆ ವಿಶಿಷ್ಟ ಧರ್ಮದ ಅಭ್ಯಾಸ ಮಾಡಬೇಕೆಂಬ ಅಥವಾ ಶಾಲೆಯ ಆವಾರದಲ್ಲಿ ವಿಶಿಷ್ಟ ಮೂರ್ತಿಯ ಪೂಜೆ ಮಾಡಬೇಕೆಂಬ ನಿರ್ಬಂಧವಿರತಕ್ಕದ್ದಲ್ಲ.

ಒತ್ತಾಯದ ಧರ್ಮಾಂತರಕ್ಕೆ ಕಾಯಿದೆಯ ಮನ್ನಣೆ ಸಿಗಲಾರದು.

ಅಲ್ಪ ಸಂಖ್ಯಾಕರ ಭಾಷೆ, ಸಂಸ್ಕೃತಿ ಮೊದಲಾದವುಗಳನ್ನು ರಕ್ಷಿಸಲಾಗುವದು.

ಅಲ್ಪ ಸಂಖ್ಯಾಕರು ತಮಗೆ ಸರಿದೋರಿದ ಶಿಕ್ಷಣ ಸಂಸ್ಥೆಗಳನ್ನು ತೊರೆದಿಸಬಹುದು.

ವ್ಯಕ್ತಿಯ ಅಥವಾ ಸಂಸ್ಥೆಯ ಆಸ್ತಿಯನ್ನು ಸಾರ್ವಜನಿಕ ಉಪಯೋಗಕ್ಕಾಗಿ ಕಾಯಿದೆಯಿಂದಲ್ಲದೆ ಅನ್ಯ ಉಪಾಯಗಳಿಂದ ಸ್ವಾಧೀನ ಪಡಿಸಿಕೊಳ್ಳತಕ್ಕದ್ದಲ್ಲ.

ಕಾಯದೆ ಮುರಿದವರಿಗೆ ಕಾಯಿದೆಗೆ ತಕ್ಕಂತೆ ಶಿಕ್ಷೆಯಾಗಬೇಕು.

ಈ ಹಕ್ಕುಗಳಿಗೆ ಧಕ್ಕೆ ಬಂದರೆ ವರಿಷ್ಠ ನ್ಯಾಯಾಲಯಕ್ಕೆ ಮೊರೆ ಹೋಗಲು ಸಕಲ ನಾಗರಿಕರಿಗೂ ಅಧಿಕಾರವಿರುವದು. ಮತ್ತು ವರಿಷ್ಠ ನ್ಯಾಯಾಲಯವು ಅಂಥ ಹಕ್ಕುಗಳನ್ನು ಕೊಡಿಸಲು ಆಜ್ಞೆ ವಿಧಿಸಬಹುದು.

ಸೈನಿಕರ ಮತ್ತು ಪೋಲೀಸರ ವಿಷಯದಲ್ಲಿ ಈ ಹಕ್ಕುಗಳನ್ನು ಎಷ್ಟರ ಮಟ್ಟಿಗೆ ಮಿತಗೊಳಿಸಬೇಕೆಂಬದನ್ನು ಶಾಸನ ಸಭೆಯು ನಿರ್ಣಯಿಸಬಹುದು.

ಈ ಹಕ್ಕುಗಳ ರಕ್ಷಣೆಗೆ ಹಾಗೂ ಅವುಗಳನ್ನು ಮುರಿದವರಿಗೆ ಶಿಕ್ಷೆ ವಿಧಿಸುವ ಕಾಯಿದೆಯನ್ನು ಶಾಸನ ಸಭೆಯು ಮಾಡತಕ್ಕದ್ದು.

ಇವುಗಳ ಹೊರ್ತು ೨೧ ವರ್ಷ ಮೀರಿದ ಸ್ತ್ರೀ ಪುರುಷರಿಗೆ ಮತಾಧಿಕಾರವಿರಬೇಕೆಂಬ ಹಕ್ಕನ್ನೂ ಜೋಡಿಸಬೇಕೆಂದು ಕೆಲವರ ಸೂಚನೆಯಿತ್ತು. ಆದರೆ ಅದನ್ನು ಮೂಲಭೂತ ಹಕ್ಕುಗಳಲ್ಲಿ ಸೇರಿಸದೆ ಬೇರೆ ಕಡೆ ಸೇರಿಸಬೇಕೆಂದು ಅಭಿಪ್ರಾಯ ಪಡಲಾಗಿದೆ.

ಈ ಹಕ್ಕುಗಳು ಕಾಯಿದೆಯ ಸಹಾಯದಿಂದ ಜಾರಿಯಲ್ಲಿ ತರತಕ್ಕಂಥವುಗಳಿರುತ್ತವೆ. ಕಾಯಿದೆಯಿಂದ ಜಾರಿಗೆ ತರಲಾಗದ ಆದರೆ ಸಾಮಾಜಿಕ ಸ್ವಾಸ್ಥ್ಯ ಹಾಗೂ ಸರಕಾರಿ ಆಡಳಿತೆಯ ದೃಷ್ಟಿಯಿಂದ ಅವಶ್ಯವಿರುವ ಮೂಲಭೂತ ಹಕ್ಕುಗಳ ಇನ್ನೊಂದು ಪಟ್ಟಿಯನ್ನು ಸಮಿತಿಯವರು ಬೇಗನೆ ಸಿದ್ಧಪಡಿಸುವವರಿದ್ದಾರೆ.

ಬೆಂಗಳೂರಲ್ಲಿ ಈಚೆಗೆ ನಡೆದ ಗಲಭೆಗಳ ಸಂಬಂಧ ಸಾರ್ವಜನಿಕ ಸುರಕ್ಷಿತತೆಯ ಕಾಯದೆಯ ಮೇರೆಗೆ ಬಂಧನದಲ್ಲಿ ಬಿದ್ದ ಸುಮಾರು ೨೫೦ ಜನರಲ್ಲಿ ಈ ಮೊದಲು ಬಿಡುಗಡೆಯಾದ ೧೨೦ ಜನರಲ್ಲದೆ ಈಗ ಮತ್ತೆ ೪೭ ಜನರನ್ನು ಬಂಧಮುಕ್ತಗೊಳಿಸಲಾಗಿದೆ: ಇನ್ನು ಕೇವಲ ೫೫ ಜನರು ಬಂಧನದಲ್ಲಿದ್ದಾರೆ.

ಬೆಂಗಳೂರು-ಮೈಸೂರು

ಮೈಸೂರ ನಗರ ಸಭೆಯ ಅಧ್ಯಕ್ಷರಾದ ಶ್ರೀ ರಾಮಚಂದ್ರರಾವ ಭಾಂಭೋರೆಯವರು ಕರ್ತವ್ಯದಕ್ಷರಾಗದಿರುವದರಿಂದ ಅವರನ್ನು ತೆಗೆದು ಹಾಕಬೇಕೆಂದು ಸರಕಾರಕ್ಕೆ ಸೂಚಿಸುವ ನಿರ್ಣಯವನ್ನು ಚರ್ಚಿಸಲು ತಾ ೨೪ ಕ್ಕೆ ಸಭೆ ಕರೆಯಬೇಕೆಂಬ ಪ್ರಾರ್ಥನೆಯನ್ನು ಅಧ್ಯಕ್ಷರು ತಿರಸ್ಕರಿಸಿ ನಗರ ಸಭಾ ನಿಯಮಗಳನ್ವಯ ಇದಕ್ಕೆ ಅವಕಾಶವಿಲ್ಲೆಂದು ತಿಳಿಸಿದ್ದಾರೆ.

ಮೈಸೂರು ಸಂಸ್ಥಾನದ ನಗರಗಳಲ್ಲಿ ವಾಸದ ಮನೆಗಳ ಅಭಾವವನ್ನು ಒದಗಿಸಲು ಕೃತಕ ಮನೆಗಳನ್ನು ಕಟ್ಟುವವಿಚಾರ ದಿವಾಣರ ಮನಸಿನಲ್ಲಿದ್ದು ಆ ಬಗ್ಗೆ ತಜ್ಞರನ್ನು ಕರೆಸುವ ಏರ್ಪಾಡು ನಡೆದಿದೆಯೆಂದು ತಿಳಿಯುತ್ತದೆ.

ಮೈಸೂರ ಸಂಸ್ಥಾನದ ಪತ್ರಿಕೋದ್ಯೋಗಿಗಳ ೫ ನೇ ವಾರ್ಷಿಕ ಸಮ್ಮೇಲನ ತಾ ೨೭ ಕ್ಕೆ ಮಾತೃಭೂಮಿ ಸಂಪಾದಕ ಶ್ರೀ ಶ್ರೀಕಂಠಯ್ಯನವರ ಅಧ್ಯಕ್ಷತೆಯಲ್ಲಿ ಜರಗಿತು. ದೇಶ ವಿದೇಶಗಳಿಂದ ಕ್ಷಣಾರ್ಧದಲ್ಲಿ ಸುದ್ದಿಗಳುಬರುತಿದ್ದರೂ ಸಂಸ್ಥಾನದೊಳಗಿನ ಸುದ್ದಿ ತಿಳಿಯಲು ಎರಡು ದಿನ ಹಿಡಿಯಲು ಕಾರಣವಾದ ಪರಿಸ್ಥಿತಿಯನ್ನು ಹೋಗಲಾಡಿಸಬೇಕೆಂದು ಅಧ್ಯಕ್ಷರು ಹೇಳಿದರು. ಸಮ್ಮೇಲನವನ್ನು ಉದ್ಘಾಟನೆಮಾಡಿದ ದಿವಾಣ ಸರ್ ಅರ್ಕಾಟ ರಾಮಸ್ವಾಮಿ ಮುದಲಿಯಾರರು ಪತ್ರಿಕೋದ್ಯೋಗದಘನತೆಹೊಣೆಗಾರಿಕೆಗಳನ್ನು ವಿವರಿಸಿದರು. ಗಾಂಧಿ,ಜಿನ್ನಾ ಶಾಂತಿ ಮನವಿಯನ್ನು ಸ್ವಾಗತಿಸುವ, ಕರ್ನಾಟಕ ಪ್ರಾಂತವನ್ನು ರಚಿಸಬೇಕೆಂದು ಘಟನಾ ಸಮಿತಿಗೆ ಸೂಚಿಸುವ, ಬ್ರಿಟಿಶ ಹಿಂದುಸ್ಥಾನದಲ್ಲಿ ಮಾಡಿದಂತೆ ಮೈಸೂರಲ್ಲೂ ವೃತ್ತಪತ್ರ ಕಾಗದ ನಿಯಂತ್ರವನ್ನು ತೆಗೆ ಹಾಕಬೇಕೆಂದು ಪ್ರಾರ್ಥಿಸುವ, ಪತ್ರಿಕಾ ಕಾಯದೆಯಲ್ಲಿ ಅವಶ್ಯಕ ಬದಲಾವಣೆ ಮಾಡಲು ಹಿಂದುಸ್ಥಾನ ಸರಕಾರದವರಂತೆ ಮೈಸೂರು ಸರಕಾರದವರೂ ಸಂಪಾದಕರನ್ನೊಳಗೊಂಡ ಸಮಿತಿ ರಚಿಸಬೇಕೆಂದು ಕೋರುವ ಗೊತ್ತುವಳಿಗಳಾದವು.

ನರೇಂದ್ರರನ್ನು ಹಿಂದೀ ಒಕ್ಕೂಟದಲ್ಲಿ ಉಳಿಯುವಂತೆ ಮಾಡಲು ಮತ್ತು ಹಿಂದುಸ್ಥಾನದ ವಿಭಜನೆಯನ್ನು ವಿರೋಧಿಸಲು ಇಬ್ಬಗೆಯ ಹೋರಾಟವನ್ನು ಪ್ರಾರಂಭಿಸಬೇಕೆಂದು ಪ್ರಸಿದ್ಧ ಸಾಮ್ಯವಾದಿ ಮುಂದಾಳುಗಳಾದ ಶ್ರೀ ಜಯಪ್ರಕಾಶ ನಾರಾಯಣರು ಬೆಂಗಳೂರಲ್ಲಿ ತಾ ೨೭ ಕ್ಕೆ ಸಾರ್ವಜನಿಕ ಸಭೆಯಲ್ಲಿ ಸಾರಿದರು. ೧೯೪೮ ಜೂನಿಗೆ ಬ್ರಿಟಿಶರು ಹೊರಟು ಹೋದೊಡನೆ ಸ್ವಾತಂತ್ರ್ಯ ಹೋರಾಟ ಮುಗಿದಂತಾಗಲಿಲ್ಲವೆಂದು ಅವರ ಅಭಿಪ್ರಾಯವಾಗಿತ್ತು. ದೇಶದ ಉಳಿದ ಕೆಲ ಭಾಗಗಳಲ್ಲಿ ಬ್ರಿಟಿಶರ ವರ್ಚಸ್ಸು ಉಳಿಯುವದು. ಸಂಪೂರ್ಣ ಸ್ವಾತಂತ್ರ್ಯಕ್ಕಾಗಿ ಮತ್ತೂ ಬಡಿದಾಡಬೇಕಾಗುವದು. ಬಡತನ, ನಿರುದ್ಯೋಗ, ಅಸಮಾನತೆ ಅನ್ಯಾಯ ಮತ್ತು ಬಂಡವಲಗಾರರಿಲ್ಲದ ಸ್ವರಾಜ್ಯ ಸ್ಥಾಪನೆಯಾಗಬೇಕಾದರೆ ಪ್ರಬಲ ಸಾಮ್ಯವಾದಿ ಪಕ್ಷದ ಸಂಘಟನೆಯಾಗಬೇಕು. ಸಾಮ್ಯವಾದದ ತಳಹದಿಯಲ್ಲಿಯೇ ಸ್ವರಾಜ್ಯಭವನವನ್ನು ಕಟ್ಟಬೇಕು. ಎಂದು ಅವರು ಹೇಳಿದರು. ದಂಡಿನಲ್ಲಿ ನೆರೆದ ಸಭೆಯಲ್ಲಿ ಅವರಿಗೆ ೧೩೭೦ ರೂ ನಿಧಿ ಅರ್ಪಿಸಲ್ಪಟ್ಟಿತು.

ಮದ್ರಾಸ ಹೈಕೋರ್ಟಿನ ನಿವೃತ್ತ ನ್ಯಾಯಾಧೀಶರಾದ ಶ್ರೀ ಪಾಂಡುರಂಗರಾಯರು ತಾ ೩೦ ಮುಂಜಾನೆ ತಮ್ಮ ೬೬ ನೇ ವಯಸ್ಸಿನಲ್ಲಿ ಬೆಂಗಳೂರಲ್ಲಿ ಹೃದಯ ವಿಕಾರದಿಂದ ನಿಧನ ಹೊಂದಿದರು.

ಮುಂಬಯಿ ಕ್ರಾನಿಕಲ್ ಪತ್ರಿಕೆಯ ಸಂಪಾದಕರಾದ ಶ್ರೀ ಸಯ್ಯದ ಅಬ್ದುಲ್ಲಾ ಬ್ರೆಲವಿಯವರು ಬೆಂಗಳೂರಿಗೆ ಬಂದಿದ್ದವರು ತಾ ೨೨ ಕ್ಕೆ ಮೈಸೂರು ಪತ್ರಿಕೋದ್ಯೋಗಿ ಸಂಘದ ಕಚೇರಿಗೆ ಭೆಟ್ಟಿಕೊಟ್ಟರು ವೃತ್ತಪತ್ರಿಕೋದ್ಯೋಗದಲ್ಲಿ ಜಾತೀಯ ಭಾವನೆಯಿರಬಾರದೆಂದೂ ರಾಷ್ಟ್ರೀಯತೆಯನ್ನು ಬೆಳೆಸಲು ಪತ್ರಿಕೋದ್ಯಮಿಗಳು ಪ್ರಯತ್ನಿಸಬೇಕೆಂದೂ ಅವರು ಉಪದೇಶಿಸಿದರು. ಬಸವನ ಗುಡಿಯಲ್ಲಿ ನಡೆಯುತಿರುವ ಅ ಭಾ ಖಾದಿ ಮತ್ತು ಸ್ವದೇಶಿ ಪ್ರದರ್ಶನಕ್ಕೂ ಅವರು ಭೆಟ್ಟಿಕೊಟ್ಟರಲ್ಲದೆ ಬಸವನಗುಡಿಯಲ್ಲಿ ಹೊಸದಾಗಿ ಪ್ರಾರಂಭವಾದ ಹಿಂದೀ ರಾಷ್ಟ್ರೀಯ ವಿಶ್ವಕೋಶ(Dirctionary)ಕಾರ್ಯಾಲಯದ ಪ್ರಾರಂಭೋತ್ಸವವನ್ನು ಜರಗಿಸಿದರು.

ಧರ್ಮ ರತ್ನಾಕರ ಶ್ರೀ ಬಿ. ಎಸ್. ಗೋಪಾಲರಾಯರ ಮೇಲೆ ಮೋಸದಆಪಾದನೆ ಹೊರಿಸುವ ಇನ್ನೆರಡು ಪ್ರಕರಣಗಳು ಹೂಡಲ್ಪಟ್ಟಿವೆ ಶ್ರೀಮತಿ ಎಮಿಲಿನ್ ಡಿಕಾಸ್ಟಾ ಮತ್ತು ಶ್ರೀಮತಿ ಬಿ.ಲಿಸ್ ಇವರು ೧೫೦೦೦, ೧೨೦೦ ಮತ್ತು ೧೦೦೦೦ ಈ ಮೂರು ಮೊತ್ತಗಳನ್ನು ತಮ್ಮಿಂದ ಸುಳ್ಳು ನಂಬಿಕೆ ಹುಟ್ಟಿಸಿ ತೆಗೆದುಕೊಂಡರೆಂದು ದೂರು ಕೊಟ್ಟಿದ್ದಾರೆ! ೧೨೫ ಸಾಕ್ಷಿಗ[illegible] ...ದಲ್ಲಿ ಉಲ್ಲೇಖಿಸಲಾಗಿದೆ.



ಮುಂಬಯಿ ಶೇರ ಪೇಟೆ

ರಾಜಕೀಯ ಸುದ್ದಿಗಳು ಕಳೆದ ವಾರ ಪೇಟೆಯಲ್ಲಿ ಏರಿಳಿತಗಳಿಗೆ ಕಾರಣವಾದವು. ಕೆಲ ಪಾಲುಗಳ ಮೇಲಿನ ನಿರ್ಬಂಧವನ್ನು ತೆಗೆದು ಹಾಕಿದ್ದರಿಂದ ಬೆಲೆಗಳು ಬಹಳ ಚೇತರಿಸಿಕೊಳ್ಳಲು ಕಾರಣವಾಯಿತು. ಟಾಟಾ ಸ್ಟೀಲ ಡೆಫರ್ಡ ಪಾಲುಗಳು ೨೧೨೨-೮-೦ ರಿಂದ ೨೨೨೫-೮-೦ ಗೇರಿದರೆ ಬಾಂಬೆ ಡಾಯಿಂಗ್ ೧೧೦೦-೦-೦ ರಿಂದ ೧೧೪೫-೦-೦ ಕ್ಕೇರಿ ೧೧೩೫-೦-೦ ಕ್ಕೆ ಬಂತು. ಫಿನ್ಲೆ ೩೦೮-೦-೦ ರಿಂದ ೨೯೩-೦-೦ ಕ್ಕಿಳಿದು ೩೧೭-೦-೦ ಕ್ಕೇರಿ ೩೧೬-೦-೦ ಕ್ಕೆ ಬಂತು. ೬೪೬ ರಿಂದ ೬೨೦ ಕ್ಕೆ ಬಂದು ೬೭೧-೦-೦ ರ ವರೆಗೂ ಹೋಗಿ ೬೬೪-೦-೦ ಕ್ಕೆ ತಿರುಗಿತು. ಸ್ವದೇಶಿ ೫೮೭-೦-೦ ರಿಂದ ೬೩೪-೦-೦ ಕ್ಕೇರಿ ೬೩೦-೦-೦ ಕ್ಕೆ ಮರಳಿತು. ಗೋಕಾಕ ೨೯೩-೦-೦ ರಿಂದ ೩೧೭-೦-೦ ಕ್ಕೇರಿ ೩೦೫-೦-೦ ಕ್ಕಿಳಿಯಿತು. ಇಂಡಿಯನ್ ಅಯರ್ನ ೨೫೧—೦—೦ ರಿಂದ ೨೬೯—೦—೦ ಕ್ಕೇರಿ ೨೬೭—೦—೦ ಕ್ಕೆ ಮರಳಿತು. ಸಿಂಧ್ಯಾ ಸ್ಟೀಮ ೩೧-೧೪-೦ ರಿಂದ ೩೨—೧೩—೦ ಕ್ಕೇರಿ ೩೨-೬-೦ಕ್ಕೆ ಬಂದರೆ ಅಸೋಸಿಯೆಟೆಡ ಸಿಮೆಂಟ್ಸ ೧೭೩-೦-೦ ರಿಂದ ೧೮೨-೦-೦ ಕ್ಕೇರಿ ೧೮೦-೮-೦ ತಿರುಗಿತು. ಬ್ಯಾಂಕುಗಳಲ್ಲಿ ಇಂಪೀರಿಯಲ್ ಎಸ್. ಸಿ. ೨೨೫೫-೦-೦ ರಿಂದ ೨೩೧೦-೦-೦ ಕ್ಕೂ ರಿಝರ್ವ ೧೧೫-೦-೦ ರಿಂದ ೧೧೯-೮-೦ ಗೇರಿ ೧೧೮-೮-೦ ಗೂ ಸೆಂಟ್ರಲ್‌ಬ್ಯಾಂಕ ೧೦೨-೦-೦ ರಿಂದ ೧೦೭-೦-೦ ಕ್ಕೂ ಸ್ಥಿತ್ಯಂತರ ಹೊಂದಿದವು. ಸರಕಾರಿ ಸಾಲಪತ್ರಗಳಲ್ಲಿ ಜಿ. ಪಿ. ನೋಟು ೧೦೧-೧೪-೦ ರಿಂದ ೧೦೧-೧೫-೦ ರ ಹತ್ತಿರ ಸುಳಿಯಿತು. ೧೯೪೭-೫೦ ಸಾಲ ೧೦೧-೮-೦ ರಿಂದ ೧೦೧-೪-೦ ಕ್ಕೆ ಬಂತು.

ಚಿನ್ನ ಬೆಳ್ಳಿ

ಚಿನ್ನ ಬೆಳ್ಳಿ ವ್ಯಾಪಾರಗಳ ಸಂಘದ ಸಾಮಾನ್ಯ ಸಭೆ ತಾ. ೨೯ ಕ್ಕೆ ಸೇರಿತು. ಪರಮಾವಧಿ ದರಗಳನ್ನು ನಿರ್ಣಯಿಸಿ ಆಮೇಲೆ ಹಿಂತೆಗೆದುಕೊಂಡದ್ದರಿಂದ ಹಾನಿಗೊಂಡ ವ್ಯಾಪಾರಿಗಳು ಸಂಘದ ಮೇಲೆ ವಾಜ್ಯ ಹೂಡಿ ಸಂಘದ ತಪ್ಪೆಂದು ಹಾಯಕೋರ್ಟಿನಲ್ಲಿ ತೀರ್ಮಾನವಾಗಿದ್ದುದರಿಂದ ಪರಿಸ್ಥಿತಿಯನ್ನು ಪರಿಶೀಲಿಸಲು ಈ ಸಭೆ ಸೇರಿತು. ಆದರೆ ಅದರ ನಿರ್ಣಯವಿನ್ನೂ ಹೊರಬಿದ್ದಂತಿಲ್ಲ. ಈ ನಡುವೆ ವಾಯದೆ ವ್ಯಾಪಾರವಿಲ್ಲ. ತಯಾರಿ ಬೆಳ್ಳಿಗೆ ವಿಪರೀತ ಬೇಡಿಕೆಯಿದೆ. ತಾ ೨೬ ಕ್ಕೆ ಚಿನ್ನದ ಬೆಲೆ ೧೧೦-೮-೦ ವರೆಗೂ ಹೋಯಿತು. ಈಗಲೂ ೧೭೪-೮-೦ ಯಿಂದ ೧೮೧-೮-೦ ವರೆಗೆ ಹೋಗಿ ಈಗ ೧೭೭-೦-೦ ರಲ್ಲಿದೆ.

ಅರಳೆ

ಸರಕಾರ ಒಂದೇ ಸವನೆ ಅರಳೆಯನ್ನು ಕೊಳ್ಳುತಿದ್ದರೂ ಬೆಲೆಗಳು ಕನಿಷ್ಠ ಮಟ್ಟಕ್ಕಿಂತ ಬಹಳ ಏರಲೊಲ್ಲವು. ಜುಲೈ ಅರಳೆ ೪೩೫-೧೦-೦ ರಿಂದ ೪೩೮-೧೪-೦ ರ ವರೆಗೇರಿದರೂ ೪೩೭-೬-೦ ಕ್ಕೆ ಮರಳಿತು. ಸಪ್ಟೆಂಬರ ೪೪೪-೮-೦

ಎಣ್ಣೆ ಕಾಳು

ಶೇಂಗಾ	೧೪೬-೦-೦
ಅಗಸಿ	೨೬-೨-೦
ಅಗಸಿ ಎಣ್ಣೆ	೧೭-೧೪-೦

ಶಿವಮೊಗ್ಗೆ

ಅಡಿಕೆ ದೇಶಾವರ ನಂ೧ ಮಣ ೧ಕ್ಕೆ		೫೦-೫೨
,, ,,	೨	೪೮-೫೦
ಬೆಟ್ಟೆ ವಂತಿ		೩೫-೩೬
ಬೆಟ್ಟೆ		೨೯-೩೧
ಕೊರಸಾಲು		೪೩-೪೬
ರಾಜಾ ಅಲವು		೪೫-೪೮
ನುಲಿ		೪೫-೪೭

ಸಾಂಗಲಿ ಪೇಟೆ

ಅರಿಷಣ ಹೇರು	೯೬-೧೦೦॥
ಮೆಣಸಿನಕಾಯಿ ಹೇರು ,,	೧೬೦
ಶೇಂಗಾ ಖಂಡಿ	೧೧೦

ಹುಬ್ಬಳ್ಳಿ ಪೇಟೆ

ಹೊಸ ಜಯವಂತ ಹತ್ತಿ	೨೫೦-೨೬೦
ಹಳೆ ,,	೨೩೦-೨೫೦
,,	೨೦೫-೨೨೫
ಅಪ್ಲಂಡ ಹತ್ತಿ	೨೫೦-೨೭೦
ಹೊಸಜಿನ	೨೭೫-೨೮೦
ಹಳೆ ಜಿನ	೨೬೫-೨೭೫
ಡಬಲರೋಲ	೧೬೦-೧೭೦

ಮೈಸೂರ ಸತ್ಯಾಗ್ರಹ ಮುಂದೆಬಿತ್ತು

ದಿವಾಣ ಕಾಂಗ್ರೆಸ ಅಧ್ಯಕ್ಷರ ಭೆಟ್ಟಿಯ ಫಲ

ಮೇ ತಾ. ೧ ಕ್ಕೆ ಪ್ರಾರಂಭವಾಗಬೇಕೆಂದು ಮಾರ್ಚ ತಿಂಗಳಲ್ಲಿ ಅ. ಮೈ. ಕಾಂಗ್ರೆಸ್ ಸಮಿತಿ ನಿರ್ಣಯಿಸಿದ ಸತ್ಯಾಗ್ರಹ ಆರಂಭವಾಗುವದಿಲ್ಲೆಂದು ಕಾಂಗ್ರೆಸ್ ಕಚೇರಿಯಿಂದ ಅಧಿಕೃತ ಪ್ರಕಟನೆ ಹೊರಬಿದ್ದಿದೆ.

ಕಳೆದವಾರ ಮೈಸೂರು ದಿವಾಣರು ಕಾಂಗ್ರೆಸ್ ಅಧ್ಯಕ್ಷರಾದ ಶ್ರೀ ಕೆ. ಚಂಗಲರಾಯರೆಡ್ಡಿಯವರನ್ನು ಆಮಂತ್ರಣದ ಮೇರೆಗೆ ಭೆಟ್ಟಿಯಾದುದರ ಪರಿಣಾಮವಾಗಿ ಈ ನಿರ್ಣಯ ಕೈಕೊಳ್ಳಲ್ಪಟ್ಟದೆಯೆಂದು ಸ್ಪಷ್ಟವಾಗಿದೆ. ಕಾಂಗ್ರೆಸ್ ಅಧ್ಯಕ್ಷರು ತಿರುಗಿ ತಾ. ೨೯ ಕ್ಕೆ ಸರ್ ಅರ್ಕಾಟರನ್ನು ಭೆಟ್ಟಿಯಾದರು. ಮತ್ತು ತಾ. ೩೦ ಕ್ಕೆ ಸತ್ಯಾಗ್ರಹವನ್ನು ಮುಂದೂಡುವ ನಿರ್ಣಯಕ್ಕೆ ಕಾಂಗ್ರೆಸ್ ಕಾರ್ಯಸಮಿತಿ ಬಂತು.

ಪ್ರಾರಂಭದಲ್ಲಿ ಈ ಭೆಟ್ಟಿಯ ಪರಿಣಾಮದ ಬಗ್ಗೆ ನಿರಾಶೆಯು ಹಬ್ಬಿದ್ದರೂ ಆ ಮೇಲೆ ಪರಿಸ್ಥಿತಿ ಬದಲಾಯಿತು. ಶ್ರೀ ರೆಡ್ಡಿಯವರು ದಿವಾಣರನ್ನು ಭೆಟ್ಟಿಯಾದಾಗ ಕಾಂಗ್ರೆಸ್ಸಿನ ಮುಖ್ಯ ಬೇಡಿಕೆಗಳನ್ನು ವಿಶದೀಕರಿಸಿದರೆಂದು ತಿಳಿಯುತ್ತದೆ. (೧) ಮೈಸೂರು ಮಹಾರಾಜರು ಸಾರಬೇಕೆಂದಿರುವ ರಾಜಕೀಯ ಸುಧಾರಣೆಗಳ ಗುರಿ ಹೊಣೆಗಾರ ಸರಕಾರದ ಸ್ಥಾಪನೆಯೇ ಇದೆಯೆಂದು ಸ್ಪಷ್ಟಗೊಳಿಸಬೇಕು, (೨) ಅದರ ಪೂರ್ವಭಾವಿಯಾಗಿ ಪ್ರಜಾಸತ್ತೆಗನುಗುಣವಾಗಿ ತಾತ್ಪೂರ್ತಿಕ ಆಡಳಿತದ ಏರ್ಪಾಡುಗಳಾಗಬೇಕು; (೩) ಶ್ರೀಮನ್ಮಹಾರಾಜರ ಕೃಪಾಛತ್ರದಲ್ಲಿ ಹೊಣೆಗಾರ ಸರಕಾರದ ಸ್ಥಾಪನೆಯನ್ನು ಧ್ಯೇಯವಾಗಿಟ್ಟುಕೊಂಡು ಘಟನಾ ಸಮಿತಿಯನ್ನು ಕರೆಯತಕ್ಕದ್ದು. ಇವುಗಳನ್ನು ಕಾಂಗ್ರೆಸ್ ಅಧ್ಯಕ್ಷರು ಒತ್ತಿ ಹೇಳಿದರಂತೆ.

ಇದಕ್ಕೆ ದಿವಾಣರ ಪ್ರತಿಕ್ರಿಯೆ ಹೇಗಾಯಿತೊ ಹೇಳಬರುವದಿಲ್ಲ. ೧೫೦ ನಿಮಿಷಗಳ ಈ ಮಾತುಕತೆಯ ನಂತರ ಕಾಂಗ್ರೆಸ್ ಕಾರ್ಯಸಮಿತಿಯ ಅನೇಕ ಸಭೆಗಳು ಜರುಗಿದವು. ದಿವಾಣರೊಡನೆ ಅಧ್ಯಕ್ಷರ ಎರಡನೆ ಭೆಟ್ಟಿಯೂ ಆಯಿತು.

ಕಾಂಗ್ರೆಸ್ಸು ಮನಸು ಬದಲಿಸಲು ಅನೇಕ ಕಾರಣಗಳಿರಬಹುದು. ದಿವಾಣರು ಈಗ ಪ್ರಾರಂಭಿಸಿರುವ ಪಕ್ಷ ಪಂಗಡಗಳ ಭೆಟ್ಟಿಯ ಶ್ರೇಣಿ ಮುಗಿದಾಗ ತನ್ನ ಬೇಡಿಕೆಗೆ ಹತ್ತಿರವಾದುದೇನಾದರೂ ದೊರಕದಿರದೆಂದು ಅದಕ್ಕೆ ಮನವರಿಕೆಯಾಗಿರಬಹುದು. ದಿವಾಣರು ಈಗಾಗಲೆ ಲೀಗ ಮತ್ತು ಪ್ರಜಾಪಕ್ಷಗಳ ಮುಂದಾಳುಗಳೊಡನೆ ಭೆಟ್ಟಿ ಮಾಡಿದ್ದಾರೆ. ಈಗ ದಿಲ್ಲಿಗೆ ಹೋಗಿದ್ದು ಮರಳಿದೊಡನೆ ಪುನಃ ಮಾತುಕತೆಯನ್ನು ಮುಂದುವರಿಸುವರು. ಮೈಸೂರು ಸಂಸ್ಥಾನ "ಸ್ವತಂತ್ರ" ವಾಗಿರುವ ಹುಚ್ಚುಬಿಟ್ಟು ಘಟನಾ ಸಮಿತಿಯಲ್ಲಿ ಭಾಗವಹಿಸಿ ಹಿಂದೀ ಒಕ್ಕೂಟದಲ್ಲಿ ಸೇರುವದು ನಿಶ್ಚಿತವೆಂದು ಭಾವಿಸಲ್ಪಟ್ಟಿದೆ. ಈ ನಂಬಿಕೆಯೂ ಕಾಂಗ್ರೆಸ್ಸಿನ ನಿರ್ಣಯಕ್ಕೆ ಕಾರಣವಾಗಿರಬಹುದು. ಮೇಲಾಗಿ ದಿವಾಣ ಸರ್ ಅರ್ಕಾಟರೇ ಬಂಗಾಲ ಗವರ್ನರರಾಗಿ ಹೊರಟುಹೋಗುವರೆಂಬ ಸುದ್ದಿ ದಟ್ಟವಾಗಿ ಹಬ್ಬಿದೆ. ಸರ್ ಸಿದ್ದಪ್ಪ ಕಂಬಳಿಯವರಿಗೆ ಮೈಸೂರಲ್ಲಿ ದೊರಕುವದೆಂದೂಹಿಸಲ್ಪಟ್ಟ "ದೊಡ್ಡ ಹುದ್ದೆ" ದಿವಾಣ ಪದವಿಯೇ ಇರಬಹುದೆಂದೂ ತರ್ಕಿಸಲಾಗಿದೆ.

ತಾ ೨೪ ಕ್ಕೆ ಮೈಸೂರು ದಿವಾಣ ಸರ್ ಅರ್ಕಾಟರಿಗೆ ಸೆಕ್ರೆಟರಿಯೆಟ್‌ಮತ್ತು ತತ್ಸಂಬಂಧಿ ಕಚೇರಿಗಳ ನಾನ್ ಗಜೆಟೆಡ್ ಅಧಿಕಾರಿಗಳು ಏರ್ಪಡಿಸಿದ ಸತ್ಕಾರ ಕೂಟದಲ್ಲಿ ಸೆಕ್ರೆಟರಿಯೆಟ ನೌಕರರ ಸಂಘ ಸಾರಿಗೆ ಮೊದಲಾದ ಬಗ್ಗೆ ಸಲಹೆ ಕೊಡಲು ನೇಮಿಸಿದ ಸಮಿತಿ ಇನ್ನೊಂದು ವಾರದಲ್ಲಿ ವರದಿ ಒಪ್ಪಿಸುವದೆಂದೂ ಸರಕಾರ ಸಹಾನುಭೂತಿಯಿಂದ ನಿರ್ಣಯ ತೆಗೆದು ಕೊಳ್ಳುವದೆಂದೂ ದಿವಾಣರು ಆಶ್ವಾಸನವಿತ್ತರು.

ಅ. ಕ. ಸಾಮ್ಯವಾದಿ ಸಮ್ಮೇಲನ

ಅಂಗೀಕೃತ ಗೊತ್ತುವಳಿಗಳು

ಅಖಿಲ ಭಾರತ ಸಾಮ್ಯವಾದಿ ಪಕ್ಷದ ಕರ್ನಾಟಕ ಶಾಖೆಯ ಪ್ರಥಮ ಸಮ್ಮೇಳನವು ಮಂಗಳೂರಲ್ಲಿ ತಾ. ೨೩ ಮತ್ತು ೨೪ ರಂದು ಶ್ರೀ ಕಮಲಾದೇವಿಯವರ ಅಧ್ಯಕ್ಷತೆಯಲ್ಲಿ ಜರಗಿತು. ಈ ಸಮ್ಮೇಳನದ ಪ್ರತಿನಿಧಿ ಅಧಿವೇಶನದಲ್ಲಿ ಅತಿ ಮಹತ್ವದ ನಿರ್ಣಯಗಳಾದುವು. ನಿರ್ಣಯದ ಚರ್ಚೆಯಲ್ಲಿ ಪ್ರತಿನಿಧಿಗಳು ಹೆಚ್ಚಿನ ಆಸ್ಥೆ ತೋರಿಸುತಿದ್ದರು. ನಿರ್ಣಯಗಳಲ್ಲಿ ಪಕ್ಷದ ಧ್ಯೇಯ ಧೋರಣೆ, ಮೈಸೂರು ಸತ್ಯಾಗ್ರಹ, ಅಂತರರಾಷ್ಟ್ರೀಯ, ನಾಗರಿಕ ಸ್ವಾತಂತ್ರ್ಯ ಸಂಸ್ಥಾನಗಳ ರಾಜಕೀಯ, ಕರ್ನಾಟಕ ಏಕೀಕರಣ ಮುಂತಾದ ವಿಚಾರಗಳ ಕುರಿತಾದ ಪಕ್ಷದ ಅಭಿಪ್ರಾಯವನ್ನೂ ಜನತೆಗೀಯತಕ್ಕ ಎಚ್ಚರಿಕೆಯನ್ನೂ ಸ್ಪಷ್ಟಪಡಿಸಲಾಗಿದೆಯಲ್ಲದೆ ಮತ್ತೊಂದು ನಿರ್ಣಯದಲ್ಲಿ ದಿವಂಗತ ವೀರಭದ್ರಪ್ಪ ಎಲೆಗಾರರ ಮರಣಕ್ಕಾಗಿ ದುಃಖ ಸೂಚನೆಯನ್ನೂ ಮಾಡಲಾಗಿದೆ.

(೧) ಕಾನಪುರ ವಾರ್ಷಿಕ ಅಧಿವೇಶನದಲ್ಲಿ ಅಂಗೀಕರಿಸಿದ ಧೋರಣೆಯನ್ನು ಒಪ್ಪಿ ಭಾರತದಲ್ಲಿ ಪ್ರಜಾಪ್ರಭುತ್ವದ ಸಾಮ್ಯವಾದಿ ಪ್ರಜಾಸಾಜ್ಯ ಸ್ಥಾಪಿಸಲು ಈ ಅಧಿವೇಶನ ಒಪ್ಪಿ ಅದನ್ನು ಕಾರ್ಯದಲ್ಲಿಳಿಸಲು ಬದ್ಧವಾಗಿದೆ. ೨ ಬ್ರಿಟಿಶರ ವಿಭಜನೆಯ ತಂತ್ರವನ್ನು ವಿರೋಧಿಸುವದಲ್ಲದೆ ನಡುಗಾಲ ಸರಕಾರಕ್ಕೆ ಅಧಿಕಾರ ತ್ಯಾಗ ಮಾಡಲು ಸೂಚಿಸುತ್ತದೆ. (೩) ಹೊಣೆಗಾರ ಸರಕಾರ ಸಿಗಬೇಕೆಂದು ಮೈಸೂರು ಕಾಂಗ್ರೆಸ್ಸು ಹೂಡಲಿರುವ ಸತ್ಯಾಗ್ರಹಕ್ಕೆ ಸಮ್ಮೇಳನವು ಬೆಂಬಲ ಕೊಡುತ್ತಿದೆ. (೪) ಏಶಿಯವು ತೀವ್ರವಾಗಿ ದಾಸ್ಯ ಸಂಕೋಲೆಗಳನ್ನು ಕಡಿದೊಗೆಯಲು ಹೋರುತ್ತಿದ್ದರೂ ಅದಿನ್ನೂ ಪಾಶ್ಚಿಮಾತ್ಯ ಬೇಟೆಗಾರರ ಕ್ಷೇತ್ರವಾಗಿದೆ. ಈ ಪರಿಸ್ಥಿತಿ ಮಾಯವಾಗುವ ವರೆಗೆ ಯುದ್ಧ ತಪ್ಪಿದ್ದಲ್ಲ. (೫) ಪ್ರಾಂತಿಕ ಸರಕಾರಗಳು ನಾಗರಿಕ ಸ್ವಾತಂತ್ರ್ಯದ ಮೇಲೆ ನಡೆಸುತ್ತಿರುವ ಆಕ್ರಮಣಗಳನ್ನು ತೀವ್ರವಾಗಿ ಸಮ್ಮೇಲನ ನಿಷೇಧಿಸುತ್ತದೆ. (೬) ಹಿಂದೀ ಸ್ವಾತಂತ್ರ್ಯ ಪರಿಪೂರ್ಣವಾಗಬೇಕಾದರೆ ಸಂಸ್ಥಾನಗಳು ಭಾರತದಲ್ಲಿ ಸೇರಬೇಕು. (೭) ಈ ಸಮ್ಮೇಲನವು ಅಖಂಡ ಕರ್ನಾಟಕ ಪ್ರಾಂತ ರಚನೆಗೆ ಬೆಂಬಲ ಕೊಡುತ್ತದೆ. ಘಟನಾ ಸಮಿತಿಯ ಸದಸ್ಯರು ಭಾಷಾವಾರ ಪ್ರಾಂತರಚನೆಯನ್ನೊಪ್ಪಿ ಗಡಿ ಸಮಿತಿ ರಚಿಸಬೇಕು ಎಂಬ ಗೊತ್ತುವಳಿಗಳು ಅಂಗೀಕೃತವಾದುವು.

ಅ. ಭಾ. ಎರಡನೇ ಅಡಿಕೆ ಪರಿಷತ್ತು

ದಿನಾಂಕ ೨೪ನೇ ದಿನ ಅ. ಭಾ. ಎರಡನೇ ಅಡಿಕೆ ಪರಿಷತ್ತು ಶ್ರೀ ಬೆಟ್ಟಗೆರಿ ಕೃಷ್ಣಭಟ್ಟರ ಅಧ್ಯಕ್ಷತೆಯಲ್ಲಿ ತಾ. ೨೦ಕ್ಕೆ ಮಂಡಾಜೆಯಲ್ಲಿ ಜರುಗಿತು. ಅಧ್ಯಕ್ಷರು ತಮ್ಮ ಭಾಷಣದಲ್ಲಿ ಅಡಿಕೆ ಬೇಸಾಯಗಾರರು ತಮ್ಮ ಪರಿಷತ್ತು ಜರುಗಿಸಿ ಸಂಘಟನೆಯಿಂದ ಕೆಲಸಮಾಡುವದರಿಂದುಂಟಾಗುವ ಪ್ರಯೋಜನೆಯನ್ನು ವಿವರಿಸಿ, ಎಲ್ಲರ ಸಹಕಾರವನ್ನು ಕೋರಿದರು. ಪರಿಷತ್ತಿನಲ್ಲಿ ಅನೇಕ ಮಹತ್ವದ ಗೊತ್ತುವಳಿಗಳು ಪಾಸಾದವು. ಅಡಿಕೆ ವ್ಯವಸಾಯದ ಅಭಿವೃದ್ಧಿಯ ಬಗ್ಗೆ ಆಲ್ ಇಂಡಿಯಾ ಬಿಟಲ್‌ನಟ್ ಬೋರ್ಡ ಎಂಬ ಸಂಸ್ಥೆಯನ್ನು ಸ್ಥಾಪಿಸುವಂತೆ ಕೇಂದ್ರ ಸರಕಾರಕ್ಕೆ ಕೇಳಿಕೊಳ್ಳಬೇಕೆಂಬ ಗೊತ್ತುವಳಿಯೂ ಪಾಸಾಯಿತು. ಮರುದಿನ ದಕ್ಷಿಣ ಭಾರತ ಮಲೆನಾಡ ಪರಿಷತ್ತು ಶ್ರೀ ಭೂಪಾಳಂ ಆರ್ ಚಂದ್ರಶೇಖರಯ್ಯನವರ ಅಧ್ಯಕ್ಷತೆಯಲ್ಲಿ ಜರುಗಿತು.

ಚಂದಾದಾರರಿಗೆ ಸೂಚನೆ

ಮೂರು ತಿಂಗಳಿಗೆ ಅಥವಾ ಕಡಿಮೆ ಮುದ್ದತಿಗೆ ವ್ಹಿ. ಪಿ. ಕಳಿಸುವದಿಲ್ಲ. ಮುಂಗಡ ಹಣ ಕಳಿಸಬೇಕು. ಅಂಚೆಯ ಅವ್ಯವಸ್ಥೆಯಿಂದ ಪತ್ರಿಕೆ ತಲ್ಪದಿದ್ದರೆ ನಾವು ಹೊಣೆಯಲ್ಲ. ಅವಧಿ ಮುಗಿಯುವದೆಂಬದನ್ನು ನೀವೇ ನೆನಪಿಟ್ಟು ಹಣ ಕಳಿಸಬೇಕು. ಯೋಗ್ಯ ವೇಳೆಗೆ ಹಣ ಬರದಿದ್ದರೆ ಏನನ್ನು ತಿಳಿಸದೆ ಪತ್ರಿಕೆ ನಿಲ್ಲಿಸಲಾಗುವದು.

ಕರ್ಮವೀರ ಚಂದಾವಿವರ

ಅಂಚೆ ವೆಚ್ಚ ಸಹಿತ ಚಂದಾ ಹಣ ಮುಂಗಡ

೧ ವರ್ಷಕ್ಕೆ	೬—೪—೦
೬ ತಿಂಗಳಿಗೆ	೩—೪—೦
೩ ,,	೧—೧೨—೦

ವ್ಹಿ. ಪಿ. ಯಿಂದ ತರಿಸಿಕೊಂಡಲ್ಲಿ ಪ್ರತಿಗೆ ೬ ಆಣೆ ಹೆಚ್ಚಿಗೆ ಬೀಳುವದು.

ಚಿಕ್ಕ ಕತೆ



ನಾನು ಮತ್ತು ಶಶಿಕಾಂತ ಜೀವದ ಗೆಳೆಯರೆಂದು ಹೇಳುವದಕ್ಕಿಂತ ಅವಳಿ ಜವಳಿ ಮಕ್ಕಳೆಂದೇ ಕಾಣುತ್ತಿದ್ದೆವು. ಕೂಡಿಯೇ ಆಡಿ ಕೂಡಿಯೇ ಬೆಳೆದಿದ್ದೆವು. ಅಂತೆಯೇ ನಮ್ಮ ದೊಡ್ಡವ್ವ ನಮ್ಮನ್ನು ಕಂಡಾಗೆಲ್ಲ, ಕಾಮಧೇನುವಿನ ಕೋಡುಗಳಂತಿದ್ದಾರೆ ಎನ್ನುತ್ತಿದ್ದರು. ನಾವು ಹುಟ್ಟಿ ಕಣ್ಣು ತೆರೆದುದು ಒಂದೇ ಕಾಲಕ್ಕೆ. ಅದ್ದರಿಂದ ನಮ್ಮ ಅಂಗಿ ಚಣ್ಣಗಳೂ ಒಂದೇ ಆಕಾರದವಿರುತ್ತಿದ್ದವು. ಒಂದೇ ಬಸವಣ್ಣನನ್ನು ತೆಗೆದುಕೊಂಡು ಆಡಿದೆವು. ಇಬ್ಬರೂ ಒಂದೇ ಆಕಳ ಹಾಲನ್ನು ಸೇವಿಸಿ ಬೆಳೆದೆವು. ಒಬ್ಬ ಶಿಕ್ಷಕನೇ ನಮ್ಮೀರ್ವರಿಗೂ 'ಅ ಆ' ಕಲಿಸಿದನು. ಕೂಡಿಯೇ ಮ್ಯಾಟ್ರಿಕ್ ಪಾಸಾಗಿ ಕೂಡಿಯೇ ಕಾಲೇಜಿನ ಕಟ್ಟೆಯನ್ನು ಹತ್ತಿದೆವು.

ಇಷ್ಟೆಲ್ಲ ಇದ್ದ ಬಳಿಕ ನೀವು ಒಂದೇ ವೇಳೆಗೆ ಬಹುಶಃ ಒಂದೇ ಹಂದರದಲ್ಲಿ ಮದುವೆಯಾಗಿರಬೇಕೆಂದು ನೀವು ಹೇಳಬಹುದು. ಇಲ್ಲ, ಅದು ಶಕ್ಯವಾಗಲಿಲ್ಲ. ಕಪಟ ನಾಟಕ ಸೂತ್ರಧಾರನ ಇಚ್ಛೆಗೆ ಅದು ಬರಲಿಲ್ಲ.

ನಾನು ಇಂಟರಿನಲ್ಲಿದ್ದಾಗ ನನ್ನ ಮದುವೆಯಾಯಿತು. ನನ್ನ ಮದುವೆಯ ಮಾತು ನಡೆದಾಗ ಶಶಿಕಾಂತನೂ ನಾನೂ ಒಂದೇ ಹಂದರದಲ್ಲಿ ಮದುವೆಯಾಗಬೇಕೆಂದು ನನಗನಿಸುತ್ತಿತ್ತು. ಇದೇನು ಅಶಕ್ಯವಿರಲಿಲ್ಲ. ವೆಚ್ಚ ಕಡಿಮೆ ಹತ್ತುವದೆಂದು ನನ್ನ ಹಿರಿಯರು ನನ್ನ ಹಾಗೂ ನನ್ನ ಕಕ್ಕನ ಮಗಳಾದ ಕಮಲಿನಿಯ ಮದುವೆಯನ್ನು ಒಂದೇ ಹಂದರದಲ್ಲಿ ಮಾಡಬೇಕೆಂದು ನಿಶ್ಚಯಿಸಿದ್ದರು. ನನ್ನ ಮದುವೆ ಗೊತ್ತಾದ ಕೂಡಲೇ ಕಮಲಿನಿಗಾಗಿ ವರ ಹುಡುಕುವದು ಜೋರಿನಿಂದ ನಡೆಯಿತು. ಶಶಿಕಾಂತನೇ ಕಮಲಿನಿಯನ್ನೇಕೆ ಆಗಬಾರದು? ಎಂಬ ವಿಚಾರ ನನ್ನ ತಲೆಯಲ್ಲಿ ಸುಳಿಯಿತು. ಶಶಿಕಾಂತನಿಗೆ ಈ ವಿಚಾರ ತಿಳಿಸಿದೆ. ಕಮಲಿನಿಯ ಸೌಂದರ್ಯವನ್ನು ವರ್ಣಿಸಿದೆ. ಕಕ್ಕನು ಕೊಡುವ ವರದಕ್ಷಿಣೆಯ ಮೋಹವನ್ನು ಒಡ್ಡಿದೆ. ಕೂಡಿಯೇ ಬೆಳೆದವರು ಒಂದೇ ಹಂದರದಲ್ಲಿ ಅದೇ ಆಚಾರ್ಯರ ಆಶೀರ್ವಾದದಿಂದ ಚತುರ್ಭುಜರಾಗುತ್ತೇವೆಂದು ಹೇಳಿದೆ.

"ಬಿ. ಎ. ಆಗುವ ವರೆಗೆ ಲಗ್ನ ಮಾಡಿಕೊಳ್ಳಲಿಚ್ಛಿಸುವದಿಲ್ಲ," ಎಂದು ಸಾರಿದ ಶಶಿ. ಭೀಷ್ಮನು ಕೂಡ ತನ್ನ ಪ್ರತಿಜ್ಞೆ ಮಾಡುವಾಗ ಎರಡು ಸಾರೆ ವಿಚಾರ ಮಾಡಿರಬೇಕು. ಆದರೆ ಶಶಿಕಾಂತ ತನ್ನ ಮೊದಲನೇ ವಿಚಾರವೇ "ಫಾಯನಲ್" ಎಂದು ಬಿಟ್ಟ. ಇದರಿಂದ ನನ್ನ ಉತ್ಸಾಹ ಕುಗ್ಗಿತೇನೊ ನಿಜ, ಆದರೆ ನನ್ನ ಮತ್ತು ಕಮಲಿನಿಯ ಮದುವೆಗಳು ಹಿರಿಯರು ಯೋಜಿಸಿದಂತೆ ಒಂದೇ ಹಂದರದಲ್ಲಾಗುವಂತೆ ಆದವು.

ಮುಂದೆರಡು ವರ್ಷಕ್ಕೆ ನಾವು ಬಿ. ಎ. ಪದವಿಗಳನ್ನು ಪಡೆದುಕೊಂಡು ಕಾಲೇಜಿನಿಂದ ಹೊರಬಿದ್ದೆವು. ವಿವಾಹಿತ ಈ ದೃಷ್ಟಿಯಿಂದ ಶಶಿಕಾಂತನ ಲಗ್ನವನ್ನು ಬೇಗನೆ ಮಾಡುವದು ನನ್ನದೆ ಕರ್ತವ್ಯವೆಂದು ನನಗನಿಸತೊಡಗಿತು. ಅವನ ವಿವಾಹಕ್ಕಾಗಿ ಹೊಂಚು ಹಾಕತೊಡಗಿದೆ. ಒಂದು ಸಂಧಿ ತಾನಾಗಿಯೇ ಒದಗಿ ಬಂದಿತು. ನನ್ನ ಅಕ್ಕನ ಮಗಳಾದ ಲತೆಯ ಸಲುವಾಗಿ ಹಿರಿಯರು ವರ ಹುಡುಕತೊಡಗಿದ್ದರು. ಲಾವಣ್ಯವತಿ ಲತಾ. ಹುಣ್ಣಿಮೆಯ ಚಂದಿರನಂಥ ಅವಳ ನಗು ಮೋರೆಯನ್ನು ನೋಡಿದರೆ ಎಂಥ ದುಃಖಗ್ರಸ್ತನಿಗೂ ಆನಂದವಾಗುತ್ತಿತ್ತು. ಅಷ್ಟೇ ಜಾಣೆ ಲತಾ. ಎರಡು ವರ್ಷ ಮದುವೆ ಬಿಟ್ಟದ್ದಕ್ಕೆ ಶಶಿಕಾಂತನಿಗೆ ತಕ್ಕ ಪರಿಹಾರ ದೊರೆತಂತಾಯಿತೆಂದು ಮನಸ್ಸಿನಲ್ಲಿ ಅಂದುಕೊಂಡೆ. ವಿಚಾರವನ್ನು ಅವನು ಮುಂದಿಟ್ಟೆ.

"ಅಯ್ಯೋ! ನೌಕರಿ ಇಲ್ಲದೆ ಮದುವೆ ಹೇಗಾಗಲಿ?" ಎಂದ ಶಶಿಕಾಂತ. ಇಲ್ಲಿಗೆ ಮಾತು ಮುಗಿಯಿತು. ಲತೆಯನ್ನು ನನ್ನ ತಮ್ಮನು ಹಠ ಹಿಡಿದು ಮಾಡಿಕೊಂಡ.

ಈಗ ನೌಕರಿಗಳು ಬೇಕಾದಷ್ಟು ಸಿಗುತ್ತವೆ. ನಿಮ್ಮ ಕಚೇರಿಯ ಹಾದಿಯನ್ನು ತಪ್ಪಿ ನೀವು ಬೇರೊಂದು ಕಚೇರಿಯಲ್ಲಿ ಕಾಲಿಟ್ಟರೂ ನಿಮಗೆ ಅಲ್ಲಿಯೂ ನೌಕರಿ ಸಿಗುತ್ತದೆ. ಆದರೆ ಆಗ ಸ್ಥಿತಿ ಬೇರೆ ಇತ್ತು. ದೈವವಿದ್ದವರಿಗೆ ಮಾತ್ರ ನೌಕರಿ ಸಿಗುತ್ತಿತ್ತು. ಸುದೈವವಿದ್ದವರಿಗಷ್ಟೆ ಉತ್ತಮ ನೌಕರಿಗಳು ಸಿಗುತ್ತಿದ್ದವು. ಶಶಿಕಾಂತನು ಸುದೈವಿಯಲ್ಲವೆಂದು ಸಿದ್ಧವಾಯಿತು. ಎಷ್ಟೋ ದಿವಸಗಳವರೆಗೆ ಅವನು ನೌಕರಿ ಶೋಧಿಸಿದ. ಸಿಕ್ಕಲಿಲ್ಲ. ಕಡೆಗೆ ನಿರುಪಾಯನಾಗಿ ಮತ್ತೆ ಕಾಲೇಜಿಗೆ ಹೆಸರು ಹಚ್ಚಿ ಮುಂದೆಂದು ವರ್ಷಕ್ಕೆ ಎಂ. ಎ. ಆದ. ಅಲ್ಲಿ ಇಲ್ಲಿ ಎಲ್ಲಿ ಕಂಡಲ್ಲಿ ಅರ್ಜಿಗಳನ್ನು ಹಾಕಿದ. ಸಂದರ್ಶನ, ಮನೋಭಂಗ. ಎಷ್ಟೋ ಸಾರೆ ಸಂದರ್ಶನವಿಲ್ಲದೆ ಮನೋಭಂಗ. ಅಂತೂ ಇಂತೂ ಕಡೆಗೆ ಅವನಿಗೊಂದು ನೌಕರಿ ದೊರೆಯಿತು.

ಅವನಿಗೆ ನೌಕರಿದೊರೆತ ಸಂಗತಿ ನನಗೆ ನಮ್ಮ ಮಾವನ ಮನೆಯಲ್ಲಿ ತಿಳಿಯಿತು. ಆಗ ನಾನು ದೀಪಾವಳಿಗೆಂದು ಮಾವನಲ್ಲಿ ಹೋಗಿದ್ದೆ. ಆನಂದವೇ ಆನಂದ; ಹಿಡಿಸಲಾರದಷ್ಟು ಆನಂದ ಶಶಿನಾಂತನ ನೌಕರಿಯ ಸುದ್ದಿಯನ್ನು ಕೇಳಿದೊಡನೆ ಅವನ ಮದುವೆಯ ಹೋಳಿಗೆಯ ವಾಸನೆಯೂ ಮೂಗಿಗೆ ಬಡಿಯತೊಡಗಿತು. ಆಕೆಗೂ ಈ ವಿಷಯವನ್ನು ತಿಳಿಸಿದೆ. ನೋಡಿನೋಡುವಷ್ಟರಲ್ಲಿ ಎಲ್ಲರಿಗೂ ವೃತ್ತಾಂತ ಮುಟ್ಟಿತು. ಸುದ್ದಿಯನ್ನು ಕೇಳಿದೊಡನೆ ಅತ್ತೆಯವರು ಓಡುತ್ತ ನನ್ನೆಡೆಗೆ ಬಂದರು.

"ನಿಮ್ಮ ನಾದಿನಿಯ ಬಗ್ಗೆ ನಿಮಗೆ ಏನಾದರೂ ಚಿಂತೆಯಿದೆಯೆ?" ಎಂದು ನೇರವಾಗಿ ಕೇಳಿದರು. ಪೂರ್ವಾಪರ ಸಂದರ್ಭವಿಲ್ಲದೆ ಪ್ರಶ್ನೆಯ ಅರ್ಥವಾಗಲಿಲ್ಲವಾದ್ದರಿಂದ ನಾನು ಪ್ರಶ್ನಾರ್ಥಗಳ ಮುದ್ರೆಯಿಂದ ಅವರ ಕಡೆಗೆ ನೋಡಿದೆ.

"ನಲಿನಿಯನ್ನು ಶಶಿಕಾಂತಗೇಕೆ ತೋರಬಾರದು?" ಎಂದರು.

ನಲಿನಿಯೆಂದರೆ ನನ್ನಾಕೆಯ ತಂಗಿ. ಅದೇ ಮ್ಯಾಟ್ರಿಕ್ ಪರೀಕ್ಷೆಗೆ ಕುಳಿತಿದ್ದಳು. ಇದೇ ಅವಳ ಕಡೆಯ ಶಾಲೆಯ ಪರೀಕ್ಷೆ ಎಂದು ಮಾವನವರು ನಿರ್ಧರಿಸಿದ್ದರು. ನಲಿನಿ ಸಂಗೀತದಲ್ಲಿ ಬಹು ಪ್ರಾವೀಣ್ಯ ದೊರಕಿಸಿದ್ದಳು. ಸಂಗೀತದಲ್ಲಿ ಅವಳಿಗೆ ಸಿಕ್ಕ ಪದಕಗಳನ್ನು ಕರಗಿಸಿದರೆ ಈಗ ಅಮೇರಿಕೆಯ ಬೆಳ್ಳಿ—ಸಾಲವನ್ನು ಸಹಜವಾಗಿ ಹರಿಯಬಹುದು. ಶಶಿಕಾಂತನು ಕೊಳಲಿನಲ್ಲಿ ಪ್ರಾವೀಣ್ಯ ದೊರಕಿಸಿದ್ದ. ಇವರೀರ್ವರಿಗೂ ಬ್ರಹ್ಮನೇ ಗಂಟುಹಾಕಿರಬಹುದೆಂದು ಅನಿಸಿತು. ಕೂಡಲೆ ಅಂಚೆ ಕಚೇರಿಗೆ ಹೋಗಿ ಶಶಿಗೆ ಒಂದು ಕಾರ್ಡು ಬರೆದೆ. ಕಾರ್ಡಿನಲ್ಲಿ ಹೀಗೆ ಕಾಣಿಸಿದ್ದೆ: "ನೌಕರಿ ಸಿಕ್ಕದ್ದಕ್ಕಾಗಿ ಅಭಿನಂದಿಸುವೆ. ಅಧಿಕಾರಿಗಗಳು ನೌಕರಿಯ ವಿಷಯದಲ್ಲಿ ನಿನ್ನ ಮನೋಭಂಗ ಮಾಡುತ್ತ ಬಂದರು, ನೀನು ನಿನ್ನ ಮದುವೆಯ ವಿಷಯದಲ್ಲಿ ನನ್ನ ಮನೋಭಂಗ ಮಾಡುತ್ತ ನಡೆದಿರುವಿ. ನೌಕರಿ ಸಿಕ್ಕ ಬಳಿಕ ಮದುವೆಯೆಂದು ಆಶ್ವಾಸನ ಕೊಟ್ಟಿರುವಿ. ಇನ್ನು ನನ್ನ ಮಾತು ಮೀರಬೇಡ. ನಿನ್ನ ಸಲುವಾಗಿ ಹುಡಿಗೆಯನ್ನು ನೋಡಿಟ್ಟಿರುವೆನು. ನೀನು ನನ್ನಾಕೆಯನ್ನು ನೋಡಿರುವಿ. ಅವಳ ತಂಗಿ ಅವಳಂತೆಯೇ. ಕಾರ್ಬನ್ ಕಾಪಿ ಎಂದರೂ ನಡೆಯುವದು. ಉತ್ತರ ತಂತಿಸು."

ಶಶಿಕಾಂತನ ಕಡೆಯಿಂದ ತಂತಿ ಬರಲಿಲ್ಲ. ಪತ್ರ ಬಂದಿತು. ಅದು ಕೂಡ ಬಹಳ ತಡವಾಗಿ ಬಂದಿತು. "ನನ್ನ ನೌಕರಿ ತಾತ್ಪೂರ್ತಿಕವಿದೆ, ಕಾಯಂ ಅಲ್ಲ. ಪೂರ್ವಸೂಚನೆ ಕೊಟ್ಟು ಅಥವಾ ಕೊಡದೆ ಕೂಡ ಅವರು ನನ್ನನ್ನು ಕಿತ್ತೊಗೆಯಬಲ್ಲರು. ಆದ್ದರಿಂದ ನೌಕರಿ ಕಾಯಂ ಆಗುವ ವರೆಗೆ ದಯಮಾಡಿ ತಡೆಯಬೇಕು," ಎಂದು ಅವನ ಪತ್ರದಲ್ಲಿತ್ತು. ಈ ಪತ್ರ ಬರುವ ಮೊದಲೇ ನನ್ನ ನಾದಿನಿಯ ವಿವಾಹದ ನಿಶ್ಚಯವಾಗಿತ್ತು.

ಮುಂದೆ ಮುಂದೆ ಶಶಿಕಾಂತನ ಲಗ್ನದ ವಿಷಯವಾಗಿ ನನಗೆ ಆಸ್ಥೆ ಉಳಿಯಲಿಲ್ಲ. ಜಗತ್ತಿನಲ್ಲಿ ಒಬ್ಬನಾದರೂ ಪ್ರಾಪಂಚಿಕ ತೊಂದರೆಗಳಿಂದ ಅಲಿಪ್ತನಾಗಿ ಸುಖವುಣ್ಣಲಿ ಅನಿಸತೊಡಗಿತು. ಪೇಟೆಗೆ ಹೋಗುವದು ಗಿರಣಿಗೆ ಕಾಳು ಒಯ್ಯುವದು, ದವಾಖಾನೆಗೆ ಓಡುವದು, ನೀರು ಜಗ್ಗುವದು, ಪ್ರಸಂಗಬಿದ್ದಾಗ ಅಡುಗೆ ಮಾಡುವದು— ಏನಿದೆ ಪ್ರಾಪಂಚಿಕ ಜೀವನದಲ್ಲಿ? ಎಂದು ಮುಂತಾದ ವಿಚಾರಗಳು ದೃಢವಾಗಿದ್ದವು.

ನನ್ನ ಮೂರನೇ ಹುಡುಗನನ್ನು ಆದೇ ತೂಗಿ ಮಲಗಿಸಿದ್ದೆ. ಇನ್ನು ಆರಾಮ ಕುರ್ಚಿಯಲ್ಲಿ ಬಿದ್ದುಕೊಂಡು ಉಸ್ಸ ಎನ್ನುವವನಿದ್ದೆ. ಅಷ್ಟರಲ್ಲಿಯೇ ಶಶಿಕಾಂತನ ಪತ್ರ ಬಂದಿತು. ತನ್ನ ನೌಕರಿ ಕಾಯಂ ಆಯಿತೆಂದೂ ಇನ್ನು ಮದುವೆ ಮಾಡಿಕೊಳ್ಳುವೆನೆಂದೂ ಅವನು ಬರೆದಿದ್ದ. ಅವನ ಮನ ತಿರುಗಿಸಲು ಒಂದು ಪತ್ರ ಬರೆಯಬೇಕೆಂದು ನಿಶ್ಚಯಿಸಿದೆ. ಆದರೆ ನನ್ನ ಎರಡನೇ ಮಗನಿಗೆ ಕೋಡಗ್ಗೆಮ್ಮು. ವೇಳೆ ಸಿಕ್ಕಲಿಲ್ಲ. ಅಷ್ಟರಲ್ಲಿ ಶಶಿಕಾಂತನ ಕಡೆಯಿಂದ ಮತ್ತೊಂದು ಪತ್ರ ಬಂದಿತು. ತನಗಾಗಿ ಹೆಣ್ಣು ನೋಡಬೇಕೆಂದು ಅವನು ಬಿನ್ನವಿಸಿದ್ದ.

× × ×

ನನ್ನ ತಂದೆಯ ತಂಗಿಯ ಮಗಳು ಸುರೂಪಿಯಲ್ಲ. ಅವಳಿಗಾಗಿ ವರ ಹುಡುಕಿ ಹುಡುಕಿ ನನ್ನ ಸೋದರತ್ತೆಯ ಯಜಮಾನರು ಬೇಸತ್ತಿದ್ದರು. ಅವರೊಡನೆ ತಿರುಗಿದ ತಂದೆಯವರೂ ಅವರಷ್ಟೇ ಬೇಸತ್ತಿದ್ದರು. ಒಂದು ದಿವಸ ಅವರಿಬ್ಬರು ನಮ್ಮ ಮದುವೆಯ ಪದ್ಧತಿಯನ್ನು ಖಂಡಿಸುತ್ತ ಮತ್ತು ಪಾಶ್ಚಿಮಾತ್ಯ ಪ್ರೇಮ ವಿವಾಹಗಳನ್ನು ಕೊಂಡಾಡುತ್ತ ಕುಳಿತುಕೊಂಡಿದ್ದರು. ಅಕಸ್ಮಾತ್ತಾಗಿ ನಾನೂ ಅಲ್ಲಿಗೆ ಹೋಗಲಾಗಿ ಸ್ನೇಹಲತೆಗಾಗಿ ವರನನ್ನು ಹುಡುಕೆಂದು ನನಗೆ ಅಜ್ಞಾಪಿಸಿದರು. ತಂದೆಯವರು, ತಾವು ಚಿಕ್ಕವರಿದ್ದಾಗ ತಮ್ಮ ತಂದೆಯ ಅರ್ಧ ಪ್ರಾಪಂಚಿಕ ಭಾರವನ್ನು ತಾವೇ ಹೊತ್ತುದಾಗಿ ಹೇಳಿದರು.

ತತ್‌ಕ್ಷಣವೇ ನಾನು ಶಶಿಕಾಂತನ ಹೆಸರನ್ನು ಸೂಚಿಸಿ ಪಾರಬಹುದಾಗಿತ್ತು. ಆದರೆ ಸ್ವರ್ಗ ಬೇಕೆಂದು ಬಡ ಕುರಿಮರಿಯನ್ನು ಕೊಲ್ಲುವದರಲ್ಲೇನಿದೆ? ಸ್ನೇಹಲತೆಯಂಥ ಅಧಮ ಹಾಗೂ ಕುರೂಪ ಹುಡುಗಿಯನ್ನು ಶಶಿಗೆ ಗಂಟುಹಾಕಿ ಅವನ ಕುತ್ತಿಗೆ ಕೊಯ್ಯುವದರಲ್ಲಿ ಏನು ತಥ್ಯ? ಎಂದು ಸುಮ್ಮನಾದೆ. ಆದರೆ ಮುಂದೆರಡು ದಿವಸಗಳಲ್ಲಿ ಸಾಕ್ಷಾತ್ ಶಶಿಕಾಂತನೇ ನಮ್ಮ ಮನೆಗೆ ಬಂದುಬಿಟ್ಟ.

ಮದುವೆಯೊಂದನ್ನು ಬಿಟ್ಟು ಬೇರೆ ವಿಷಯಗಳ ಮೇಲೆ ಅವನೊಡನೆ ಚರ್ಚಿಸಲು ಯತ್ನಿಸಿದೆ. ಆದರೆ ಅವನಿಗೆ ಬೇರೆ ವಿಷಯಗಳೇ ತೋಚಲಿಲ್ಲ

"ನನ್ನ ಸಲುವಾಗಿ ಹುಡಿಗೆಯನ್ನು ಹುಡುಕುವ ಕೆಲಸ ನಿನ್ನದು," ಎಂದ.

"ಹೌ......ದು......ಹೌದು," ಎಂದೆ.

"ನಿಮ್ಮ ಕುಟುಂಬ ಆಲದ ಮರದಂತೆ ವಿಸ್ತೀರ್ಣವಾಗಿದೆ"

"ಹೌದು!"

"ಅದರಲ್ಲಿ ಮದುವೆಯ ಹುಡಿಗೆಯೊಬ್ಬಳೂ ಇಲ್ಲವೆ?"

"ಸ್ನೇಹಲತಾ ಇದ್ದಾಳೆ," ಎಂದು ಬಾಯಿಗೆ ಬಂತು. ನಾಲಿಗೆ ಕಚ್ಚಿಕೊಂಡೆ.

"ಸ್ನೇಹಲತಾ...?" ಎಂದ ಶಶಿಕಾಂತ.

"ಹೌದು ಸ್ನೇಹಲತಾ. ನನ್ನ ತಂದೆಯ ತಂಗಿಯ ಮಗಳು! ನನಗೇನಾಗಬೇಕೊ ಒಮ್ಮೆಲೆ ಹೇಳಲಾರೆ."

"ಸ್ನೇಹಲತಾ."

"......?......"

"ನಾನು ಅವಳನ್ನು ನೋಡಬಹುದೆ?"

"ನೋಡಲಾರೆ" ಎಂದು ಸ್ಪಷ್ಟವಾಗಿ ಹೇಳಿದೆ. ಅವಳ ಹೆಸರನ್ನು ಸೂಚಿಸಿದ ತಪ್ಪನ್ನು ಮುಚ್ಚಿಕೊಳ್ಳಲು ಸಂಧಿ ದೊರೆತದ್ದಕ್ಕೆ ಆನಂದವಾಯಿತು.

"ಯಾಕೆ?"

"ಅವಳು ಸದ್ಯ ಮುಹಮ್ಮದಪೂರದಲ್ಲಿದ್ದಾಳೆ."

"ನಾವೂ ಮುಹಮ್ಮದಪೂರಕ್ಕೆ ಹೋಗಬಹುದು!"

ನಾನು ನಿರುತ್ತರನಾದೆ. ಇಬ್ಬರೂ ಮುಹಮ್ಮದಪುರಕ್ಕೆ ಹೊರಟೆವು. ಶಶಿಕಾಂತನೇ ಟಿಕೇಟುತೆಗೆದ.

× × ×

ಶಶಿಕಾಂತನ ಸಲಹೆಯ ಮೇರೆಗೆ ನಾನು ನನ್ನ ಸೋದರತ್ತೆಗೆ ಅವನು ಸ್ನೇಹಲತೆಯನ್ನು ನೋಡಲು ಬಂದಿದ್ದಾನೆಂದು ಹೇಳಲಿಲ್ಲ. ಯಾವದೋ ಒಂದು ಕೆಲಸದ ನಿಮಿತ್ತ ಬಂದಿದ್ದೇವೆಂದು ಹೇಳಿದೆ. ಹಳೇ ಪದ್ಧತಿ ಬಿಟ್ಟು ಹೊಸ ಪದ್ಧತಿ ಅನುಸರಿಸುವದೇ ಶಶಿಯ ಉದ್ದೇಶ.

ಮುಹಮ್ಮದಪೂರದ ಮಲಪ್ರಭಾ ನದಿಯಲ್ಲಿ ಸ್ನಾನ ಮಾಡುತ್ತಿದ್ದೆವು. ನಾನು ನನ್ನ ಜೋಡು ಜನಿವಾರವನ್ನು ತಿಕ್ಕಿ ತೊಳೆಯುತ್ತಿದ್ದೆ. ಶಶಿಕಾಂತನು ಕುತೂಹಲದಿಂದ ಅದರ ಕಡೆಗೆ ನೋಡುತಿದ್ದ.

"ಜೋಡು ಜನಿವಾರವೆಂದರೆ ಹೊರಲಾರದ ಭಾರ," ಎಂದೆ.

"ನಿಮ್ಮ ಸ್ನೇಹಲತಾ ಉತ್ತಮ ಹುಡಿಗೆ" ಎಂದ. ಇತ್ತೀಚೆಗೆ ಅಸಂಬದ್ಧವಾಗಿ ಮಾತಾಡುವದೇ ಅವನ ರೂಢಿಯಾಗಿತ್ತು.

"ಸುರೂಪಿಯಲ್ಲ," ಎಂದು ಸ್ಪಷ್ಟವಾಗಿ ಹೇಳಿದೆ.

"ಹೃದಯ ಚೆನ್ನಾಗಿದೆ, ಸಾಕು," ಎಂದ. ನಾನು ವಿಚಾರದಲ್ಲಿ ಮಗ್ನನಾದೆ.

"ಅನುಪಮ ಕಂಠ" — ಶಶಿ.

"ಆದರೆ ಕೋಕಿಲೆ..."—ನಾನು.

"ನನ್ನನ್ನಾಗಲು ಅವಳು ಒಪ್ಪಬಹುದೆ? ಕೇಳು," ಎಂದ ಶಶಿ. ಅವನ ನಿರ್ಧಾರವೇ ನಮ್ಮ ವಾದಕ್ಕೆ ಪೂರ್ಣವಿರಾಮವಾಯಿತು.

ಶಶಿಕಾಂತನ ಸಲಹೆಯ ಮೇರೆಗೆ ಅವನು ಮುಹಮ್ಮದಪೂರದಿಂದ ಹೊರಟು ಹೋದ ಮೇಲೆ ನಾನು ಅಲ್ಲಿಯೇ ಇದ್ದು ಮದುವೆಯ ಮಾತುಕತೆಗಳನ್ನು ನಡೆಸಬೇಕೆಂದು ಗೊತ್ತಾಗಿತ್ತು. ಹೊಸ ಪದ್ಧತಿ! ಶಶಿ ಹೊರಟುಹೋದ. ನಾನು ಮುಹಮ್ಮದಪೂರದಲ್ಲಿಯೇ ಉಳಿದುಕೊಂಡೆ.

ಒಂದು ದಿನ ಇಳಿಹೊತ್ತಿನ ಸುಮಾರಿಗೆ ನಾನೂ ಸ್ನೇಹಲತಾ ಅವಳ ತಾಯಿ ಹರಟೆ ಹೊಡೆಯುತ್ತ ಕುಳಿತಿದ್ದೆವು. ನಮಗೆ ಕಾಣದಂತೆ ನೆರೆಮನೆಯ ವಿಧವೆಯೊಬ್ಬಳು ಅಲ್ಲಿಯೇ ಎಲ್ಲೊ ಕುಳಿತುಕೊಂಡು ಹೂಬತ್ತಿಗಳನ್ನು ಹೊಸೆಯುತ್ತಿದ್ದಳು. ನಾನು ಯುಕ್ತಿಯಿಂದ ಸ್ನೇಹಲತೆಯ ಮದುವೆಯ ಪ್ರಶ್ನೆಯನ್ನೆತ್ತಿ ಶಶಿಕಾಂತನ ಹೆಸರು ಸೂಚಿಸಿದೆ.

"ವಯಸ್ಸಾದಂತೆ ಕಾಣುತ್ತದೆ" ಎಂದಳು ವಿಧವೆ ಒಮ್ಮೆಲೆ ಪ್ರತ್ಯಕ್ಷಳಾಗಿ. ನಾನು ಅವಳ ಕಡೆಗೆ ಲಕ್ಷ್ಯ ಕೊಡಲಿಲ್ಲ.

"ಅವನ ಮೊದಲನೇ ಹೆಂಡತಿಗೇನು ಆಗಿತ್ತು?" ಎಂದು ಸ್ನೇಹಲತೆ ಪ್ರಶ್ನಿಸಿದಳು.

ಶಶಿಕಾಂತನ ಮದುವೆಯೇ ಆಗಿಲ್ಲ ಎಂಬುದು ಮುಂತಾಗಿ ಹೇಳುವವನಿದ್ದೆ. ಅಷ್ಟರಲ್ಲಿಯೇ ಕಾರ್ಮೋಡಗಳು ಮುಸುಕಿ ಕಗ್ಗತ್ತಲೆಯಾಗಿ ಒಮ್ಮೆಲೆ ಗುಡುಗಿನ ಅಬ್ಬರವು ಕೇಳಬಂದಂತಾಯಿತು.

"ನಾಚಿಗ್ಗೇಡಿ, ನಾಚಿಗ್ಗೇಡಿ. ನನ್ನ ಮಲ್ಲಿಗೆಯ ಹೂವನ್ನು ವಿಧುರನಿಗೆ ಕೊಡೆಂದು ಹೇಳುತ್ತಿದ್ದಿಯಾ? ಅವಳು ಮದುವೆಗಾಗಿ ರಸ್ತೆಗಳಲ್ಲಿ ಅಲೆಯುತ್ತಿದ್ದಾಳೆಂದು ತಿಳಿದಿರುವಿಯಾ?" ಎಂದು ಕೇಳಿಸತೊಡಗಿತು.

ಈ ಗುಡುಗಿನ ಧ್ವನಿ ಪ್ರತಿಧ್ವನಿಯಲ್ಲಿ ನಾನು ನನ್ನನ್ನೂ ಶಶಿಕಾಂತನನ್ನೂ ಅವನ ವಿವಾಹವನ್ನೂ ಮರೆತುಬಿಟ್ಟೆ.

ಚಂದಾದಾರರಲ್ಲಿ ವಿನಂತಿ

ಯಾವದೇ ಪತ್ರವ್ಯವಹಾರ ಮಾಡುವಾಗ್ಗೆ ನಿಮ್ಮ ಚಂದಾ ನಂಬರನ್ನು ಅಂದರೆ ನಾವು ನಿಮ್ಮ ವಿಳಾಸದ ಪ್ರಾರಂಭಕ್ಕೆ ಸೇರಿಸಿದ ನಂಬರನ್ನು ಬರೆದರೆ ಮಾತ್ರ ನಿಮ್ಮ ಪತ್ರಕ್ಕೆ ಲಕ್ಷಗೊಡಲಾಗುವದು. ಅವಧಿ ಮುಗಿಯುವ ಮುಂಚೆಯೇ ೧೫ ದಿನ ಪೂರ್ವದಲ್ಲಿ ವ್ಹಿ. ಪಿ. ಮಾಡಲಾಗುವದು. ವ್ಹಿ. ಪಿ. ಬೇಡಾದವರು ೧೫ ದಿನ ಮೊದಲೇ ನಮಗೆ ತಿಳಿಸಬೇಕು. ವ್ಹಿ. ಪಿ. ತಿರಸ್ಕರಿಸಿ ಹಿಂದುಗಡೆ M. O. ಮಾಡಿದರೆ ವ್ಹಿ. ಪಿ. ಖರ್ಚ ಮುರಿಯಲಾಗುವದು.

ವ್ಯವಸ್ಥಾಪಕ.



ಜ್ಯೋತಿಷಿ-ಕೃಷ್ಣಶಾಸ್ತ್ರಿ ಭಿಡೆ, ಭವಿಷ್ಯಕಥನ ಕಾರ್ಯಾಲಯ, ಖಡೇಬಜಾರ ಬೆಳಗಾವಿ

ಮೇ ೫ ರಿಂದ ೧೧ ರ ವರೆಗೆ

ಮೇಷ

ನಿಮ್ಮ ಮತ್ತು ಹೆಂಡತಿಯ ಪ್ರಕೃತಿ ಅಲ್ಪ ಸ್ವಲ್ಪ ಕೆಡುವದು. ಅಲ್ಲದೆ ಎಲ್ಲ ವಿಷಯದಲ್ಲಿ ಪ್ರಾಪಂಚಿಕ ತೊಂದರೆಯು ಧ್ಯಾನ ನೊಣದಲಿನಂತೆ ಇದ್ದೀತೆ. ಆದರೆ ಮಕ್ಕಳಲ್ಲಿ ಮಾತ್ರ ಕೆಲ ಉತ್ತಮ ಸಂಗತಿಗಳು. ಉದ್ಯೋಗದಲ್ಲಿ ಉತ್ಕರ್ಷ ಪ್ರಗತಿ, ಪ್ರಶಂಸೆಯು ಪ್ರತಿಷ್ಠೆ ಮತ್ತು ಲಾಭವೂ ಅಂದಾಜಿನಷ್ಟು ಮಿತ್ರರಲ್ಲಿ ಉತ್ಕರ್ಷ ಆದರೆ ಅವರ ಕಡೆ ನೀವು ಅರ್ಥದಿಂದ ವರ್ತಿಸುವದು ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಉಭಯ ಪಕ್ಷಗಳಲ್ಲಿ ಸಮಾನ ಸ್ಥಿತಿ. ಪರಸ್ತ್ರೀ ಬಗ್ಗೆ ಕೆಟ್ಟ ವಿಚಾರಗಳು. ಶುಭ ಕೃತ್ಯದಲ್ಲಿ ಆದರ ಹೆಚ್ಚು ವೆಚ್ಚ. ಪ್ರವಾಸಾದಿ ಕೆಲಸ ಪ್ರಿಕರದ್ದು. ಧಂದೆಗೆ ತೊಂದರೆಯುಂದಲೆ ಯಶಸ್ಸು. ತಾ. ೫, ೯, ೧೦, ೧೧ ಅನುಕೂಲ. ಅದರಂತೆ ಸೋಮವಾರ ಘಟಿಕಾ ೫೭ ಪಳಾ ೫೧ ಕ್ಕೆ (ಮಂಗಳವಾರ ಬೆಳಿಗ್ಗೆ) ಗುರು (ತಾ. ೬-೫-೪೭ ಬೆಳಗಿನ ಮುಂಜಾನೆ ೫ ತಾಸು ೧೩ ಮಿನಿಟಿಗೆ) ವಕ್ರಗತಿಯಿಂದ ವೃಶ್ಚಿಕದಿಂದ ತುಲಾ ರಾಶಿಗೆ ಬಂದು ಮುಂದೆ ತಾ. ೨೦-೯-೪೭ ರ ವರೆಗೆ ಆ ರಾಶಿಯಲ್ಲಿ ಉಳಿಯುವನು. ಅರ್ಥಾತ್ ಮೇಷ ರಾಶಿಗೆ ಅವನು ೭ ನೆಯವನಾಗುವದರಿಂದ ಸ್ತ್ರೀಸುಖ, ಮಿತ್ರಸುಖ, ಪಾಲುಗಾರರ ಧಂದೆ, ವಿವಾಹದ ದಾವೆ, ದೂರದ ಪ್ರವಾಸದಲ್ಲಿಯ ಯಶಸ್ಸು ಇವುಗಳಿಗೆ ಉತ್ತಮವಾಗುವವು.

ವೃಷಭ

ನಿಮ್ಮ ಮತ್ತು ಹೆಂಡತಿಯ ಪ್ರಕೃತಿ ಅನುಕೂಲ. ಆದರೆ ಮಕ್ಕಳಲ್ಲಿ ಮತ್ತು ಕುಟುಂಬದಲ್ಲಿಯ ಇತರ ಜನರಲ್ಲಿ ಕೆಲವರ ಪ್ರಕೃತಿ ಬಹಳ ಕೆಟ್ಟು ಪ್ರಾಪಂಚಿಕ ಗೊಂದಲವೇಳುವದು. ಉದ್ಯೋಗದಲ್ಲಿ ಪ್ರಗತಿ ಮತ್ತು ಪ್ರತಿಷ್ಠೆ ಅನುಕೂಲ, ಆದರೆ ಲಾಭದ ಕೊರತೆ. ಮನೆಯ ಗೊಂದಲದಲ್ಲಿ ಒಂದುವಾರ ಸಮಕ್ಷ ಹೋರಾಡಬೇಕಾದ ಸರತಿ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಯಶಸ್ಸು. ಆದರೆ ವೆಚ್ಚ ಮತ್ತು ತೊಂದರೆ ಬಹಳ. ಅಲ್ಲದೆ ಶತ್ರುವೂ ಹೆಚ್ಚು ತೋರಿಸಲ್ಲಿ. ಬಂಧು ವರ್ಗದವರಲ್ಲಿ ವಿರೋಧ. ಪ್ರವಾಸ ಮತ್ತು ಭೆಟ್ಟಿ ಪತ್ರವ್ಯವಹಾರಕ್ಕಾಗಿ ಹೆಚ್ಚು ಅನುಕೂಲ. ಲೋಕರಿಗೆ ವಿಶೇಷ ತೊಂದರೆ ತಾ. ೬, ೭, ೧೧ ಅನುಕೂಲ.

೬ ನೇ ತಾರೀಕಿಗೆ ಬರುವ ೬ ನೇ ಗುರುವಿನಿಂದ ಬಹಳ ರೋಗ ಮತ್ತು ಕಷ್ಟದ ಪ್ರಸಂಗ. ಸ್ವಜಾತಿಯವರೊಡನೆ ವಿರೋಧ. ಲಾಭ ಕಡಿಮೆ ವೆಚ್ಚ ಹೆಚ್ಚು. ಮಿತ್ರಯೋಗ ಆದರೆ ಅಧಿಕಾರದ ಹೆಚ್ಚಳ ಉತ್ತಮ ಪ್ರೌತಿಕ ಇವೆಲ್ಲಕಕ್ಕು ಅನುಕೂಲ.

ಮಿಥುನ

ನಿಮ್ಮ ಮತ್ತು ಹೆಂಡತಿಯ ಆರೋಗ್ಯ ಸರಿಯಾಗುತ್ತಿರುವದು. ಉಭಯತರಲ್ಲಿ ಮಕ್ಕಳ ಮತ್ತು ಉತ್ಕಟ ಪ್ರೇಮ. ಪ್ರಾಪಂಚಿಕ ಇತರ ವಿಷಯಗಳಲ್ಲಿಯು ಸಮಾಧಾನದ ಮಾತುಕತೆ. ಸ್ಥಾವರದಲ್ಲಿ ಹೊಸ ಹೆಚ್ಚಳ ದೊಡ್ಡ ದೊಡ್ಡ ಮುಂದಾಳುಗಳ ಸ್ತ್ರೀ ಪುರುಷರ ಭೆಟ್ಟಿ ಸಂದರ್ಶನಗಳು. ಉದ್ಯೋಗದಲ್ಲಿ ಯಥಾಯುತ ಬಹಳ. ಆದರೆ ಕೊನೆಯಲ್ಲಿ ಮನಸ್ಸಿನಂತೆ ಯಶಸ್ಸು ಮತ್ತು ಲಾಭ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಒಳ್ಳೆ ಯಶಸ್ಸು. ಧಂದೆಯವರಿಗಿಂತ ನೋಕರರಿಗೆ ಹೆಚ್ಚು ಅನುಕೂಲ. ಪ್ರವಾಸ ಭೆಟ್ಟಿ ಸಾಮಾನ್ಯ. ಆದರೆ ಪತ್ರವ್ಯವಹಾರ. ಉತ್ತಮ ಆದ್ಯಂತ್ಯಕ್ಕೆ ಹೆಚ್ಚು ಅನುಕೂಲ ತಾ. ೫, ೮, ೧೦ ಅನುಕೂಲ.

೬ ನೇ ತಾರೀಕಿಗೆ ಬರುವ ೫ ನೇ ಗುರು ದ್ರವ್ಯಲಾಭ ಸ್ತ್ರೀ ಸಂತತಿ ಮತ್ತು ಮಿತ್ರಸುಖ ಆರೋಗ್ಯ ಭಾಗ್ಯವೃದ್ಧಿ ಇವುಗಳಿಗೆ ಅನುಕೂಲ ಆದರೆ ತಂದೆ ಮತ್ತು ಅವರ ಬಂಧುಗಳು ಮತ್ತು ನಿಮ್ಮ ಶತ್ರುಗಳಿಗೆ ಕಷ್ಟದ್ದಾಗುವವು.

ಕರ್ಕ

ಪ್ರಕೃತಿ ಸಾಧಾರಣವೆ. ಕೌಟುಂಬಿಕ ಸುಖ ಬಹಳ. ಆದರೆ ಎಲ್ಲರಕ್ಕಿಯೂ ಹೆಂಡತಿಯದೆ ಮೇಲುಗೈ. ಸ್ಥಾವರ ಜಂಗಮ ಸಂಗ್ರಹಗಳಲ್ಲಿ ಹೆಚ್ಚಳ. ಉದ್ಯೋಗದಲ್ಲಿ ಪ್ರಗತಿ ಪ್ರತಿಷ್ಠೆ ಮತ್ತು ಲಾಭ ಉತ್ತಮ. ಮುಂದಾಳುಗಳ ಮತ್ತು ಮಂಡನೀಯ ವ್ಯಕ್ತಿಗಳ ಭೆಟ್ಟಿ ಸಂದರ್ಶನಗಳು. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಯಶಸ್ಸು. ಆದರೆ ಶತ್ರುಗಳಂತಹ ಜೋರು ಹೆಚ್ಚು. ಮಿತ್ರಸುಖ ಉತ್ತಮ. ಸಭೆಯಲ್ಲಿ ಪ್ರಶಂಸೆ ಪ್ರವಾಸಕ್ಕಿಂತ ಭೆಟ್ಟಿ ಮತ್ತು ಪತ್ರವ್ಯವಹಾರ ಹೆಚ್ಚು ಅನುಕೂಲ. ದುಷ್ಕೃತ್ಯಕ್ಕೆ ತೊಂದರೆ ಕಡಿಮೆ ತಾ. ೬, ೭, ೧೧ ಅನುಕೂಲ.

೬ ನೇ ತಾರೀಕಿಗೆ ಬರುವ ಗುರು ತಾಯಿ ತಂದೆಗಳಿಗೆ ಮಕ್ಕಳಿಗೆ ಕ್ಲೇಶ. ಶತ್ರುತನಗೆ ನಿಮ್ಮಕಿಂತ ಹೆಚ್ಚು ಅನುಕೂಲ. ಪಾರಮಾರ್ಥಿಕ ಮತ್ತು ಶುಭ ಕೃತ್ಯಗಳಿಗೆ ಅನುಕೂಲ. ಈ ಬಗೆಯ ಫಲ ಕೊಡುವನು.

ಸಿಂಹ

ಪ್ರಕೃತಿ ಉತ್ತಮ. ಆದರೆ ಸ್ತ್ರೀ ಸುಖದಲ್ಲಿ ಅಸಹೇತ್ತಿಕವಾಗಿ ವಿರಸ. ಉಳಿದ ವಿಷಯಗಳಲ್ಲಿ ಪ್ರಾಪಂಚಿಕ ಸುಖ ಸಮೃದ್ಧಿ. ಉದ್ಯೋಗದಲ್ಲಿ ಪ್ರಗತಿ ಮತ್ತು ಪ್ರತಿಷ್ಠೆ ಅಷ್ಟಕಷ್ಟೆ. ಆದರೆ ಲಾಭ ಉತ್ತಮ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಅಪ್ಯಶ ಯಶಸ್ಸು. ಲೋಕಸೇವೆಯು ಕೆಲ ಕಾರ್ಯಗಳು. ಪ್ರವಾಸಕ್ಕಿಂತ ಭೆಟ್ಟಿ ಮತ್ತು ಪತ್ರವ್ಯವಹಾರ ಅನುಕೂಲ ... ತಾ. ... ೯, ೧೦ ತೊಂದರೆಯುಂದಲೆ ಯಶಸ್ಸು.

೬ ನೇ ತಾರೀಕಿಗೆ ಬರುವ ೬ ನೇ ಗುರು ಬಂಧು ಪ್ರಾಣದವರಿಗೆ ಸುಖ. ಸುತಿಕರ ಪ್ರವಾಸ ಮಹತ್ವದ ರೇಖಿ ಕೆಲಸಗಳು ಸ್ತ್ರೀಸುಖ ಇವುಗಳಿಗೆ ಅನುಕೂಲ ಆದರೆ ಮಾಡಿದ ದುಡಿಯು ಜನರಿಗೆ ಮತ್ತು ನೋಕರ ಚಾಕರರಿಗೆ ಕ್ಲೇಶ ಕೊಡುವನು.

ಕನ್ಯಾ

ನಿಮ್ಮ ಮತ್ತು ಹೆಂಡತಿಯ ಪ್ರಕೃತಿಗೆ ಸ್ವಲ್ಪ ಕ್ಲೇಶ. ಆದರೆ ಉಳಿದ ವಿಷಯಗಳಲ್ಲಿ ಪ್ರಾಪಂಚಿಕ ಸುಖ ಅನುಕೂಲ. ಮಕ್ಕಳಲ್ಲಿ ಉನ್ನತಿ ಉದ್ಯೋಗದಲ್ಲಿ ಪ್ರತಿಷ್ಠೆ ಕಡಿಮೆ. ಪ್ರಗತಿ ಮತ್ತು ಲಾಭ ಉತ್ತಮ. ದುರ್ಲಭ ಕಾರ್ಯಗಳನ್ನು ಸಾಧ್ಯಮಾಡಿಕೊಳ್ಳುವ ಆಶೆ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಅನುಕೂಲತೆ. ಪತ್ರವ್ಯವಹಾರ ಮತ್ತು ಭೆಟ್ಟಿಗಿಂತ ಪ್ರವಾಸ ಸುಖಕರ. ಹಸ್ತಾಕ್ಕೆ ತೊಂದರೆಯುಂದಲೆ ಯಶಸ್ಸು. ತಾ. ೫, ೬, ೧೧ ಅನುಕೂಲ.

೬ ನೇ ತಾರೀಕಿಗೆ ಬರುವ ೨ ನೇ ಗುರು ಮಾನಸನ್ಮಾನ ವೈಭವ ಸಾಮಾಜಿಕ ಮತ್ತು ರಾಜಕೀಯ ವರ್ಚಸ್ಸು ಕೌಟುಂಬಿಕ ಸುಖ ಅಧಿಕಾರ ಹೆಚ್ಚಳ. ಇವುಗಳಿಗೆ ಅನುಕೂಲ. ಆದರೆ ಬಂಧುವರ್ಗದವರಿಗೆ ಹೆಂಡತಿ ಮತ್ತು ಗೆಳೆಯರಿಗೆ ಅನುಕೂಲ ಇಲ್ಲ.

ತುಲಾ

ಪ್ರಕೃತಿ ಮತ್ತು ಪ್ರಾಪಂಚಿಕ ಸುಖ ಸಾಧಾರಣವೆ. ಹೆಂಡತಿ ಮತ್ತು ಮಕ್ಕಳೊಡನೆ ವಿರೋಧ ಮಿತ್ರಸುಖ ಉತ್ತಮ. ಉದ್ಯೋಗದಲ್ಲಿ ಪ್ರಗತಿ ಪ್ರತಿಷ್ಠೆ ಮತ್ತು ಲಾಭ ಉತ್ತಮ. ವೆಚ್ಚವೂ ಇಮ್ಮಡಿ. ಪ್ರತಿಯೊಂದು ಕೆಲಸದಲ್ಲಿ ಅಯುಕ್ತ ಹೆಚ್ಚಿಗೆ ಸ್ವಲ್ಪಾದರೂ ಗೊಂದಲ. ಮಾತಿನಲ್ಲಿ ಅಪಕಟ ಬಹಳ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಉಭಯ ಪಕ್ಷಗಳಲ್ಲಿ ಹಾನಿ. ಪ್ರವಾಸಾದಿ ಕೆಲಸ ಮಧ್ಯಮದಲ್ಲಿ ಅನುಕೂಲ. ಸ್ತ್ರೀಗೆ ತೊಂದರೆ ಕಡಿಮೆ. ತಾ. ೫, ೬, ೮, ೯ ಅನುಕೂಲ.

೬ ನೇ ತಾರೀಕಿಗೆ ಬರುವ ೧ ನೇ ಗುರು ಪ್ರಕೃತಿಗೆ ಮಕ್ಕಳಿಗೆ ಮತ್ತು ಹೆಂಡತಿಯ ಸುಖಕ್ಕೆ ನಿಮ್ಮ ಮತ್ತು ಬಂಧುವರ್ಗ ಪರಿವಾರದವರ ಉತ್ಕರ್ಷಕ್ಕೆ ಬಹಳ ಉತ್ತಮ.

ವೃಶ್ಚಿಕ

ನಿಮ್ಮ ಮತ್ತು ಹೆಂಡತಿಯ ಪ್ರಕೃತಿಗೆ ಉತ್ತಮ. ಉಭಯತರಲ್ಲಿ ಒಳ್ಳೆ ಮನಸ್ವಾಸ್ಥ್ಯ. ಆದರೆ ಮಕ್ಕಳು ಹೊಸಗೆಟ್ಟ ಕೃತ್ಯಮಾಡುವರು. ಪ್ರಾಪಂಚಿಕ ವೆಚ್ಚ ವಿಪರೀತ. ಉದ್ಯೋಗದಲ್ಲಿ ಪ್ರಗತಿ ಮತ್ತು ಲಾಭ ಕಡಿಮೆಯೆ. ಆದರೆ ಪ್ರತಿಷ್ಠೆ ಉತ್ತಮ. ಕಲಾ ವಿಷಯಕ ಧಂದೆ ಇದ್ದರೆ ಹೆಚ್ಚು ಗೌರವ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಬಹಳ ಅನುಕೂಲತೆ. ಆದರೆ ನಿಮ್ಮ ಬುದ್ಧಿಯು ಕಷ್ಟದ್ದು. ಪ್ರವಾಸ ಮತ್ತು ಪತ್ರವ್ಯವಹಾರಕ್ಕಿಂತ ಭೆಟ್ಟಿ ಅನುಕೂಲ. ಅನುರಾಧೆಗೆ ಹೆಚ್ಚು ತೊಂದರೆ. ತಾ. ೭, ೮, ೯, ೧೦ ಅನುಕೂಲ.

೬ ನೇ ತಾರೀಕಿಗೆ ಬರುವ ೧೨ ನೇ ಗುರು ಮಕ್ಕಳ ವಿಷಯಕ ವಿವಂಚನೆ ಶುಭ ಕೃತ್ಯಗಳಲ್ಲಿಯಾದರೂ ಹೆಚ್ಚು ವೆಚ್ಚ ಸ್ಥಾವರದಲ್ಲಿ ಹೆಚ್ಚಳ ಆದರೆ ರೋಗ ಸಂಗ್ರಹದಲ್ಲಿ ಹಾನಿ. ಶತ್ರುಗಳಲ್ಲಿ ಹೆಚ್ಚು ಪಾರಮಾರ್ಥಿಕ ಮತ್ತು ದೊಡ್ಡಸ್ತನದ ಪ್ರೇಮ. ಇಂಥ ಫಲಗಳನ್ನು ಕೊಡುವನು.

ಧನು

ನಿಮ್ಮ ಮತ್ತು ಹೆಂಡತಿಯ ಪ್ರಕೃತಿ ಉತ್ತಮ. ಆದರೆ ಮಕ್ಕಳಲ್ಲಿ ಸ್ವಲ್ಪ ಕ್ಲೇಶ. ಉಳಿದೆಲ್ಲ ವಿಷಯಗಳಲ್ಲಿ ಪ್ರಾಪಂಚಿಕ ಸುಖ ಬಹಳ ಉತ್ತಮ. ಸ್ಥಾವರದಲ್ಲಿ ಸ್ವಲ್ಪ ಹೆಚ್ಚಳ. ಇಲ್ಲದಿದ್ದರೂ ಹಳೆಯ ಉತ್ಪನ್ನದಲ್ಲಿ ಹೆಚ್ಚಳವಾಗುವಂತೆ ಸುಧಾರಣೆ. ಉದ್ಯೋಗದಲ್ಲಿ ಪ್ರಗತಿ ಹೆಚ್ಚು ಮತ್ತು ಪ್ರತಿಷ್ಠೆ ಮತ್ತು ಲಾಭ ಇವೇ ಕ್ಕಿಂತ ಸ್ವಲ್ಪ ತಡ. ಆದರೆ ತುಂಬ ಪ್ರಮಾಣದಲ್ಲಿ ಆಗುವ ಯೋಗ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ವಿಪರೀತ ಅನುಕೂಲತೆ. ಮಿತ್ರ ಸುಖ ಉತ್ತಮ. ಅಲ್ಪ ಸ್ವಲ್ಪ ಅವಚಿತ ಲಾಭ. ಭೆಟ್ಟಿಗಿಂತ ಪ್ರವಾಸ ಪತ್ರವ್ಯವಹಾರ ಹೆಚ್ಚು ಅನುಕೂಲ. ಪೂರ್ವಾಷಾಢಕ್ಕೆ ತೊಂದರೆಯಿಂದ ಯಶಸ್ಸು. ತಾ. ೫, ೯, ೧೦, ೧೧ ಅನುಕೂಲ.

೬ ನೇ ತಾರೀಕಿಗೆ ಬರುವ ೧೧ ನೇ ಗುರು ಉದ್ಯೋಗದಲ್ಲಿ ವಿಪುಲ ಲಾಭ, ಮಿತ್ರ ಸುಖ ಉತ್ತಮ, ಸ್ತ್ರೀ ಸಂತತಿ ಮತ್ತು ಬಂಧುವರ್ಗದವರ ಉತ್ತಮ ಸುಖ ದೇಹಪುಷ್ಟಿ. ಆದರೆ ತಾಯಿ ನೋಕರ ಚಾಕರ ಇವರಿಗೆ ಕ್ಲೇಶ ಮುಂತಾದ ಫಲ ದೊರೆಯುವವು.

ಮಕರ

ಪ್ರಕೃತಿ ಮತ್ತು ಸ್ತ್ರೀ ಮತ್ತು ಪ್ರಾಪಂಚಿಕ ಸುಖ ಉತ್ತಮ. ಆದರೆ ಮಕ್ಕಳಿಂದ ಪುನಃಪ್ರಾಪ್ತ ಉತ್ತಮ. ಉದ್ಯೋಗದಲ್ಲಿ ಪ್ರಗತಿಗುಮಂತಹ ಕೆಲ ಸಂಗತಿಗಳು. ಪರಾವಲಂಬನದಿಂದ ಕೊಂಚ ಮತ್ತು ಪ್ರತಿಷ್ಠೆ ಸ್ವಲ್ಪ. ಆದರೆ ಲೋಕ ದೃಷ್ಟಿಯಿಂದ ಸ್ತುತಿ ಮತ್ತು ಲಾಭವೂ ತುಂಬ. ಕೆಲವೊಂದು ಮಹಾ ಕಾರಸ್ಥಾನದಲ್ಲಿ ಪ್ರಸಂಗನೀಯ ಯಶಸ್ಸು. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಬಹಳ ಅನುಕೂಲತೆ. ಪ್ರವಾಸ ಮತ್ತು ಭೆಟ್ಟಿಗಿಂತ ಪತ್ರವ್ಯವಹಾರ ಹೆಚ್ಚು ಅನುಕೂಲ. ಶ್ರವಣಕ್ಕೆ ತೊಂದರೆಯುಂದಲೆ ಯಶಸ್ಸು. ತಾ. ೫, ೬, ೭, ೧೧ ಅನುಕೂಲ.

ತಾ. ೬ ಕ್ಕೆ ಬರುವ ೧೦ನೇ ಗುರು ಸರ್ವಲೌಕಿಕ ಉದ್ಯೋಗದಲ್ಲಿ ಯಶ ವರ್ಚಸ್ಸು ಸ್ಥಾವರ ಜಂಗಮ ಸಂಗ್ರಹ ಮತ್ತು ಕೌಟುಂಬಿಕ ಉತ್ಕರ್ಷ ಇವುಗಳಿಗೆ ಉತ್ತಮ ಆದರೆ ಶತ್ರುಗಳಲ್ಲಿ ಹೆಚ್ಚಳ. ಬಂಧುವರ್ಗದವರಿಗೆ ಕ್ಲೇಶ. ಮಿತ್ರತ್ವದಲ್ಲಿ ವಿರೋಧ ವ್ಯಕ್ತಿಗಳಲ್ಲಿ ಸ್ಪರ್ಧೆ ಈ ಮೊದಲಾದ ಫಲಗಳು ದೊರೆಯುವವು.

ಕುಂಭ

ಸ್ವತಃದ ಪ್ರಕೃತಿ ಸಾಧಾರಣವೆ, ಆದರೆ ಹೆಂಡತಿ ಮತ್ತು ಮಕ್ಕಳ ಆರೋಗ್ಯ ಉತ್ತಮ. ಪ್ರಾಪಂಚಿಕ ಸುಖ ಸಾಧಾರಣ ಅನುಕೂಲ. ಆಪ್ತರು ಆಶ್ರಿತರು ಮತ್ತು ನೆರೆಯವರಿಂದ ದುಷ್ಕೃತ್ಯಗಳು. ಉದ್ಯೋಗದಲ್ಲಿ ಪ್ರಗತಿ ಮತ್ತು ಉತ್ತಮ. ಆದರೆ ಪ್ರತಿಷ್ಠೆಗೆ ಕೆಲವೊಂದು ಕುಂದು ಹತ್ತುವ ಸಂಭವ. ಮಿತ್ರಸುಖ ಉತ್ತಮ. ಸ್ಥಾವರದಲ್ಲಿ ಹೆಚ್ಚಳ. ಅದೂರದ ಮತ್ತು ಮಹತ್ವದ ಪ್ರವಾಸ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಪೂರ್ಣ ಅನುಕೂಲತೆ. ಭೆಟ್ಟಿ ಮತ್ತು ಪತ್ರವ್ಯವಹಾರವೂ ಮನಸಿನಂತೆ. ಶತತಾರಿಕೆಗೆ ಹೆಚ್ಚು ಅನುಕೂಲ. ತಾ. ೫, ೯, ೧೦ ಅನುಕೂಲ.

೬ ನೇ ತಾರೀಕಿಗೆ ಬರುವ ೯ ನೇ ಗುರು ಅಲ್ಪ ಸ್ವಲ್ಪ ಕೌಟುಂಬಿಕ ತೊಂದರೆ ಆದರೆ ಲಾಭ, ಭಾಗ್ಯ ಧಂದೆಯಲ್ಲಿ ಯಶಸ್ಸು. ನಿಮ್ಮ ಮತ್ತು ಮಕ್ಕಳ ಉನ್ನತಿ ಇವುಗಳಿಗೆ ಅನುಕೂಲ.

ಮೀನ

ಪ್ರಕೃತಿ ಉತ್ತಮ ಸ್ತ್ರೀ ಸುಖ ಅನುಕೂಲ, ಆದರೆ ಉಭಯತರೊಳಗೆ ಕುಟುಂಬದಲ್ಲಿಯ ಇತರರ ಬಹಳ ವಿರೋಧ. ಉದ್ಯೋಗದಲ್ಲಿ ಪ್ರಗತಿ ಮತ್ತು ಲಾಭ ಉತ್ತಮ, ಆದರೆ ಪ್ರತಿಷ್ಠೆ ಮಾತ್ರ ಧಂದೆಯವರಿಗಿಂತ ನೋಕರಿಯವರಿಗೆ ಹೆಚ್ಚು. ಸ್ಥಾವರದಲ್ಲಿ ಅನುಕೂಲ ಘಟನೆಗಳು. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಉಭಯ ಪಕ್ಷಗಳಲ್ಲಿ ಸಮಾನ ಸ್ಥಿತಿ. ಪ್ರವಾಸಾದಿ ಕೆಲಸಗಳಲ್ಲಿ ಬಹಳ ಸುಖ ಉತ್ತರಾ ಭಾದ್ರಪದಕ್ಕೆ ತೊಂದರೆ ಕಡಿಮೆ. ತಾ. ೬, ೮, ೯, ೧೦ ಅನುಕೂಲ.

ತಾ. ೬ ಕ್ಕೆ ಬರುವ ೮ ನೇ ಗುರು ನಿಮ್ಮ ಬಂಧುಗಳ ಮತ್ತು ಮಕ್ಕಳ ಪ್ರಕೃತಿಗೆ ಅಲ್ಪಸ್ವಲ್ಪ ತೊಂದರೆ ಕೊಡುವದು ಆದರೆ ಲಾಭಕ್ಕೆ ಕೌಟುಂಬಿಕ ಸುಖಕ್ಕೆ ಪುಂಗಳ ಮತ್ತು ಪಾರಮಾರ್ಥಿಕ ಕಾರ್ಯಕ್ಕೆ ಬಹಳ ಅನುಕೂಲ.

ಏಶಿಯಾ ಸಮ್ಮೇಲನ

[೧ ನೇ ಪುಟದಿಂದ ಮುಂದುವರಿದುದು]

೫

ಸಮ್ಮೇಳನವು ಯಶಸ್ವಿಯಾಗಿ ಕೊನೆಗೊಂಡಿತು. ಶ್ರೀಮತಿ ಸರೋಜಿನಿದೇವಿಯವರ ಅಧ್ಯಕ್ಷ ಭಾಷಣ, ಪಂಡಿತ ಜವಾಹರಲಾಲರ, ಸಮ್ಮೇಳನದ ಸ್ವರೂಪ ನಿರೂಪಣವಿಸ್ತರಣ, ಅಯಾ ಪ್ರತಿನಿಧಿ ಮಹಶೀಯರೆಲ್ಲರ ಸ್ವತ್ವಾಭಿಪ್ರಾಯದ ಅನಂದ ನಿವೇದನಗಳೆಲ್ಲ ಒಂದರೊಡನೊಂದು ಸಲುವಳಿಯಾಗಿ ಸೇರಿ, ಸಮ್ಮೇಳನವೆಂದರೆ ಪ್ರಪಂಚಕ್ಕೊಪ್ಪಿಸಿದ ಅಣಿಮುತ್ತಿನ ಮಾಲೆಯಾಯಿತು. ಕಡೆಯ ಮಹಾಸ್ವರ ಮಾತೆಂದರೆ ಆ ಹಾರದ ತುದಿಯ ರತ್ನ ಪದಕ ಎನ್ನಬೇಕು. ಏಶ್ಯಾ ಖಂಡದೊಳಗೆ ಒಟ್ಟಾಗಿ ಮುಂದೆ ಕೈಕೊಳ್ಳಲಿರುವ ಸಾಂಸ್ಕೃತಿಕ--ಸಾಮಾಜಿಕ-- ಧಾರ್ಮಿಕ--ಆರ್ಥಿಕಾಭಿವೃದ್ಧಿಗಳ ವಿಷಯವಾಗಿ ಮಥಿಸಿ ನಿರ್ಧರಿಸಲಿಕ್ಕೆಂದು ಬೇರೆ ಬೇರೆ ಸಮಿತಿಗಳು ರೂಪಿಸಲ್ಪಟ್ಟದ್ದುವು. ಅವುಗಳ ನಿರ್ಧಾರವೂ ಕಾರ್ಯಕಾರಿತ್ವವೂ ಮುಂದೆ ಸಕಾಲದಲ್ಲಿ ಪ್ರಕಟವಾಗುವವು.

ಈ ಸಂದರ್ಭದಲ್ಲಿ ಈಯೊಂದು ಮಾತನಾಡಲೆ ಬೇಕಾಗುತ್ತಿದೆ :— ಹಿಂದಿನ ಒಂದನೆಯ ಯುದ್ಧಾಂತದಲ್ಲಿ ಪ್ರಧಾನವಾದ ಪಾಶ್ಚಾತ್ಯ ಮಿತ್ರರಾಷ್ಟ್ರಗಳೆಲ್ಲ ಸೇರಿದುವು. ಅಂದಿನ ಜರ್ಮನಿಯದು ಮಾತ್ರವೇ ಅಲ್ಲ, ತಮ್ಮೆಲ್ಲರ ಅವಿಸಯೂಂಕಗಳೂ ಇಷ್ಟಷ್ಟಾಗಿ ಹರಿಗೂಡಿ ಆ ಮಹಾಯುದ್ಧ ಹಳ್ಳವಾಗಿ ಹರಿಯಿತು, ಎಂದು ಕೊರಿಯೇ ಮಿತ್ರರಾಷ್ಟ್ರಗಳ ನಾಯಕರಾಗಿದ್ದ ಅಮೇರಿಕನ ಪ್ರಸಿಡೆಂಟ್, ಶ್ರೀ ವಿಲ್ಸನ್‌ರವರ ಬೋಧನೆಯಂತೆ ರಾಷ್ಟ್ರಸಂಘ (League o Nations) ಎಂಬ ಮಹಾಸಂಸ್ಥೆಯೊಂದು ಬುದುಬುದಾಕಾರವಾಗಿ ಉದ್ಭವಿಸಿತು. ಮುಂದೆ ಪ್ರಪಂಚದೊಳಗೆ ಯಾವ ಬಗೆಯ ಕಚ್ಚಾಟಗಳೂ ಆಗಬಾರದೆಂದು ನಿರ್ಧಾರವೂ ಆಯಿತು. ಆಗ, ಆ ಸಂಸ್ಥೆಯ ಗುರಿಯಲ್ಲೇ ಏಕಾಗ್ರ ದೃಷ್ಟಿಯಿಟ್ಟ ಅಬಲರಾಷ್ಟ್ರಗಳೆಲ್ಲವೂ 'ಇನ್ನು ಬದುಕಿದೆವು' ಎಂದು ಮರೆದೊರದರಗಿದುವು. ಅದ ಪರಿಣಾಮವೇನು? ಕಡೆಗೆ ದ್ವಿತೀಯ ಮಹಾಯುದ್ಧದ ಭೈರವಾಡಂಬರ! ರಾಷ್ಟ್ರಸಂಘ ಎಂಬುದು ನಮ್ಮ ರತ್ನಾಕರ ವರ್ಣಿ ಹಾಡಿದಂತೆ ಪುಸ್ತಕದ ಬದನೆಕಾಯಿಂತಹದು ಎಂಬಂತಾಯಿತು. ಸಣ್ಣ ಮೀನುಗಳು ದೊಡ್ಡವುಗಳಿಗಾಗಿ ತಯಾರಿಸಿದ ಭಕ್ಷ್ಯಭೋಜ್ಯಗಳಾದುವು. ಎರಡನೆ ಯುದ್ಧವು ಜಯಾಂತವಾಗಿ ಪರಿಣಮಿಸಿ ಎರಡು ವರ್ಷಗಳಾದವು. ಆದರೂ ಪ್ರಪಂಚದ ಆರ್ಥಿಕ ಸ್ಥಿತಿಗತಿಗಳು, ದಿನಕ್ಕಿಂತ ದಿನಕ್ಕೆ ಕೀಳುಕೀಳಾಗಿ ಜರಿದು ಹೋಗುತ್ತಿವೆ. ಈ ಅನರ್ಥ ಪರಂಪರೆಯನ್ನು ಬಗೆಹರಿಸಲಿಕ್ಕೆಂದು, ಆ ಕೀರ್ತಿಶೇಷ ರಾಷ್ಟ್ರಸಂಘಕ್ಕೆ ಪ್ರತಿಯಾಗಿ ಸಂಯುಕ್ತ ರಾಷ್ಟ್ರಸಂಘವು ತಲೆದೋರಿದೆ. ಇದು ಆಗಾಗ ಪ್ರತಿನಿಧಿ ಸಮ್ಮೇಳನಗಳನ್ನು ಜರುಗಿಸುತ್ತಲೇ ಇದ್ದರೂ ಲೋಕಶಾಂತತೆಯ ಒಳ್ಳಟ್ಟು ಇನ್ನೂ ಸಿದ್ಧವಾಗಿಲ್ಲ. ಆಗುವದಾದರೂ ಹೇಗೆ? ಆ ಒಳ್ಳಟ್ಟು ಎಂಬುದರೊಳಗೇ ಇಳ್ಳಟ್ಟು—ಮುಳ್ಳಟ್ಟು—ಬಲುಳಟ್ಟುಗಳಿರುವವು. ಹಿಂದಿನ ರಾಷ್ಟ್ರಸಂಘದೊಳಗೆ ಕೆಲಗಾಲವಾದರೂ ಒಳ್ಳಟ್ಟು ಇದ್ದಂತೆ ತೋರಿದರೆ, ಈ ಮಿತ್ರಸಂಘದಲ್ಲಿ ಮೆಟ್ಟುಮೆಟ್ಟಿಗೆ ಬಿಕ್ಕಟ್ಟೇ ಹೊಳೆಯುತ್ತದೆ. ಅದರಿಂದಲೆ ಜವಾಹರರು ಸರಕಾರದ ಅಧಿಕಾರಕ್ಕೇರಿದೊಡನೆ ಅವರು ಈ ಏಶ್ಯನ್—ಸಮ್ಮೇಳನದ ಏಣಿಕೆಯನ್ನೆಸಗಿ ಹೀಗೆ ಕಾರ್ಯರೂಪವಾಗಿ ಕೈಗೂಡುವಂತೆ ಯುಕ್ತಿಸಿರಬೇಕು. ಏಕಸಂಸ್ಕೃತಿಗೆ ಬಾಗಬಹುದಾದ ಈ ಪೌರ್ವಾತ್ಯ ರಾಷ್ಟ್ರಗಳಾದರೂ ಕೂಡಿ ಕೈಗೊಟ್ಟಲ್ಲಿ ಪ್ರಪಂಚ—ಶಾಂತಿ ವೃದ್ಧಿಗಳಿಗೆ ಸಾಧಕವಾಗಬಹುದು, ಈ ಎಣಿಕೆ ಪಾಶ್ಚಾತ್ಯ ರಾಷ್ಟ್ರಗಳೆದೆಯಲ್ಲಿ ಅಚ್ಚೊತ್ತಲಿ ಎಂದು ಪ್ರಾರ್ಥಿಸುತ್ತೇನೆ.

ಈ ಪತ್ರಿಕೆಯು ಹುಬ್ಬಳ್ಳಿಯ ಸಂಯುಕ್ತ-ಕರ್ನಾಟಕ ಮುದ್ರಣಾಲಯದಲ್ಲಿ "ಲೋಕಶಿಕ್ಷಣ ಟ್ರಸ್ಟ"ದ ಪರವಾಗಿ ಹ. ರಾ. ಮೋಹರೆಯವರಿಂದ ಮುದ್ರಿತವಾಗಿ ಪ್ರಕಟವಾಯಿತು.